
ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-06 • ಸಂಚಿಕೆ-12 • ಸೆಪ್ಟೆಂಬರ್ 2023





## ಚಂದ್ರನ ಮೇಲೆ ಭಾರತದ ವಿಕ್ರಮ







Downloaded From:www.kpscvaani.com



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಾವೇರಿ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿನ ಅವ್ಯವಸ್ಥೆ ಕುರಿತು ಪರಿಶೀಲನೆ ನಡೆಸಿ, ರೋಗಿಗಳಿಂದ ಮಾಹಿತಿ ಪಡೆಯುತ್ತಿರುವುದು. ಈ ಸಂದರ್ಭದಲ್ಲಿ ಕೃಷಿ ಸಚಿವರಾದ ಚಲುವರಾಯಸ್ವಾಮಿ, ಕಾನೂನು ಸಚಿವರಾದ ಎಚ್.ಕೆ.ಪಾಟೀಲ್ ಹಾಗೂ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು  ಉಡುಪಿ ಜಿಲ್ಲೆಗೆ ಭೇಟಿ ನೀಡಿದಾಗ ಪಡುಬಿದ್ರಿಯಲ್ಲಿ ಕಡಲ್ ಕೊರೆತವನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಬಿವೃದ್ಧಿ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಉಪಸ್ಥಿತರಿದ್ದರು

Downloaded From:www.kpscvaani.com




ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-06 • ಸಂಚಿಕೆ-12 • ಸೆಪ್ಟೆಂಬರ್ 2023





**06** ಕರ್ನಾಟಕದ ಸರ್ವಾಂಗೀಣ ಪ್ರಗತಿಗಾಗಿ 'ಕರ್ನಾಟಕ ಅಭಿವೃದ್ಧಿ ಮಾದರಿ'
• ನಟರಾಜು. ವಿ

**10** ಚಂದ್ರನ ಮೇಲೆ ಭಾರತದ ವಿಕ್ರಮ
• ನಾಗೇಶ ಹೆಗಡೆ

**13** ಶಕ್ತಿ ಯೋಜನೆ: ಸ್ತ್ರೀಯರ ಪಾಲಿಗೆ ಸಂಜೀವಿನಿ
• ಯಗಟಿ ಮೋಹನ್

**17** ಕರುನಾಡ ಪ್ರವಾಸೋದ್ಯಮಕ್ಕೆ ಮತ್ತಷ್ಟು ಜೀವಚೈತನ್ಯ
• ಉಮೇಶ್ ಕೊಲಿಗೆರೆ

**22** ಗ್ರಾಮೀಣ ಮಕ್ಕಳಿಗೆ ವಿಜ್ಞಾನದಲ್ಲಿ ಆಸಕ್ತಿ ಹುಟ್ಟುಹಾಕುತ್ತಿರುವ ಶಿಕ್ಷಕ
• ಸಂಧ್ಯಾ ಸೊರಬ

**24** ಬಸವನಬಾಗೇವಾಡಿ ತಾಲೂಕು ಆಸ್ಪತ್ರೆಗೆ ರಾಜ್ಯಮಟ್ಟದ ಕಾಯಕಲ್ಪ ಪ್ರಶಸ್ತಿ
• ಗುರುರಾಜ.ಕನ್ನೂರ





**26** ಫಲಪುಷ್ಪ ಪ್ರದರ್ಶನದಲ್ಲಿ ಕಳೆಕಟ್ಟಿದ ವಿಧಾನಸೌಧದ ಪುಷ್ಪ ಮಾದರಿ

**28** ಅಂತಾರಾಷ್ಟ್ರೀಯ ಐರನ್ ಮ್ಯಾನ್
• ಸುರೇಶ ಹಿರೇಮಠ





**30** ಸಿರಿಧಾನ್ಯ ಬೆಳಗಾರರಿಗೆ ಉತ್ತೇಜನ ನೀಡುವ ಯೋಜನೆ: 'ರೈತಸಿರಿ'
• ಕೆ.ಎಸ್. ರಾಜಮನ್ನಾರ್

**33** ಸೂರ್ಯ ನಗರಿಯಲ್ಲಿ "ಗೃಹ ಜ್ಯೋತಿ" ಯೋಜನೆಗೆ ಚಾಲನೆ
• ರವಿ ಮಿರಸ್ಕರ್

**36** ಅವಿವಾಹಿತೆಗೂ ಗರ್ಭಪಾತದ ಹಕ್ಕು!
• ಡಾ. ಡಿ. ಎಂ. ಹೆಗಡೆ

**38** ಪರಿಸರ ಸ್ನೇಹಿ ಗಣೇಶ ಮೂರ್ತಿಗಳು
• ಕಿಶನರಾವ್ ಕುಲಕರ್ಣಿ

**42** ಆಡಿಸಿದಳೆಶೋದಾ ಜಗದೋದ್ಧಾರನ... ಈ ಕೃತಿಯನ್ನು ಪುರಂದರದಾಸರು ರಚಿಸಿದ್ದು ಇಲ್ಲೇ !
• ಡಿ.ಪಿ. ಮುರಳೀಧರ್

**45** ವರ್ಷ ಪೂರ್ತಿ ಹಾಸ್ಯ ಚಕ್ರವರ್ತಿಯ ಶತಮಾನೋತ್ಸವ ಆಚರಣೆ
• ಡಾ.ಕೆ. ಪುಟ್ಟಸ್ವಾಮಿ

**47** ಚಾರ್ಲ್ಸ್ ಮಾರ್ಕ್ ಕೊರೆಯಾ: ದೇಶದ ಒಬ್ಬ ಅದ್ವಿತೀಯ ವಾಸ್ತು ಶಿಲ್ಪಿ
• ಕೆ.ಎಸ್.ಸೋಮೇಶ್ವರ

**50** ಪದಬಂಧ-45



ಪ್ರಧಾನ ಸಂಪಾದಕರು
ಹೇಮಂತ್ ಎಂ ನಿಂಬಾಳ್ಕರ್, ಐ.ಪಿ.ಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಪಲ್ಲವಿ ಹೊನ್ನಾಪುರ
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080 22028023
email : varthajanapada@yahoo.co.in
https://dipr.karnataka.gov.in

ಮುದ್ರಕರು
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು-50



ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ಮುಖ್ಯಮಂತ್ರಿ ಅವರು ಐದು ಗ್ಯಾರಂಟಿಗಳಿಗೆ ಆಯವ್ಯಯದಲ್ಲಿ ಅನುದಾನವನ್ನು ನಿಗದಿಪಡಿಸುವ ಜೊತೆಗೆ ಅಭಿವೃದ್ಧಿ ಯೋಜನೆಗಳಿಗೂ ಅನುದಾನವನ್ನು ಹೊಂದಿಸುವ ಮೂಲಕ ಜನಮೆಚ್ಚುಗೆಯನ್ನು ಗಳಿಸಿದ್ದಾರೆ. ಆಗಸ್ಟ್ ಸಂಚಿಕೆಯಲ್ಲಿ ಪ್ರಧಾನ ಸಂಪಾದಕರು ಆಯವ್ಯಯದ ಮೇಲೆ ಸಂಕ್ಷಿಪ್ತವಾಗಿ ಬೆಳಕು ಚೆಲ್ಲಿದ್ದಾರೆ. ಅವರು ಹೇಳಿರುವಂತೆ ಸಿದ್ದರಾಮಯ್ಯ ಅವರು ಮಹಿಳೆಯರು, ಶ್ರಮಿಕರು, ಹಿಂದುಳಿದ ವರ್ಗದವರು ಸೇರಿದಂತೆ ಎಲ್ಲಾ ವರ್ಗದ ಬಡ ಜನರಿಗೆ ಭದ್ರತೆಯನ್ನು ಒದಗಿಸುತ್ತಾ ಬಂದಿದ್ದಾರೆ.

**–ತಿಮ್ಮಾಪುರ, ಯಾದಗಿರಿ**

* * *

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅತ್ಯಂತ ಸುದೀರ್ಘ ಕಾಲ ಕರ್ನಾಟಕ ರಾಜ್ಯದ ಆಯವ್ಯಯ ಪತ್ರವನ್ನು ಮಂಡಿಸಿರುವ ಕುರಿತ ಲೇಖನವನ್ನು
ಶಫಿ. ಎಸ್ ಅವರು ಅತ್ಯುತ್ತಮವಾಗಿ ಬರೆದಿದ್ದಾರೆ. ಸರ್ಕಾರಿ ಪುಸ್ತಕದಲ್ಲಿ ಇಂತಹ ಚರಿತ್ರಾರ್ಹ ದಾಖಲೆಯನ್ನು ಅವಶ್ಯಕವಾಗಿ ದಾಖಲಿಸುವುದು ಒಳಿತು.

ಲೇಖನವು ಉತ್ತಮ ಮಾಹಿತಿಯನ್ನು ನೀಡಿದೆಯಲ್ಲದೆ ಸಿದ್ದರಾಮಯ್ಯ ಅವರು ಬಹಳ ವರ್ಷಗಳ ಹಿಂದೆ ಬಜೆಟ್ ಅನ್ನು ಮಂಡಿಸುತ್ತಿರುವ ಹಳೆಯ ಛಾಯಾಚಿತ್ರಗಳನ್ನು ಲೇಖನಕ್ಕೆ ಬಳಸಿರುವುದು ಇನ್ನೂ ಹೆಚ್ಚಿನ ಕಳೆಯನ್ನು ತಂದುಕೊಟ್ಟಿದೆ. ಇಂತಹ ಲೇಖನವನ್ನು ಪ್ರಕಟಿಸಿದಕ್ಕಾಗಿ ಸಂಪಾದಕೀಯ ಮಂಡಳಿಗೆ ಅಭಿನಂದನೆಗಳು.

**–ಮೀನಾ, ಮೈಸೂರು**

* * *


ಕೇಶವ ಜಿ ಝಿಂಗಾಡೆ ಅವರ 'ಮಾದರಿ ಬಜೆಟ್' ಲೇಖನವು ಬಜೆಟ್‌ನ ಸಂಪೂರ್ಣ ಮಾಹಿತಿ ಒದಗಿಸಿತು. ಐದೂ ಗ್ಯಾರಂಟಿಗಳನ್ನು ನೀಡಿ ಇದನ್ನು ಸರಿದೂಗಿಸಿಕೊಂಡು ಅಭಿವೃದ್ಧಿ ಪರ ಬಜೆಟ್ ಮಂಡನೆ, ಸಿದ್ದರಾಮಯ್ಯನವರ ದೂರದೃಷ್ಟಿಗೆ ಹಿಡಿದ ಕೈಗನ್ನಡಿ. ಹಾಗೆಯೇ ಶಫಿ.ಎಸ್ ಅವರು 'ಆಯವ್ಯಯದಲ್ಲಿ ಮುಖ್ಯಮಂತ್ರಿಗಳ ಚರಿತ್ರಾರ್ಹ ದಾಖಲೆ' ಲೇಖನ ಓದಿ ಸೋಜಿಗವೂ ಆಯಿತು. ತಮ್ಮ ಒಟ್ಟು ಹದಿನಾಲ್ಕು ದಾಖಲೆಯ ಬಜೆಟ್‌ನಲ್ಲಿ ಒಂದೊಂದರಲ್ಲೂ ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಂಡು ನುಡಿದಂತೆ ನಡೆದ ಏಕೈಕ ಮುಖ್ಯಮಂತ್ರಿ ಎನಿಸಿಕೊಂಡ ಸಿದ್ದರಾಮಯ್ಯನವರ ಕಾರ್ಯವೈಖರಿ ಅವಿಸ್ಮರಣೀಯ.

**–ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ**

* * *

ಆಗಸ್ಟ್ 2023ರ ಸಂಚಿಕೆಯ ಲೇಖನ ಕರ್ನಾಟಕ ಅಭಿವೃದ್ಧಿಯ ಬಜೆಟ್ ಜನಸಾಮಾನ್ಯರಿಗೆ ಪ್ರಯೋಜನವಾಗಿದೆ. ಶಕ್ತಿ ಯೋಜನೆಯು ಸ್ತ್ರೀಯರಿಗೆ ತುಂಬಾ ಉಪಯುಕ್ತವಾಗಿದೆ. ರಾಜ್ಯದ ಪ್ರಥಮ ಪ್ರಜೆ, ಘನತೆವೆತ್ತ ರಾಜ್ಯಪಾಲರ ಜಂಟಿ ಅಧಿವೇಶನದ ಸಾರಾಂಶ ಓದುಗರಿಗೆ ತುಂಬಾ ಖುಷಿ ನೀಡಿದೆ. ಆಯವ್ಯಯ ಮಂಡನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಇತಿಹಾಸ ದಾಖಲೆ ಬರೆದ ಲೇಖನ ಉತ್ತಮವಾಗಿದೆ. ಮಾನ್ಯ ರಾಷ್ಟ್ರಪತಿಗಳು ಬುಡಕಟ್ಟು ಜನರಲ್ಲಿ ಹೊಸ ಬರವಸೆ ಮೂಡಿಸಿದ ಭಾಷಣ ಮಹಿಳೆಯರಿಗೆ ಅದರಲ್ಲೂ ಬುಡಕಟ್ಟು ಜನಾಂಗದ ಅಭಿವೃದ್ಧಿಗೆ ಪೂರಕವಾಗಿದೆ.

ಅನ್ನಭಾಗ್ಯ ಲೇಖನ ಕೋಟಿ ಕೋಟಿ ಜನತೆಗೆ ಉಪಯೋಗವಾಗಿದೆ. ಗೃಹಜ್ಯೋತಿ, ಗೃಹಲಕ್ಷ್ಮಿ ಯೋಜನೆಗಳ ಬಗ್ಗೆ ಇರುವ ಲೇಖನಗಳು ಉಪಕಾರಿಯಾಗಿವೆ. ಉತ್ತಮ ಶಾಸಕರ ಪುರಸ್ಕಾರ ಲೇಖನ ಮತ್ತು ರಾಜ್ಯದ ಲಂಬಾಣಿ ಜನಾಂಗದ ಕಸೂತಿ ಕಲೆ ಗಿನ್ನಿಸ್ ದಾಖಲೆ ಬರೆದಿದೆ. ಇಂತಹ ಉಪಯುಕ್ತ ಲೇಖನ ಪ್ರಕಟಿಸಿರುವ ಪತ್ರಿಕೆಗೆ ಧನ್ಯವಾದಗಳು.




**–ಡಾ.ಬಿ.ಎ.ರಾಜಪ್ಪ ನಿಬಗೂರು, ದಾವಣಗೆರೆ**

* * *

ಪೇಟೆಂಟ್ ದೊರಕಿರುವ ತುಮಕೂರು ಜಿಲ್ಲೆಯ ಸಿದ್ದುಹಲಸಿನ ತಳಿಯನ್ನು ಬೆಳೆಸುತ್ತಿರುವ ರೈತ ಪರಮೇಶ್ ಅವರ ಕುರಿತು ಬರೆದಿರುವ ಲೇಖನ ಓದಿ ಹೆಮ್ಮೆ ಆಯಿತು. ಅಲ್ಲದೆ ಸಿದ್ದು ಹಲಸಿನ ಸಸಿಯನ್ನು ಮನೆ ಬಾಗಿಲಿಗೆ ಕಳುಹಿಸುತ್ತಾರೆ ಎಂಬುನ್ನು ತಿಳಿದು ಆಶ್ಚರ್ಯವಾಯಿತು. ಹೇಗೆ ಅಷ್ಟು ಎತ್ತರದ ಸಸಿಯನ್ನು ಕೊರಿಯರ್ ಮಾಡುತ್ತಾರೆ ಎಂಬ ಸೋಜಿಗದಲ್ಲೇ ನಾನು ಸಸಿಗಳನ್ನು ಕೊರಿಯರ್ ಮೂಲಕ ತರಿಸಿಕೊಂಡೆ. ಸಸಿಗಳಿಗೆ ಹಾನಿಯಾಗದಂತೆ ತುಂಬಾ ವ್ಯವಸ್ಥಿತವಾಗಿ ಅವರು ಪ್ಯಾಕ್ ಮಾಡಿ ಕಳುಹಿದ್ದರು. ಇಂತಹ ಉಪಯುಕ್ತ ಲೇಖನ ಪ್ರಕಟಿಸಿದಕ್ಕೆ ಧನ್ಯವಾದಗಳು.

**–ಶಿವಪ್ರಕಾಶ್, ಬೆಂಗಳೂರು**

* * *

"ಮಾದರಿ ಬಜೆಟ್" (ಕೇಶವ ಜಿ ಝಿಂಗಾಡೆ) ಲೇಖನವು ಬಜೆಟ್‌ನ ಸಂಪೂರ್ಣ ಮಾಹಿತಿ ಒದಗಿಸಿತು. ಐದೂ ಗ್ಯಾರಂಟಿಗಳನ್ನು ನೀಡಿ ಇದನ್ನು ಸರಿದೂಗಿಸಿಕೊಂಡು ಅಭಿವೃದ್ಧಿ ಪರ ಬಜೆಟ್ ಮಂಡನೆ, ಸಿದ್ದರಾಮಯ್ಯನವರ ದೂರ ದೃಷ್ಟಿಗೆ ಹಿಡಿದ ಕೈಗನ್ನಡಿ. ಹಾಗೆಯೇ "ಆಯವ್ಯಯದಲ್ಲಿ ಮುಖ್ಯಮಂತ್ರಿಗಳ ಚರಿತ್ರಾರ್ಹ ದಾಖಲೆ" (ಶಫಿ.ಎಸ್) ಅವರು ಬರೆದಿರುವ ಲೇಖನ ಓದಿ ಸೋಜಿಗವೂ ಆಯಿತು. ತಮ್ಮ ಒಟ್ಟು ಹದಿನಾಲ್ಕು ದಾಖಲೆಯ ಬಜೆಟ್‌ನಲ್ಲಿ ಒಂದೊಂದರಲ್ಲೂ ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಂಡು ನುಡಿದಂತೆ ನಡೆದ ಏಕೈಕ ಮುಖ್ಯಮಂತ್ರಿ ಎನಿಸಿಕೊಂಡ ಸಿದ್ದರಾಮಯ್ಯನವರ ಕಾರ್ಯವೈಖರಿ ಅವಿಸ್ಮರಣೀಯ.

**–ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ**

ಆಯವ್ಯಯ ಮಂಡನೆಯಲ್ಲಿ ಮುಖ್ಯಮಂತ್ರಿಗಳ ಚರಿತ್ರಾರ್ಹ ದಾಖಲೆ ಲೇಖನದಲ್ಲಿ ಬಳಸಲಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹಳೆಯ ಛಾಯಾಚಿತ್ರಗಳು ನನ್ನ ಮನ ಸೂರೆಗೊಳಿಸಿತು. ಕಪ್ಪು ಬಿಳುಪಿನ ಅಪರೂಪದ ಅವರ ಚಿತ್ರಗಳನ್ನು ನೋಡಿ ತುಂಬಾ ತುಂಬಾ ಸಂತೋಷವಾಯಿತು. ಮುಖ ಪುಟ ಕೂಡ ಅತ್ಯಂತ ಚಂದವಾಗಿ ಮೂಡಿ ಬಂದಿದೆ.

**–ಸತೀಶ್ ಸಿ.ಕೆ, ಕೃಷ್ಣರಾಜ ನಗರ**

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ವಾರ್ಷಿಕ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ **https://sevasindhu.karnataka.gov.in** ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೇ,

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ನುಡಿದಂತೆ ನಡೆವ ಸರ್ಕಾರ ಎಂಬುದನ್ನು ಈಗಾಗಲೇ ಸಾಬೀತು ಪಡಿಸಿದೆ. ಚುನಾವಣೆ ಸಂದರ್ಭದಲ್ಲಿ ಜನತೆ ಮುಂದೆ ಘೋಷಿಸಿದ್ದ ಐದು ಗ್ಯಾರಂಟಿ ಯೋಜನೆಗಳಲ್ಲಿ ನಾಲ್ಕು ಯೋಜನೆಗಳನ್ನು  ಕೇವಲ ಮೂರು ತಿಂಗಳ ಒಳಗೆ ಅನುಷ್ಠಾನಗೊಳಿಸಿದೆ. ತಾವು ನೀಡಿದ ಆಶ್ವಾಸನೆಯನ್ನು ಇಷ್ಟು ಶೀಘ್ರವಾಗಿ ಈ ಹಿಂದೆ ಯಾವುದೇ ಸರ್ಕಾರವು ಈಡೇರಿಸಿರುವುದಿಲ್ಲ.

ಬಡವರು ಮತ್ತು ಮಧ್ಯಮ ವರ್ಗದ ಜನರಿಗೆ ಆರ್ಥಿಕ ನ್ಯಾಯ ಒದಗಿಸಬೇಕು. ಆ ಮೂಲಕ ಸಮಾಜದಲ್ಲಿ ಸಮಾನತೆಯನ್ನು ತರಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ. 'ಶಕ್ತಿ' ಯೋಜನೆಯು ಮಹಿಳೆಯರನ್ನು ಮುಖ್ಯವಾಹಿನಿಗೆ ತರುವಲ್ಲಿ ಯಶಸ್ವಿಯಾಗಿದೆ. ಈ ಯೋಜನೆಯ ಬಗ್ಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾಧ್ಯಮಗಳು ಅಧ್ಯಯನ ನಡೆಸಿ ಪ್ರಶಂಸೆಯನ್ನು ಕೂಡ ವ್ಯಕ್ತಪಡಿಸಿವೆ. ಈಗಾಗಲೇ 'ಅನ್ನಭಾಗ್ಯ' ಜಾರಿಯಾಗಿದ್ದು, ಆಗಸ್ಟ್ 5 ರಂದು ಗೃಹಜ್ಯೋತಿ ಯೋಜನೆಗೆ ಕಲಬುರಗಿಯಲ್ಲಿ ಚಾಲನೆ ನೀಡಲಾಗಿದೆ.

ಮುಖ್ಯಮಂತ್ರಿ ಅವರು ಆಗಸ್ಟ್ 15 ರಂದು ಮಾಣಿಕ್ ಷಾ ಪರೇಡ್ ಮೈದಾನದಲ್ಲಿ 77 ನೇ ಸ್ವಾತಂತ್ರ್ಯೋತ್ಸವ ಧ್ವಜಾರೋಹಣ ನೆರವೇರಿಸಿ ಮಾಡಿದ ಭಾಷಣದಲ್ಲಿ ತಮ್ಮ ಸರ್ಕಾರವು ಗ್ಯಾರಂಟಿ ಯೋಜನೆಗಳನ್ನು ತರಲು ಕಾರಣಗಳೇನು ಎಂಬುದರ ಮೇಲೆ ಸೂಕ್ಷ್ಮವಾಗಿ ಬೆಳಕು ಚೆಲ್ಲುವ ಜೊತೆಗೆ ಗ್ಯಾರಂಟಿ ಯೋಜನೆಗಳನ್ನು ಜಾತಿ, ಮತ, ವರ್ಗ, ವರ್ಣ ಭೇದವಿಲ್ಲದೆ ಜಾರಿಗೊಳಿಸಲಾಗುತ್ತಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಅವರು ಭಾಷಣದಲ್ಲಿ 'ಬ್ರಾಂಡ್ ಬೆಂಗಳೂರು' ಪರಿಕಲ್ಪನೆಯ ಯೋಜನೆಗಳು, ಸೂರಿಲ್ಲದವರಿಗೆ ಸೂರು ನೀಡುವುದು, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿ, ಗಣಿಬಾಧಿತ ಪ್ರದೇಶಗಳ ಸಮಗ್ರ ಅಭಿವೃದ್ಧಿ, ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಜನೆ, ಜಿಡಿಪಿ ವೇಗವರ್ಧನೆಗೆ ಸಂಬಂಧಿಸಿದ ವಲಯಗಳಿಗೆ ಹೆಚ್ಚಿನ ಆದ್ಯತೆ, ಇವೇ ಮುಂತಾದಂತೆ ಸರ್ಕಾರವು ನಾಡಿನ ಸುಸ್ಥಿರ, ಸಮಗ್ರ ಅಭಿವೃದ್ಧಿಯ ಅನುಷ್ಠಾನಕ್ಕಾಗಿ ಕೈಗೊಳ್ಳುತ್ತಿರುವ ಯೋಜನೆಗಳ ಕುರಿತು ಜನರಿಗೆ ಮಾಹಿತಿ ನೀಡಿದ್ದಾರೆ.

ಹಾಗೆಯೇ ತಮ್ಮ ಸರ್ಕಾರವು ಪಿಟಿಸಿಎಲ್ ಕಾಯ್ದೆಗೆ ತಂದಿರುವ ತಿದ್ದುಪಡಿಯಿಂದಾಗಿ  ಪರಿಶಿಷ್ಟ ಜಾತಿ, ಪಂಗಡದವರಿಗೆ ಹಂಚಿಕೆಯಾದ ಭೂಮಿಯ ಅಕ್ರಮ ಪರಭಾರೆ ವಿರುದ್ಧ ದೂರು ನೀಡಲು ಯಾವುದೇ ಕಾಲಮಿತಿ ಇರುವುದಿಲ್ಲ ಎಂಬುದನ್ನು ನಿಚ್ಚಳಗೊಳಿಸಿದೆ ಎಂದು ತಿಳಿಸಿದ್ದಾರೆ.

ಪ್ರಾದೇಶಿಕ ಅಸಮಾನತೆ ನಿವಾರಣೆ ಜೊತೆಗೆ, ನಾಡಿನ ನೆಲ, ಜಲ, ಭಾಷೆ ಹಾಗೂ ಅಸ್ಮಿತೆಯನ್ನು ಕಾಪಾಡಲು ಸರ್ಕಾರ ಕಟಿಬದ್ಧವಾಗಿದೆ ಎಂಬ ಭರವಸೆಯನ್ನು ಕೂಡ ಜನತೆಗೆ ನೀಡಿದ್ದಾರೆ.  ಹಾಗೆಯೇ ಮಹಾನ್ ಮಾನವತಾವಾದಿಗಳಾದ ಬುದ್ಧ, ಗಾಂಧಿ, ಬಸವಣ್ಣ, ಅಂಬೇಡ್ಕರ್, ಕುವೆಂಪು ಮೊದಲಾದವರು ಪ್ರತಿಪಾದಿಸಿದ ಮಾನವೀಯತೆಯ ತಳಹದಿಯ ಅಭಿವೃದ್ಧಿಯ ಮಾದರಿಯಲ್ಲಿ ಕರ್ನಾಟಕದ ಅಭಿವೃದ್ಧಿಯನ್ನು ತಮ್ಮ ಸರ್ಕಾರವು ಮಾಡಲಿದೆ ಎಂದು ಹೇಳಿದ್ದಾರೆ.

ವಿನಾಕಾರಣ ದ್ವೇಷ, ಹಿಂಸೆ ಶತ್ರುತ್ವ ಭಾವ, ಅಸಹನೆಗಳು ಸಮಾಜದಲ್ಲಿ ಬೆಳೆಯುತ್ತಿವೆ. ಈ ರೀತಿಯ ನಕಾರಾತ್ಮಕ ಧೋರಣೆಯನ್ನು ಎಲ್ಲರೂ ಒಗ್ಗಟ್ಟಾಗಿ ಹಿಮ್ಮೆಟ್ಟಿಸಬೇಕು. ಹಾಗೆಯೇ ಶಾಂತಿ ಸುವ್ಯವಸ್ಥೆಗಳನ್ನು ಕಾಪಾಡಿದಾಗಲೇ ಸಮಾಜವು ಅಭಿವೃದ್ಧಿಯತ್ತ ಸಾಗಲು ಸಾಧ್ಯ ಎಂದು ಮುಖ್ಯಮಂತ್ರಿ ಅವರು ಅಭಿಪ್ರಾಯಪಟ್ಟಿದ್ದಾರೆ.

ಪ್ರಸಕ್ತ ಸರ್ಕಾರವು ಅಧಿಕಾರಕ್ಕೆ ಬಂದು ಆಗಸ್ಟ್ 27, 2023 ರಂದು ನೂರು ದಿನಗಳನ್ನು ಪೂರೈಸಿದೆ. ಕೇವಲ ನೂರು ದಿನಗಳ ಅವಧಿಯಲ್ಲಿ ಸಂಪತ್ತಿನ ಮರು ಹಂಚಿಕೆಯ ಅತಿ ದೊಡ್ಡ ಕಾರ್ಯಕ್ರಮಗಳಾದ ಪಂಚ ಗ್ಯಾರಂಟಿ ಯೋಜನೆಗಳ ಜೊತೆಗೆ ಹಲವಾರು ಮಾನವೀಯ, ಜನಪರ ಉಪಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ಕರ್ನಾಟಕ ಮಾದರಿಯ ಅಭಿವೃದ್ಧಿಗೆ ಭದ್ರ ಬುನಾದಿಯನ್ನು ಹಾಕಿದೆ.

ಇನ್ನು ನಮ್ಮ ಇಸ್ರೋ ವಿಜ್ಞಾನಿಗಳು ಚಂದ್ರಯಾನ –3 ಅನ್ನು ಯಶಸ್ವಿಯಾಗಿಸಿರುವುದು ಅತ್ಯಂತ ಸಂತಸದ ಮತ್ತು ಹೆಮ್ಮೆಯ ವಿಚಾರ. ಇದರಿಂದ ವಿಶ್ವದಲ್ಲೇ ಭಾರತವು ಚಂದ್ರನ ದಕ್ಷಿಣ ಧ್ರುವದಲ್ಲಿ  ನೌಕೆಯನ್ನು ಇಳಿಸಿದ ಮೊಟ್ಟ ಮೊದಲ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಮಿಷನ್‌ನಲ್ಲಿ ಕಾರ್ಯನಿರ್ವಹಿಸಿರುವ ಎಲ್ಲಾ ವಿಜ್ಞಾನಿಗಳಿಗೂ ಅಭಿನಂದನೆ ಸಲ್ಲಿಸುತ್ತೇನೆ.

**ಈ ಮಾಹೆಯ ವಾರ್ತಾ ಜನಪದ ಸಂಚಿಕೆಯನ್ನು ನೂರು ದಿನ ಪೂರೈಸಿದ ರಾಜ್ಯ ಸರ್ಕಾರಕ್ಕೆ ಹಾಗೂ ಬಾಹ್ಯಾಕಾಶದಲ್ಲಿ ಸಾಧನೆ ಮಾಡಿರುವ ಇಸ್ರೋ ವಿಜ್ಞಾನಿಗಳಿಗೆ ಸಮರ್ಪಣೆ ಗೊಳಿಸಲಾಗಿದೆ.**

**ಹೇಮಂತ್ ಎಂ ನಿಂಬಾಳ್ಕರ್, ಐಪಿಎಸ್**
ಪ್ರಧಾನ ಸಂಪಾದಕರು

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.    email : feedbackjanapada@gmail.com



Downloaded From:www.kpscvaani.com



## ಕರ್ನಾಟಕದ ಸರ್ವಾಂಗೀಣ ಪ್ರಗತಿಗಾಗಿ

# 'ಕರ್ನಾಟಕ ಅಭಿವೃದ್ಧಿ ಮಾದರಿ'

**ಸ್ವಾತಂತ್ರ್ಯ ದಿನಾಚರಣೆಯಂದು ನಾಡಿನ ಜನತೆಯೊಂದಿಗೆ ಮುಖ್ಯಮಂತ್ರಿ ಅವರು ಹಂಚಿಕೊಂಡ ಕರ್ನಾಟಕ ಅಭಿವೃದ್ಧಿ ಮಾದರಿಯ ವಿಸ್ತೃತ ಮುನ್ನೋಟದ ಸಂಕ್ಷಿಪ್ತ ಪರಿಚಯ.**

ನಟರಾಜು. ವಿ

ಅಭಿವೃದ್ಧಿಯ ಯಂತ್ರಕ್ಕೆ ಹಲವು ಚಕ್ರಗಳು. ಅಭಿವೃದ್ಧಿಯ ಪಥದಲ್ಲಿ ಸಾಗುವುದೆಂದರೆ ಗಡಿಯಾರದ ಯಂತ್ರದೊಳಗೆ ಅಡಕಗೊಂಡಿರುವ ಚಿಕ್ಕ, ದೊಡ್ಡ ತಿರುಗಣೆ ಚಕ್ರಗಳನ್ನೆಲ್ಲವನ್ನೂ ಒಗ್ಗೂಡಿಸಿ ಪ್ರಗತಿಯ ತೇರು ಎಳೆಯುವ ಕೆಲಸದಂತೆ. ಹಾಗಾಗಿಯೇ ಅಭಿವೃದ್ಧಿಯ ನೊಗ ಹೊತ್ತವರಿಗೆ ನಾಡಿನ ಆರ್ಥಿಕತೆಯ ಸ್ಥೂಲ (ಮ್ಯಾಕ್ರೋ), ಸೂಕ್ಷ್ಮ (ಮೈಕ್ರೋ) ಗ್ರಹಿಕೆಗಳೆರಡರ ಅರಿವು ಒಟ್ಟಿನಲ್ಲಿ ಕಾಣುತ್ತಿರಬೇಕು. ಆಗ ಮಾತ್ರವೇ ಏಕಕಾಲಕ್ಕೆ ನಾಡೊಂದನ್ನು ಸಾಮಾಜಿಕ, ಆರ್ಥಿಕ ಪ್ರಗತಿ ಪಥದಲ್ಲಿ ಒಯ್ಯಲು ಸಾಧ್ಯ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು 77ನೇ ಸ್ವಾತಂತ್ರ್ಯ ದಿನಾಚರಣೆಯ ಭಾಷಣದ ಸಂದರ್ಭದಲ್ಲಿ ಅನಾವರಣಗೊಳಿಸಿದ ನಾಡಿನ ಅಭಿವೃದ್ಧಿ ನಕಾಶೆಯು ಈ ಕಾರಣಕ್ಕೆ ಕರ್ನಾಟಕದ ಭವ್ಯ ಭವಿತವ್ಯದ ದಿಕ್ಸೂಚಿಯಾಗಿದೆ. ನಾಡಿನ ಸುಸ್ಥಿರ, ಸಮಗ್ರ ಅಭಿವೃದ್ಧಿಯ ಆಶಯವನ್ನಷ್ಟೇ ಅದು ಅನಾವರಣ ಮಾಡದೆ, ಅದರ ಅನುಷ್ಠಾನಕ್ಕೆ ಕೈಗೊಂಡಿರುವ ಮಹತ್ವದ ಕ್ರಮಗಳ ಮಾಹಿತಿಯನ್ನೂ ಅದು ವಿಪುಲವಾಗಿ ನೀಡಿದೆ. ಸಾಮಾಜಿಕ ಹಾಗೂ ಭೌತಿಕ ಅಭಿವೃದ್ಧಿಯೆರಡನ್ನೂ ಒಗ್ಗೂಡಿಸಿ ಕರ್ನಾಟಕದ ಆರ್ಥಿಕತೆಗೆ ಚೈತನ್ಯವನ್ನೂ, ಓಘವನ್ನು ನೀಡಿರುವುದನ್ನು ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ. ಕರ್ನಾಟಕದ ಸರ್ವಾಂಗೀಣ ಪ್ರಗತಿಯ ಈ ಮಾದರಿಯನ್ನು ಅವರು 'ಕರ್ನಾಟಕ ಅಭಿವೃದ್ಧಿ ಮಾದರಿ' ಎಂದೇ ಹೆಸರಿಸಿದ್ದಾರೆ.

ಒಂದೆಡೆ ಜನರ ಸಾಮಾಜಿಕ, ಆರ್ಥಿಕ ಚೈತನ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸಾರ್ವತ್ರಿಕ ಮೂಲ ಆದಾಯ [Universal Basic Income] ಪರಿಕಲ್ಪನೆಯಡಿ ಕೈಗೊಂಡಿರುವ ಐದು ಗ್ಯಾರಂಟಿ ಯೋಜನೆಗಳು ಮತ್ತೊಂದೆಡೆ ನಾಡಿನ ಮೂಲಸೌಕರ್ಯವನ್ನು ಹೆಚ್ಚಿಸಲು ಕೈಗೊಂಡಿರುವ ಕ್ರಮಗಳು ಹಾಗೂ



Downloaded From:www.kpscvaani.com

ಬಂಡವಾಳವನ್ನು ಆಕರ್ಷಿಸುವ ಮೂಲಕ ಉದ್ಯೋಗ ಸೃಷ್ಟಿಯನ್ನು ದಾಖಲಿಸಲು ನಡೆಸಿರುವ ಪ್ರಯತ್ನಗಳ ಬಗ್ಗೆ ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ಸರಳವಾಗಿ, ಸುದೀರ್ಘವಾಗಿ ವಿವರಿಸಿದರು. ಭಾಷಣದ ವೇಳೆ ಮುಖ್ಯಮಂತ್ರಿಯವರು ಪ್ರಸ್ತಾಪಿಸಿದ ಅಂಕಿಅಂಶಗಳು ಈ ದೃಷ್ಟಿಯಿಂದ ಗಮನಾರ್ಹ.



ಮಹಿಳೆಯರಿಗೆ, ವಿದ್ಯಾರ್ಥಿನಿಯರಿಗೆ ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಕಲ್ಪಿಸುವ 'ಶಕ್ತಿ' ಯೋಜನೆಯು ನಿಜಾರ್ಥದಲ್ಲಿ ಮಹಿಳೆಯರ ಹಾಗೂ ನಾಡಿನ ಸಬಲೀಕರಣಕ್ಕೆ ಪುಷ್ಟಿ ನೀಡಿದೆ. ಪ್ರತಿದಿನ ಸರಾಸರಿ 50 ರಿಂದ 60 ಲಕ್ಷ ಮಹಿಳೆಯರಿಗೆ ಇದರ ಅನುಕೂಲವಾಗುತ್ತಿದೆ ಎಂದು ಮುಖ್ಯಮಂತ್ರಿಯವರು ಭಾಷಣದಲ್ಲಿ ತಿಳಿಸಿದ್ದಾರೆ. ಈವರೆಗೆ ಈ ಯೋಜನೆಯಡಿ ನಾಡಿನ ಮಹಿಳೆಯರು 38.58 ಕೋಟಿ ಟ್ರಿಪ್‌ಗಳನ್ನು ಪೂರೈಸಿದ್ದಾರೆ. ಈ ಯೋಜನೆಯು ನಾಡಿನ ಆರ್ಥಿಕ ಶಕ್ತಿಗೆ ಚೈತನ್ಯವೀಯುತ್ತಿದ್ದು, ರಾಷ್ಟ್ರೀಯ–ಅಂತಾರಾಷ್ಟ್ರೀಯ ಮಾಧ್ಯಮಗಳ ಪ್ರಶಂಸೆಗೆ ಕಾರಣವಾಗಿದೆ ಎನ್ನುವ ಅಂಶಗಳನ್ನು ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದರು.

ಮುಂದುವರೆದು, ಎರಡನೆಯ ಗ್ಯಾರಂಟಿ ಯೋಜನೆಯಾದ ಗೃಹಜ್ಯೋತಿಯ ಮೂಲಕ ಪ್ರತಿಯೊಂದು ಮನೆಗೆ 200 ಯೂನಿಟ್ ವರೆಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಈವರೆಗೆ 1.49 ಕೋಟಿ ಗ್ರಾಹಕರು ಯೋಜನೆಯಡಿ ನೋಂದಾಯಿಸಿಕೊಂಡಿದ್ದು, ಉಚಿತ ವಿದ್ಯುತ್ ಪಡೆಯುತ್ತಿದ್ದಾರೆ ಎನ್ನುವ ಮಾಹಿತಿಯನ್ನು ಮುಖ್ಯಮಂತ್ರಿಯವರು ನೀಡಿದರು. ಈ ಸೌಲಭ್ಯಕ್ಕಾಗಿಯೇ ರಾಜ್ಯ ಸರ್ಕಾರವು ವಾರ್ಷಿಕ 13,910 ಕೋಟಿ ರೂಪಾಯಿಗಳನ್ನು ವಿನಿಯೋಗಿಸುತ್ತಿರುವುದಾಗಿ ತಿಳಿಸಿದರು.

ಅದೇ ರೀತಿ, ಹಸಿವು ಮುಕ್ತ ಕರ್ನಾಟಕದ ಕಲ್ಪನೆಯನ್ನು ಸಾಕಾರಗೊಳಿಸುವ ಸಲುವಾಗಿ ಮತ್ತೊಂದು ಗ್ಯಾರಂಟಿ ಯೋಜನೆ 'ಅನ್ನಭಾಗ್ಯ'ವನ್ನು ಜಾರಿಗೊಳಿಸಿದ್ದು, ಕೇಂದ್ರ ಸರ್ಕಾರದ ಅಸಹಕಾರದ ನಡುವೆಯೂ ರಾಜ್ಯ ಸರ್ಕಾರವು ಪ್ರತಿ ಫಲಾನುಭವಿಗೆ ಕೇಂದ್ರವು ನೀಡುವ 5 ಕೆಜಿ ಅಕ್ಕಿಯೊಂದಿಗೆ ಹೆಚ್ಚುವರಿಯಾಗಿ 5 ಕೆಜಿ ಆಹಾರಧಾನ್ಯ ನೀಡಲು ಕ್ರಮ ತೆಗೆದುಕೊಳ್ಳುತ್ತಿರುವುದಾಗಿ ತಿಳಿಸಿದರು. ಈ ಸಂಬಂಧ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಪ್ರಸ್ತುತ 5 ಕೆ.ಜಿ ಅಕ್ಕಿಯ ಬದಲಿಗೆ ಅನ್ನಭಾಗ್ಯ ಯೋಜನೆಯಡಿ 1.04 ಕೋಟಿ ಕುಟುಂಬಗಳು ನಗದು ಸೌಲಭ್ಯ ಪಡೆಯುತ್ತಿವೆ. ಉಳಿದ ಕುಟುಂಬಗಳಿಗೆ ಸದ್ಯದಲ್ಲಿಯೇ ಹಣ ವರ್ಗಾಯಿಸಲು ಕ್ರಮ ಕೈಗೊಳ್ಳಲಿರುವುದಾಗಿ ಮಾಹಿತಿ ನೀಡಿದರು.



ಇನ್ನು, ಬಡತನ ನಿವಾರಣೆಗೆ ನೇರ ನಗದು ನೀಡುವ ಕಾರ್ಯಕ್ರಮ ಅತ್ಯುತ್ತಮ ಪರಿಹಾರ ಎಂದು ಅಭಿಪ್ರಾಯ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಹಿನ್ನೆಲೆಯಲ್ಲಿ ರೂಪುಗೊಂಡಿರುವ 'ಗೃಹಲಕ್ಷ್ಮಿ' ಯೋಜನೆಯ ಮುಖೇನ ಮಾಸಿಕ ರೂ.2000 ಹಣವನ್ನು ಕುಟುಂಬಗಳ ಯಜಮಾನಿಯರಿಗೆ ವರ್ಗಾಯಿಸಲಾಗುವುದು. ಯೋಜನೆಗೆ ಆಗಸ್ಟ್ 27ರಂದು ಚಾಲನೆ ನೀಡಲಾಗುವುದು ಎಂದಿದ್ದಾರೆ. ಇದಾಗಲೆ 1.08 ಕೋಟಿ ಕುಟುಂಬಗಳ ಯಜಮಾನಿಯರು ಯೋಜನೆಯಡಿ ನೋಂದಾಯಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಮತ್ತೊಂದು ಮಹತ್ವದ, ಐದನೆಯ ಗ್ಯಾರಂಟಿ ಯೋಜನೆಯಾದ ಯುವನಿಧಿಯು ಪದವಿ, ಡಿಪ್ಲೊಮಾ ಪಡೆದ ಯುವಕರಿಗೆ ಕೂಡಲೇ ಉದ್ಯೋಗ ದೊರೆಯದಿದ್ದರೆ, ನಿರಾಶರಾಗದಂತೆ, ಅವರ ಸ್ವಾಭಿಮಾನಕ್ಕೆ ಧಕ್ಕೆಯಾಗದಂತೆ ಆರ್ಥಿಕ ಬೆಂಬಲವನ್ನು ನೀಡುವ ಯೋಜನೆಯಾಗಿದೆ ಎಂದು ವಿವರಿಸಿದರು. ಇದರಡಿ ಶಿಕ್ಷಣ ಪಡೆದು ಆರು ತಿಂಗಳಾದರೂ ಉದ್ಯೋಗ ದೊರೆಯದ ಯುವಜನರಿಗೆ ಉದ್ಯೋಗ ದೊರೆಯುವವರೆಗೆ ಅಥವಾ ಗರಿಷ್ಠ



Downloaded From:www.kpscvaani.com




**ಶಕ್ತಿ ಯೋಜನೆಯು ನಿಜಾರ್ಥದಲ್ಲಿ ಮಹಿಳೆಯರ ಹಾಗೂ ನಾಡಿನ ಸಬಲೀಕರಣಕ್ಕೆ ಪುಷ್ಟಿ ನೀಡಿದೆ. ಪ್ರತಿದಿನ ಸರಾಸರಿ 50 ರಿಂದ 60 ಲಕ್ಷ ಮಹಿಳೆಯರಿಗೆ ಇದರಿಂದ ಅನುಕೂಲವಾಗುತ್ತಿದೆ.**

* * *

**ಗೃಹಜ್ಯೋತಿಯ ಮೂಲಕ ಪ್ರತಿಯೊಂದು ಮನೆಗೆ 200 ಯೂನಿಟ್ ವರೆಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಈವರೆಗೆ 1.49 ಕೋಟಿ ಗ್ರಾಹಕರು ಯೋಜನೆಯಡಿ ನೋಂದಾಯಿಸಿಕೊಂಡಿದ್ದು, ಉಚಿತ ವಿದ್ಯುತ್ ಪಡೆಯುತ್ತಿದ್ದಾರೆ.**

* * *

**ಅನ್ನಭಾಗ್ಯ ಯೋಜನೆಯಡಿ ಪ್ರಸ್ತುತ 5 ಕೆ.ಜಿ ಅಕ್ಕಿಯ ಬದಲಿಗೆ 1.04 ಕೋಟಿ ಕುಟುಂಬಗಳು ನಗದು ಸೌಲಭ್ಯ ಪಡೆಯುತ್ತಿವೆ. ಉಳಿದ ಕುಟುಂಬಗಳಿಗೆ ಸದ್ಯದಲ್ಲಿಯೇ ಹಣ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.**

* * *

**ಶೋಷಿತ ವರ್ಗದ ಶ್ರೇಯೋಭಿವೃದ್ಧಿಗೆ ಪಿಟಿಸಿಎಲ್ ಕಾಯಿದೆಗೆ ಮಾಡಲಾಗಿರುವ ತಿದ್ದುಪಡಿಯಿಂದಾಗಿ ಪರಿಶಿಷ್ಟಜಾತಿ, ಪಂಗಡದವರಿಗೆ ಹಂಚಿಕೆಯಾದ ಭೂಮಿಯ ಅಕ್ರಮ ಪರಭಾರೆ ವಿರುದ್ಧ ದೂರು ನೀಡಲು ಯಾವುದೇ ಕಾಲಮಿತಿ ಇರುವುದಿಲ್ಲ.**

* * *

**'ಗೃಹಲಕ್ಷ್ಮಿ' ಯೋಜನೆಯ ಮುಖೇನ ಮಾಸಿಕ ರೂ.2000 ಹಣವನ್ನು ಕುಟುಂಬಗಳ ಯಜಮಾನಿಯರಿಗೆ ವರ್ಗಾಯಿಸಲು ನೋಂದಣಿ ಮಾಡಿಕೊಳ್ಳಲಾಗುತ್ತಿದ್ದು, ಯೋಜನೆಗೆ ಆಗಸ್ಟ್ 30ರಂದು ಚಾಲನೆ ನೀಡಲಾಗುವುದು. ಈಗಾಗಲೇ 1.08 ಕೋಟಿ ಕುಟುಂಬಗಳ ಯಜಮಾನಿಯರು ಯೋಜನೆಯಡಿ ನೋಂದಾಯಿಸಿಕೊಂಡಿದ್ದಾರೆ.**

* * *

**ಪದವೀಧರರಿಗೆ 3000 ರೂ. ಹಾಗೂ ಡಿಪ್ಲೊಮಾ ಪಡೆದವರಿಗೆ 1500 ರೂ. ನಿರುದ್ಯೋಗ ಭತ್ಯೆ ನೀಡಲು ಉದ್ದೇಶಿಸಲಾಗಿರುವ ಯುವನಿಧಿ ಯೋಜನೆಯು 2022-23ರ ಶೈಕ್ಷಣಿಕ ವರ್ಷ ಅಂತ್ಯಗೊಂಡ 6 ತಿಂಗಳ ನಂತರ ಜಾರಿಯಾಗಲಿದೆ.**

ಎರಡು ವರ್ಷದವರೆಗೆ, ಪದವೀಧರರಿಗೆ 3000 ರೂ. ಹಾಗೂ ಡಿಪ್ಲೊಮಾ ಪಡೆದವರಿಗೆ 1500 ರೂ. ನಿರುದ್ಯೋಗ ಭತ್ಯೆ ನೀಡಲಾಗುವುದು. 2022-23ರ ಶೈಕ್ಷಣಿಕ ವರ್ಷ ಅಂತ್ಯಗೊಂಡ 6 ತಿಂಗಳ ನಂತರ ಈ ಯೋಜನೆ ಜಾರಿಯಾಗಲಿದೆ ಎಂದು ಹೇಳಿದರು.

ಈ ಗ್ಯಾರಂಟಿ ಯೋಜನೆಗಳು ಒಟ್ಟಿನಲ್ಲಿ ಆರ್ಥಿಕ ವ್ಯವಸ್ಥೆಯ ಚೈತನ್ಯಕ್ಕೆ ಹಾಗೂ ಅಭಿವೃದ್ಧಿಗೆ ಹೇಗೆ ಸಹಕಾರಿಯಾಗಲಿವೆ ಎನ್ನುವುದನ್ನು ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ವಿವರಿಸಿದರು. ಸರ್ಕಾರವು ರಾಜ್ಯದ ಭೌತಿಕ ಅಭಿವೃದ್ಧಿ ಮತ್ತು ಸಾಮಾಜಿಕ ಅಭಿವೃದ್ಧಿ ಎಂಬ ಎರಡೂ ಮಾದರಿಗಳನ್ನು ಒಂದೇ ರೀತಿಯಲ್ಲಿ ಪರಿಭಾವಿಸಿದೆ. ನಾವು ಸೃಷ್ಟಿಸಲು ಹೊರಟಿರುವ ಅಭಿವೃದ್ಧಿಯಲ್ಲಿ ರಾಜ್ಯದ ಸರಾಸರಿ 1.30 ಕೋಟಿ ಕುಟುಂಬಗಳಿಗೆ ಸೇರಿದ ಜನರು ಪಾಲ್ಗೊಳ್ಳುತ್ತಿದ್ದಾರೆ. ಇಷ್ಟು ವ್ಯಾಪಕ ಪ್ರಮಾಣದ ಕೋಟಿ ಜನರಿಗೆ ಯಾವುದೇ ಮಧ್ಯವರ್ತಿಗಳ ಕಾಟವಿಲ್ಲದೆ ಸವಲತ್ತುಗಳು ನೇರವಾಗಿ ತಲುಪಲಿವೆ. ಇದರೊಟ್ಟಿಗೇ ಈ ಯೋಜನೆಗಳಿಂದ ಸಮಗ್ರ ಮಹಿಳಾ ಸಶಕ್ತೀಕರಣ ಸಾಧ್ಯವಾಗಲಿದೆ. ಇದರಿಂದ ಕರ್ನಾಟಕ ಮಾದರಿ ಅಭಿವೃದ್ಧಿ ವ್ಯಾಖ್ಯಾನವು ಪ್ರಾರಂಭವಾಗಲಿದೆ ಎಂದು ಖಚಿತವಾಗಿ ನುಡಿದರು.

ಗ್ಯಾರಂಟಿ ಯೋಜನೆಗಳು ಮಾತ್ರವೇ ಅಲ್ಲದೆ ಕಳೆದ ಕೆಲವು ವರ್ಷಗಳಲ್ಲಿ ಸ್ಥಗಿತಗೊಂಡಿದ್ದ, ಈ ಹಿಂದಿನ ತಮ್ಮದೇ ಸರ್ಕಾರದ ಅವಧಿಯಲ್ಲಿ ಯಶಸ್ವಿಯಾಗಿ ಜಾರಿಗೊಳಿಸಿದ್ದ ಕೃಷಿಭಾಗ್ಯ, ಅನುಗ್ರಹ ಯೋಜನೆ, ವಿದ್ಯಾಸಿರಿ, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಸ್ಥಗಿತಗೊಂಡಿರುವ ವಿದ್ಯಾರ್ಥಿವೇತನ ಯೋಜನೆ ಸೇರಿದಂತೆ ಹಲವು ಯೋಜನೆಗಳ ಮರು ಜಾರಿಗೆ ಕ್ರಮಕೈಗೊಳ್ಳುವ ಮಾಹಿತಿಯನ್ನೂ ಮುಖ್ಯಂತ್ರಿಯವರು ಭಾಷಣದ ವೇಳೆ ನೀಡಿದ್ದಾರೆ.

ಶೋಷಿತ ವರ್ಗದ ಶ್ರೇಯೋಭಿವೃದ್ಧಿಗೆ ಪಿಟಿಸಿಎಲ್ ಕಾಯಿದೆಗೆ ಮಾಡಲಾಗಿರುವ ತಿದ್ದುಪಡಿಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಇದರಿಂದ ಪರಿಶಿಷ್ಟಜಾತಿ, ಪಂಗಡದವರಿಗೆ ಹಂಚಿಕೆಯಾದ ಭೂಮಿಯ ಅಕ್ರಮ ಪರಭಾರೆ ವಿರುದ್ಧ ದೂರು ನೀಡಲು ಯಾವುದೇ ಕಾಲಮಿತಿ ಇಲ್ಲ ಎಂದು ತಿಳಿಸುವ ಮೂಲಕ ಈ ವರ್ಗಗಳಲ್ಲಿ ಭರವಸೆ ಮೂಡಿಸಿದ್ದಾರೆ. ಅಲ್ಲದೆ, ಈ ಸಮುದಾಯಗಳಿಗೆ ಮೀಸಲಿರುವ ಅನುದಾನ ಇತರೆ ಕಾರ್ಯಗಳಿಗೆ ದುರ್ಬಳಕೆ ಯಾಗುವುದನ್ನು ತಡೆಗಟ್ಟಲು ಅನುಸೂಚಿತಜಾತಿ, ಅನುಸೂಚಿತ ಪಂಗಡಗಳ ವಿಶೇಷ ಯೋಜನೆ ಕಾಯ್ದೆ 2013ರಸೆಕ್ಷನ್ 7(ಡಿ)ಯನ್ನು ಜಾರಿಗೆ ತಂದಿರುವುದನ್ನು ಪ್ರಸ್ತಾಪಿಸಿದ್ದಾರೆ.

ದಮನಿತ ವರ್ಗಗಳಿಗೆ ಚೈತನ್ಯ ತುಂಬುವ ಉದ್ದೇಶದಿಂದ ಪರಿಶಿಷ್ಟಜಾತಿ/ ಪಂಗಡಗಳ ಜನರಿಗೆ ನೀಡುತ್ತಿದ್ದ ಗುತ್ತಿಗೆ ಮೊತ್ತದ ಮಿತಿಯನ್ನು 50 ಲಕ್ಷರೂ.ಗಳಿಂದ 1 ಕೋಟಿರೂ.ಗಳಿಗೆ ಏರಿಸಲಾಗಿರುವ ಮಾಹಿತಿಯನ್ನು ಸಹ ಮುಖ್ಯಮಂತ್ರಿಗಳು ಭಾಷಣದಲ್ಲಿ ಹಂಚಿಕೊಂಡರು. ಇದಲ್ಲದೆ ಶಿಕ್ಷಣ, ಆರೋಗ್ಯ, ಹೈನುಗಾರಿಕೆ ಮುಂತಾದ ಕ್ಷೇತ್ರಗಳಿಗೆ ನೀಡಿರುವ ಒತ್ತು, ಜಾರಿಗೊಳಿಸಲಾಗಿರುವ ಯೋಜನೆಗಳ ಮಾಹಿತಿಯನ್ನು ಮುಖ್ಯಮಂತ್ರಿಯವರು ನೀಡಿದರು. ವಿಶೇಷವಾಗಿ ಹೈನುಗಾರರು ಒದಗಿಸುವ ಪ್ರತಿ ಲೀಟರ್ ಹಾಲಿಗೆ 3 ರೂ. ಮೊತ್ತವನ್ನು ಹೆಚ್ಚುವರಿಯಾಗಿ ನೀಡುವ ಮೂಲಕ ಹೈನುಗಾರಿಕೆಗೆ ಹಾಗೂ ಆ


Downloaded From:www.kpscvaani.com



ಮೂಲಕ ಗ್ರಾಮೀಣ ಅರ್ಥವ್ಯವಸ್ಥೆಗೆ ನವಚೈತನ್ಯವನ್ನು ತುಂಬಿರುವ ಬಗ್ಗೆ ವಿವರಿಸಿದರು.

ಬೆಂಗಳೂರಿನ ಜನದಟ್ಟಣೆಯನ್ನು ಕಡಿಮೆಗೊಳಿಸಲು ಉಪನಗರಗಳನ್ನು ಅಭಿವೃದ್ಧಿಪಡಿಸುವ ಬಗ್ಗೆಯೂ ಭಾಷಣದಲ್ಲಿ ಮಾಹಿತಿ ನೀಡಲಾಯಿತು. ದೇವನಹಳ್ಳಿ, ನೆಲಮಂಗಲ, ಹೊಸಕೋಟೆ, ದೊಡ್ಡಬಳ್ಳಾಪುರ, ಮಾಗಡಿಗಳಲ್ಲಿ ಉಪನಗರ ಟೌನ್‌ಶಿಪ್‌ಗಳನ್ನು ಅಭಿವೃದ್ಧಿಪಡಿಸಲಿದೆ ಎನ್ನುವುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಿಳಿಸಿದರು. ಪ್ರಸ್ತುತ ಬೆಂಗಳೂರಿನಲ್ಲಿ ಮೆಟ್ರೋ ರೈಲು 69.66 ಕಿ.ಮೀ ಮಾರ್ಗದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದು, 2026ರ ವೇಳೆಗೆ ಬೆಂಗಳೂರಿನಲ್ಲಿ 175.55 ಕಿ.ಮೀ. ಮೆಟ್ರೋ ಜಾಲ ಕಾರ್ಯಾಚರಣೆ ನಡೆಸಲಿದೆ ಎಂದು ಮಾಹಿತಿ ಹಂಚಿಕೊಂಡರು.

ರಾಜ್ಯದ ಜನತೆಗೆ ಜೀವನೋಪಾಯವನ್ನು ಕಲ್ಪಿಸಲು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಿಭಿನ್ನ ಕಾರ್ಯತಂತ್ರಗಳನ್ನು ನಮ್ಮ ಸರ್ಕಾರವು ಅಳವಡಿಸಿಕೊಳ್ಳಲಿದೆ. ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಜನೆ ಮಾಡಲು ಹಾಗೂ ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಮೌಲ್ಯವರ್ಧನೆ ಮಾಡಲು ಕೃಷಿ ಸಂಸ್ಕರಣೆ ಉದ್ಯಮಗಳ ಸ್ಥಾಪನೆಗೆ ಬೆಂಬಲ ನೀಡಲಾಗುವುದು. ಇದರಿಂದ ರೈತರ ಆದಾಯ ಹೆಚ್ಚುವುದಲ್ಲದೆ ಗ್ರಾಮೀಣ ಪ್ರದೇಶದ ಬೆಳವಣಿಗೆಗೆ ನೆರವಾಗಲಿದೆ ಎಂದು ಮುಖ್ಯಮಂತ್ರಿಯವರು ವಿವರಿಸಿದರು.

ಕರ್ನಾಟಕವನ್ನು ಭವಿಷ್ಯದ ತಂತ್ರಜ್ಞಾನ ಹಾಗೂ ಅತ್ಯಾಧುನಿಕ ಉತ್ಪಾದನಾ ವಲಯದಲ್ಲಿ ಸುಸ್ಥಿರ ಬೆಳವಣಿಗೆಯ ಮೂಲಕ ಏಷ್ಯಾದಲ್ಲಿಯೇ ಮೊದಲ ಸ್ಥಾನಕ್ಕೆ ಒಯ್ಯುವ ಗುರಿಯ ಬಗ್ಗೆ ಭಾಷಣದಲ್ಲಿ ಪ್ರಸ್ತಾಪಿಸಲಾಯಿತು. ಕಳೆದ 10 ವರ್ಷಗಳಲ್ಲಿ ರಾಜ್ಯದ ಕೈಗಾರಿಕಾ ವಲಯವು ಶೇ. 9.3 ರ ದರದಲ್ಲಿ ಬೆಳವಣಿಗೆ ದಾಖಲಿಸಿದೆ. ಮುಂದಿನ ದಿನಗಳಲ್ಲಿ ಈ ಬೆಳವಣಿಗೆ ದರವನ್ನು ಶೇ. 15-16 ಕ್ಕೆ ಹೆಚ್ಚಿಸುವ ಗುರಿ ಹೊಂದಿದ್ದೇವೆ. ಇದಕ್ಕೆ ಪ್ರತಿವರ್ಷ ಕನಿಷ್ಠ 1.4 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆ ಹಾಗೂ 14 ಲಕ್ಷ ಹೊಸ ಉದ್ಯೋಗ ಸೃಜನೆಯಾಗುವ ಅಗತ್ಯವಿದೆ ಎಂದು ಅವರು ವಿವರಿಸಿದರು.

ಕಳೆದ ಎರಡು ತಿಂಗಳಲ್ಲಿ ಫಾಕ್ಸ್‌ಕಾನ್, ಇಂಟರ್ನ್ಯಾಷನಲ್ ಬ್ಯಾಟರಿ ಕಂಪೆನಿ, ಟಾಟಾ ಟೆಕ್ನಾಲಜೀಸ್ ಮತ್ತಿತರ ಕಂಪೆನಿಗಳಿಂದ ಗಣನೀಯ ಪ್ರಮಾಣದ ಹೂಡಿಕೆ ಆಕರ್ಷಿಸಲಾಗಿದೆ. ಹೂಡಿಕೆ ಆಕರ್ಷಣೆಯಲ್ಲಿ ಮುನ್ನಡೆ ಸಾಧಿಸುವ ನಿಟ್ಟಿನಲ್ಲಿ ಏರೋಸ್ಪೇಸ್ ಮತ್ತು ರಕ್ಷಣೆ, ಆಟೊ ಮೊಬೈಲ್, ವಿದ್ಯುತ್ವಾಹನಗಳು (ಇವಿ), ಇಲೆಕ್ಟ್ರಾನಿಕ್ಸ್ ಮತ್ತು ಉತ್ಪಾದನಾವಲಯ, ಸ್ಟಾರ್ಟಪ್‌ಗಳು, ವಿವಿಧ ಸಂಘಟನೆಗಳು, ಮೂಲಸೌಕರ್ಯ ಅಭಿವೃದ್ಧಿ ವಲಯದ ಸಂಸ್ಥೆಗಳೊಂದಿಗೆ ನಿರಂತರ ಸಂವಾದ ನಡೆಸುತ್ತಿರುವುದಾಗಿ ತಿಳಿಸಿದರು.

ಜಿಡಿಪಿ ವೇಗವರ್ಧನೆಗೆ ಸಂಬಂಧಿಸಿದಂತೆ ವೈಮಾನಿಕ ಮತ್ತು ಭದ್ರತಾ ವಲಯಗಳ ಕೈಗಾರಿಕೆಗಳಿಗೆ ಹಾಗೂ ಎಲೆಕ್ಟ್ರಾನಿಕ್ಸ್ ಭಾಗಗಳು, ಕೋರ್ ಕೈಗಾರಿಕೆಗಳು ಮತ್ತು ವೇರ್ ಹೌಸಿಂಗ್ ಮತ್ತು ಲಾಜಿಸ್ಟಿಕ್ಸ್ ವಲಯಗಳಿಗೆ ಹೆಚ್ಚಿನ ಆದ್ಯತೆ ನೀಡುವ ಸೂಚನೆ ನೀಡಿದರು. ಸೆಮಿಕಂಡಕ್ಟರ್ ಉದ್ಯಮದ ಸಹಿತ ನೂತನ ತಂತ್ರಜ್ಞಾನಾಧಾರಿತ ಉದ್ಯಮಗಳಿಗೆ ಆದ್ಯತೆ ನೀಡುವ ಭರವಸೆ ನೀಡಿದರು.

ಇದೆಲ್ಲವನ್ನೂ ಸಾಕಾರಗೊಳಿಸುವ ನಿಟ್ಟಿನಲ್ಲಿ ಕೈಗಾರಿಕಾ ನೀತಿಯನ್ನು ಇನ್ನಷ್ಟು ಪ್ರಗತಿಪರವಾಗಿ ರೂಪಿಸಿ ಪುನರ್ ರಚಿಸುವುದಾಗಿ ಮುಖ್ಯಮಂತ್ರಿಯವರು ತಿಳಿಸಿದರು. ವಿಶ್ವದರ್ಜೆಯ ಕೈಗಾರಿಕಾ ಮೂಲಸೌಕರ್ಯ, ಡಿಜಿಟಲ್ ಸೇವಾ ಪೂರೈಕೆ, ಅತ್ಯುತ್ತಮ ಹೂಡಿಕೆ ಉತ್ತೇಜನ ಸಂಸ್ಥೆಗಳನ್ನು ರೂಪಿಸುವ ವಾಗ್ದಾನ ಮಾಡಿದರು.

ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಿ ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ಸಾಧಿಸುವ ದೃಷ್ಟಿಯಿಂದ ಬೆಂಗಳೂರಿನಿಂದ ಹೊರಗೆ ಹೆಚ್ಚು ಉದ್ಯೋಗಾವಕಾಶ ಸೃಜಿಸುವ ಮೂಲಕ ಅಭಿವೃದ್ಧಿಗೆ ಉತ್ತೇಜನ ನೀಡಲು ಮತ್ತು ಸುಸ್ಥಿರ ಬದುಕು ರೂಪಿಸಲು ಒತ್ತು ನೀಡಿರುವುದಾಗಿ ಮುಖ್ಯಮಂತ್ರಿಯವರು ವಿವರಿಸಿದರು. ಸರ್ಕಾರವು ಮಿಲಿಯನ್ ಪ್ಲಸ್ ನಗರಗಳೆಂದು ಗುರುತಿಸಲಾದ ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಕಲಬುರಗಿ ಮತ್ತು ಬಳ್ಳಾರಿ ನಗರಗಳನ್ನು ಉಪನಗರಗಳಾಗಿ ಕೈಗಾರಿಕಾ ಟೌನ್‌ಶಿಪ್‌ಗಳಾಗಿ ಅಭಿವೃದ್ಧಿ ಪಡಿಸಲಿದೆ ಎಂದು ಹೇಳಿದರು.

ಯಾವುದೇ ನಾಡಿನಲ್ಲಿ ಅಭಿವೃದ್ಧಿಯು ಸಾಧ್ಯವಾಗಬೇಕೆಂದರೆ ಅಲ್ಲಿನ ಕಾನೂನು ಸುವ್ಯವಸ್ಥೆ ಉತ್ತಮವಾಗಿರಬೇಕು. ಶಾಂತಿ, ಸಹಬಾಳ್ವೆ ಸಮಾಜದಲ್ಲಿ ಹಾಸು ಹೊಕ್ಕಾಗಿರಬೇಕು ಎನ್ನುವ ಅಂಶವನ್ನು ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ವಿಶೇಷವಾಗಿ ಒತ್ತು ನೀಡಿದ್ದು ಗಮನಾರ್ಹವಾಗಿತ್ತು. 'ಮತೀಯ ಗೂಂಡಾಗಿರಿ ಅಥವಾ ನೈತಿಕ ಪೊಲೀಸ್ ಗಿರಿ' ಹೆಸರಿನಲ್ಲಿ ನಡೆಯುವ ಅನೈತಿಕ ದಬ್ಬಾಳಿಕೆಯನ್ನು ನಮ್ಮ ಸರ್ಕಾರ ಖಂಡಿತ ಸಹಿಸುವುದಿಲ್ಲ ಎಂದು ಅವರು ಎಚ್ಚರಿಕೆ ನೀಡಿದರು. ಭ್ರಷ್ಟಾಚಾರವನ್ನು ಹತ್ತಿಕ್ಕಲು, ನಾಡಿನ ನೆಲ, ಜಲ ಹಾಗೂ ಅಸ್ಮಿತೆಯನ್ನು ಎತ್ತಿಹಿಡಿಯಲು ತಾವು ಬದ್ಧ ಎಂದು ವಿವರಿಸಿದರು.

ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ರಾಜ್ಯದ ಸರ್ವಾಂಗೀಣ ಪ್ರಗತಿಗಾಗಿ ತಮ್ಮ ನೇತೃತ್ವದ ಸರ್ಕಾರವು ಕೈಗೊಂಡಿರುವ ಕ್ರಮಗಳು, ಜಾರಿಗೊಳಿಸಿರುವ ಯೋಜನೆಗಳ ಮೂಲಕ ಅಭಿವೃದ್ಧಿಯ ವಿಚಾರದಲ್ಲಿ ತಾವು ಹೊಂದಿರುವ ವಿಸ್ತೃತ ಮುನ್ನೋಟವನ್ನು, ವಿಶಾಲ ಭಿತ್ತಿಯನ್ನು ನಾಡಿನ ಜನತೆಯೊಂದಿಗೆ ಹಂಚಿಕೊಂಡರು. ಆ ಮೂಲಕ ದೇಶಕ್ಕೆ ಮಾದರಿಯಾಗುವಂತಹ, ತನ್ನ ಅಂತಃಕರಣದಲ್ಲಿ ಮಾನವೀಯತೆಯನ್ನು ಹಾಸುಹೊಕ್ಕಾಗಿ ಉಳ್ಳ 'ಕರ್ನಾಟಕ ಮಾದರಿ ಅಭಿವೃದ್ಧಿ' ಯನ್ನು ನೀಡಲು ಪಣತೊಟ್ಟರು.


Downloaded From:www.kpscvaani.com

# ಚಂದ್ರನ ಮೇಲೆ ಭಾರತದ ವಿಕ್ರಮ

ನಾಗೇಶ ಹೆಗಡೆ





**23.8.23ರ ಸಂಜೆ ಆರು ಗಂಟೆಯ ಸಮಯ:** ಬೆಂಗಳೂರಿನ ಇಸ್ರೋ ಬಾಹ್ಯಾಕಾಶ ಕೇಂದ್ರದ ಎಲ್ಲ 500 ತಂತ್ರಜ್ಞರೂ ವಿಜ್ಞಾನಿಗಳೂ ಕುರ್ಚಿಯ ತುದಿಯಲ್ಲಿ ಕೂತು ಕ್ಷಣಗಣನೆ ಮಾಡುತ್ತಿದ್ದರು. ವಿಶೇಷ ಏನೆಂದರೆ ಭಾರತದ ಕೋಟ್ಯಂತರ ಜನರೂ ಕುರ್ಚಿಯ ತುದಿಯಲ್ಲಿ ಕೂತು ಆ ಕ್ಷಣಕ್ಕಾಗಿ ಕಾಯುತ್ತಿದ್ದರು.

5–4–3–2–1– ಝೀರೋ ! **'ವಿಕ್ರಮ್ ಹ್ಯಾಸ್ ಲ್ಯಾಂಡೆಡ್'** ಎಂಬ ಘೋಷ ವಾಕ್ಯ ಪೂರ್ತಿಗೊಳ್ಳುವ ಮೊದಲೇ ಆ ಎಲ್ಲ ಕೋಟ್ಯಂತರ ಜನರೂ ಕುರ್ಚಿ ಬಿಟ್ಟೆದ್ದು ಚಪ್ಪಾಳೆ ತಟ್ಟಿ ಜಯಕಾರ ಹಾಕಿದರು. ಪ್ರಾಯಶಃ ಭಾರತದ ಇತಿಹಾಸದಲ್ಲೇ ಇಷ್ಟೊಂದು ಜನರು ಏಕತ್ರವಾಗಿ ಎದ್ದು ನಿಂತು ಜಯಘೋಷ ಹಾಕಿದ್ದು ಇದೇ ಮೊದಲಿರಬೇಕು.

ಚಂದ್ರನ ದಕ್ಷಿಣ ಧ್ರುವದಲ್ಲಿ ನೌಕೆಯನ್ನು ಇಳಿಸಿದ ಮೊದಲ ರಾಷ್ಟ್ರವಾಗಿ ಭಾರತ ದಾಖಲೆ ಸ್ಥಾಪಿಸಿತು. ಚಂದ್ರನ ಮೇಲೆ ನೌಕೆಯನ್ನಿಳಿಸಿದ ನಾಲ್ಕನೆಯ ರಾಷ್ಟ್ರವಾಗಿ (ಅಮೆರಿಕ, ರಷ್ಯಾ, ಚೀನಾದ ನಂತರ) ಭಾರತದ ಸ್ಥಾನ ಇತಿಹಾಸದಲ್ಲಿ ಭದ್ರವಾಯಿತು. ತಂತ್ರಜ್ಞಾನ ರಂಗದಲ್ಲಿ ನಮಗಿಂತ ಅದೆಷ್ಟೋ ಮುಂದಿರುವ ಜಪಾನ್, ದಕ್ಷಿಣ ಕೊರಿಯಾ, ಇಸ್ರೇಲ್ ದೇಶಗಳೂ ಚಂದ್ರನಲ್ಲಿ ಕಾಲೂರಲು ಕಳೆದ ನಾಲ್ಕು ವರ್ಷಗಳಲ್ಲಿ ಯತ್ನಿಸಿ, ಎಡವಿದ್ದವು. ಅಷ್ಟೇಕೆ, ರಷ್ಯ ಕೂಡ, ನಮಗಿಂತ ನಾಲ್ಕು ದಿನ ಮೊದಲೇ ತನ್ನ 'ಲೂನಾ25' ಹೆಸರಿನ ನೌಕೆಯನ್ನು ಇಳಿಸಲು ಹೋಗಿ ಎಡವಟ್ಟು ಮಾಡಿಕೊಂಡಿತ್ತು. ಆ ನೌಕೆ ಅಲ್ಲಿ ಮೆಲ್ಲಗೆ ಇಳಿಯುವ ಬದಲು ನಿಯಂತ್ರಣ ತಪ್ಪಿ ಅಲ್ಲೆಲ್ಲೊ ಕಣ್ಮರೆಯಾಯಿತು. ಅವರೆಲ್ಲರ ಹಾಗೆ ಭಾರತವೂ "ಚಂದ್ರಯಾನ್2" ಪಯಣದಲ್ಲಿ  ಎಡವಿತ್ತಾದರೂ ಮೈಕೊಡವಿ ಮೇಲೆದ್ದಿತು. ಹಿಂದಿನ ಆ ತಪ್ಪನ್ನೇ ಸೋಪಾನವನ್ನಾಗಿ ಮಾಡಿಕೊಂಡು "ಚಂದ್ರಯಾನ್3" ರಲ್ಲಿ ವಿಕ್ರಮ್ ಹೆಸರಿನ ಇಳಿಯಂತ್ರವನ್ನು ಹೂವಿನಂತೆ ಅಲ್ಲಿಳಿಸಿ ಜಗತ್ತಿನ ಎಲ್ಲ ಮುಂಚೂಣಿ ರಾಷ್ಟ್ರಗಳಿಂದ, ಎಲ್ಲ ಪ್ರಮುಖ ಮಾಧ್ಯಮಗಳ ಮೂಲಕ ಭೇಷ್ ಎನಿಸಿಕೊಂಡಿತು.

ಇನ್ನೂ ವಿಶೇಷ ಏನೆಂದರೆ, ಕೇವಲ 615 ಕೋಟಿ ರೂಪಾಯಿಗಳಷ್ಟು ಅಲ್ಪವೆಚ್ಚದಲ್ಲಿ ಭಾರತ ಈ ಯೋಜನೆಯನ್ನು ಯಶಸ್ವಿಗೊಳಿಸಿತು. ಹೋಲಿಕೆಗೆ ಹೇಳುವುದಾದರೆ, ರಷ್ಯಾ ದೇಶ  "ಲೂನಾ25" ನೌಕೆಯನ್ನು ಇಳಿಸಲು 2400 ಕೋಟಿ ರೂಪಾಯಿಗಳಿಗೆ ಸಮನಾದ ಮೊತ್ತವನ್ನು ವೆಚ್ಚ ಮಾಡಿಯೂ ತನ್ನ ಸಾಹಸದಲ್ಲಿ ಸೋತಿತು. ಹೇಳಿಕೇಳಿ ರಷ್ಯಾ ದೇಶ (ಅಂದರೆ ಹಿಂದಿನ ಸೋವಿಯತ್ ಸಂಘ) 1959ರಲ್ಲೇ ತನ್ನ 'ಲೂನಾ2' ನೌಕೆಯ ಮೂಲಕ, ಮಾನವ ನಿರ್ಮಿತ ವಸ್ತುವನ್ನು ಮೊದಲ ಬಾರಿಗೆ ಅಲ್ಲಿ ಬೀಳಿಸಿತ್ತು. 1966ರಲ್ಲಿ 'ಲೂನಾ9' ನೌಕೆಯ ಮೂಲಕ ಶೋಧಡಬ್ಬಿಯೊಂದನ್ನು ಸುರಕ್ಷಿತವಾಗಿ ಚಂದ್ರನ ಮೇಲೆ ಇಳಿಸಿದ ಅನುಭವ ಆ ದೇಶಕ್ಕಿತ್ತು. 70ರ ದಶಕದಲ್ಲಿ ಸೋವಿಯತ್ ರಷ್ಯಾ ಇನ್ನೂ ಅನೇಕ ಹೆಜ್ಜೆಗಳಷ್ಟು ಮುಂದೆ ಹೋಗಿ ಚಂದ್ರನಲ್ಲಿ ಓಡಾಡಬಲ್ಲ ಗಾಡಿಯನ್ನೂ ಇಳಿಸಿದ್ದಲ್ಲದೆ, ಅಲ್ಲಿಂದ ಕೊಂಚ ಮಣ್ಣನ್ನೂ ಎತ್ತಿ ತಂದಿತ್ತು. ಅವೆಲ್ಲ 50 ವರ್ಷಗಳ ಹಿಂದಿನ ಕತೆ.



ಇಂದಿರಾಗಾಂಧಿ ಅವರು ಇಸ್ರೋಗೆ ಭೇಟಿ ನೀಡಿದ ಸಂದರ್ಭ



Downloaded From:www.kpscvaani.com

ಹಾಗಿದ್ದರೆ **'ಭಾರತದ್ದೇನು ಮಹಾ?'** ಎಂಬ ಪ್ರಶ್ನೆ ಇಲ್ಲಿ ಬರುವುದು ಸಹಜ. ಎರಡನೆ ವಿಶ್ವಯುದ್ಧ ಮುಗಿದ ನಂತರದಲ್ಲಿ ಅಂದಿನ ಬಲಾಢ್ಯ ದೇಶಗಳೆನಿಸಿದ ಅಮೆರಿಕ ಮತ್ತು ಸೋವಿಯತ್ ರಷ್ಯಾ ತಂತಮ್ಮಲ್ಲಿ ಜಿದ್ದಿಗೆ ಬಿದ್ದು ಅಣ್ವಸ್ತ್ರಗಳನ್ನು ಪೇರಿಸಿಕೊಳ್ಳುತ್ತಲೇ ಬಾಹ್ಯಾಕಾಶದಲ್ಲೂ ಹೊಸ ಹೊಸ ಸಾಧನೆ ಮಾಡಲು ಪೈಪೋಟಿ ನಡೆಸಿದವು. ಅಮೆರಿಕವಂತೂ ಮನುಷ್ಯನನ್ನೇ ಚಂದ್ರನ ಮೇಲೆ ಇಳಿಸಿತು. 1969ರಲ್ಲಿ 'ಅಪೊಲೊ 11'ರ ಮೂಲಕ ನೀಲ್ ಆರ್ಮ್‌ಸ್ಟ್ರಾಂಗ್ ಮತ್ತು ಬಝ್ ಆಲ್ಡ್ರಿನ್ ಎಂಬಿಬ್ಬರು ಅಲ್ಲಿ ಇಳಿದ ನಂತರ ಮತ್ತೆ ಮುಂದಿನ ಮೂರು ವರ್ಷಗಳಲ್ಲಿ ಇನ್ನೂ ಹತ್ತು ಗಗನಯಾನಿಗಳನ್ನು ಅಲ್ಲಿ ಇಳಿಸಿತ್ತು. ಸೋವಿಯತ್ ರಷ್ಯಾ ಯಾರನ್ನೂ ಇಳಿಸಲಿಲ್ಲವಾದ್ದರಿಂದ 1977ರ ಸುಮಾರಿಗೆ ಚಂದ್ರನ ಮೇಲಿನ ಪೈಪೋಟಿ ತಣ್ಣಗಾಯಿತು.

**ಭಾರತ ಸಾಧನೆ ಏಕಷ್ಟು ಮಹತ್ವದ್ದು ಎಂಬುದನ್ನು ಈಗ ನೋಡೋಣ:** ಬ್ರಿಟಿಷರ ಆಳ್ವಿಕೆಯಿಂದ ನಲುಗಿ ನಜ್ಜುಗುಜ್ಜಾಗಿದ್ದ ನಮ್ಮ ದೇಶ ಸ್ವಾತಂತ್ರ್ಯ ಸಿಕ್ಕ ಸಂದರ್ಭದಲ್ಲಿ ಸಾಕಷ್ಟು ದುರ್ಬಲವಾಗಿತ್ತು. ಹೇಳಿಕೊಳ್ಳುವಂಥ ಯಾವ ಉದ್ಯಮಗಳೂ ಇರಲಿಲ್ಲ; ತಾಂತ್ರಿಕ ಶಿಕ್ಷಣಕ್ಕೆ ಸವಲತ್ತುಗಳೂ ಇರಲಿಲ್ಲ; ಅಷ್ಟೇಕೆ ತನ್ನ ಪ್ರಜೆಗಳಿಗೆ ಆಹಾರವನ್ನು ಒದಗಿಸುವುದೂ ದೊಡ್ಡ ಸವಾಲೇ ಆಗಿತ್ತು. ಸಾಲದ್ದಕ್ಕೆ ಪಕ್ಕದ ಪಾಕಿಸ್ತಾನದಿಂದ ಕಿರಿಕಿರಿ. ಆಹಾರ ಉತ್ಪಾದನೆಗೆಂದು ಅಣೆಕಟ್ಟು ನಿರ್ಮಾಣ, ಅದಕ್ಕೆ ಬೇಕಿದ್ದ ಕಬ್ಬಿಣ, ಸಿಮೆಂಟ್ ಒದಗಿಸಲೆಂದು ಗಣಿಗಾರಿಕೆ, ರಸಗೊಬ್ಬರ ತಯಾರಿಕೆ, ರಕ್ಷಣಾ ಸಾಮಗ್ರಿಗಳ ಉತ್ಪಾದನೆ, ಹಡಗು–ವಿಮಾನಗಳ ತಯಾರಿಕೆ ಎಲ್ಲವಕ್ಕೂ ಹೊಸದಾಗಿ ಅಡಿಗಲ್ಲು ಹಾಕುತ್ತ, ತಾಂತ್ರಿಕ ಶಿಕ್ಷಣಕ್ಕೆಂದು ಐಐಟಿಗಳನ್ನು ಅದೇ ತಾನೆ ಸ್ಥಾಪಿಸುವ ವೇಳೆಗೆ ಅಲ್ಲಿ, ಶ್ರೀಮಂತ ದೇಶಗಳಲ್ಲಿ ಬಾಹ್ಯಾಕಾಶ ಪೈಪೋಟಿ ಆರಂಭವಾಗಿತ್ತು. ಅಂದಿನ ಪ್ರಧಾನ ಮಂತ್ರಿ ನೆಹರೂ ಅವರಿಗೆ ಹೆಗಲೆಣೆಯಾಗಿ ಹೋಮಿ ಭಾಭಾ, ವಿಕ್ರಮ್ ಸಾರಾಭಾಯಿ, ಎಮ್ಜಿಕೆ ಮೆನನ್, ಸತೀಶ್ ಧವನ್ ಇವರೆಲ್ಲ ಮುಂದಾದರು. ಭಾರತವನ್ನು ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲಿ ಸಶಕ್ತಗೊಳಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಮ್ಮ ದೇಶವನ್ನು ಮುಂಚೂಣಿಯಲ್ಲಿ ನಿಲ್ಲಿಸಲು ನಿರ್ಧರಿಸಿದರು.

ಅದೇನೂ ಸುಲಭದ ಕೆಲಸವಾಗಿರಲಿಲ್ಲ. ವಿದೇಶಗಳಿಂದ ಹಣಕಾಸು ನೆರವು ಅದಕ್ಕಿಂತ ಮುಖ್ಯವಾಗಿ ತಾಂತ್ರಿಕ ಸಹಾಯ ಸಹಕಾರ ಬೇಕಲ್ಲ? ಇಡೀ ಜಗತ್ತೇ ಎರಡು ಬಣವಾಗಿದ್ದರಿಂದ ಹುಷಾರಾಗಿ ಯಾವ ಬಣಕ್ಕೂ ಸೇರದೇ ರಾಜತಾಂತ್ರಿಕ ಚಾಣಾಕ್ಷತೆಯಿಂದ ಎರಡೂ ಕಡೆಗಳಿಂದ ನೆರವನ್ನು ಪಡೆಯಬೇಕಿತ್ತು. ನಮ್ಮಲ್ಲಿರುವ ತಾಂತ್ರಿಕ ಪ್ರತಿಭಾವಂತರನ್ನು ಗುರುತಿಸಿ ಅವರನ್ನು ತರಬೇತಿಗೆ ಯುರೋಪ್, ಅಮೆರಿಕ, ರಷ್ಯಾ, ಜಪಾನ್ ಕಡೆಗೆ ಕಳಿಸಿ, ನಂತರ ಅವರೆಲ್ಲರ ನೆರವಿನಿಂದ ಮೆಲ್ಲಗೆ ಕಾಲೂರಿ ನಿಲ್ಲುವಂತಾಗಬೇಕಿತ್ತು. ಹೋಮಿ ಭಾಭಾ ಆರಂಭಿಸಿದ ಅಣುಶಕ್ತಿ ಇಲಾಖೆಯಲ್ಲೇ ಬಾಹ್ಯಾಕಾಶ ಸಂಶೋಧನೆಯ ಚಿಕ್ಕ ಕೆಲಸವೂ ಆರಂಭವಾಯಿತು. ಕೇರಳದ





ವಿಕ್ರಮ್ ಲ್ಯಾಂಡರ್ ಚಂದ್ರನ ಅಂಗಳಕ್ಕೆ ಕಾಲಿಡುವ ಮೂಲಕ ಭಾರತ ಐತಿಹಾಸಿಕ ಸಾಧನೆ ಮಾಡಿದೆ. ಚಂದ್ರಯಾನ 3 ಯೋಜನೆ ಭಾರತದ ಹಲವು ವರ್ಷಗಳ ಕನಸಾಗಿದೆ. ಇಸ್ರೋ ವಿಜ್ಞಾನಿಗಳು ಭಾರತೀಯರೆಲ್ಲರ ಕನಸನ್ನು ನನಸು ಮಾಡಿದ್ದಾರೆ.

ಬಾಹ್ಯಾಕಾಶ ವಿಜ್ಞಾನಕ್ಕೆ ಪ್ರಾರಂಭದ ದಿನಗಳಲ್ಲಿಯೇ ಬೆಂಬಲ ಮತ್ತು ನೆರವನ್ನು ನೀಡಿದ್ದ ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರನ್ನು ನೆನಪು ಮಾಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ದೇಶದ ವಿಜ್ಞಾನಿಗಳ ನಿರಂತರ ಪ್ರಯತ್ನ ಮತ್ತು ದಶಕಗಳ ಪರಿಶ್ರಮ ಫಲ ನೀಡಿದೆ.

ಚಂದ್ರನ ದಕ್ಷಿಣ ಧ್ರುವದಲ್ಲಿ ಚಂದ್ರಯಾನ 3 ಯಶಸ್ವಿಯಾಗಿ ಇಳಿಯುವ ಮೂಲಕ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಅಪೂರ್ವವಾದ ಸಾಧನೆ ಮಾಡಿದೆ. ಭಾರತೀಯರೆಲ್ಲರಿಗೂ ಇದು ಹೆಮ್ಮೆಯ ಕ್ಷಣ. ಈ ಅಸಾಧಾರಣ ಸಾಧನೆ ಮಾಡಿದ ಪ್ರತಿಯೊಬ್ಬ ವಿಜ್ಞಾನಿಗಳಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಭಾರತವು ಬಾಹ್ಯಾಕಾಶ ಕ್ಷೇತ್ರದಲ್ಲಿ ಜಗತ್ತಿನ ಮುಂಚೂಣಿ ದೇಶಗಳ ಸಾಲಿನಲ್ಲಿ ಮತ್ತೊಮ್ಮೆ ನಿಚ್ಚಳವಾಗಿ ಪ್ರಕಾಶಿಸಿದೆ.

ಇಸ್ರೋ ಸಂಸ್ಥೆಯ ಮುಂದಿನ ದಿನಗಳ ಎಲ್ಲಾ ಪ್ರಯತ್ನಗಳಿಗೂ ಶುಭ ಹಾರೈಸುತ್ತೇನೆ.

**– ಸಿದ್ದರಾಮಯ್ಯ, ಮುಖ್ಯಮಂತ್ರಿಗಳು**



Downloaded From:www.kpscvaani.com

'ತುಂಬಾ' ಎಂಬಲ್ಲಿ ಖಾಲಿ ಇದ್ದಿದ್ದ ಹಳೇ ಚರ್ಚ್ ಒಂದರ ಪ್ರಾಂಗಣದಲ್ಲಿ ರಾಕೆಟ್ ನಿರ್ಮಾಣ ಶುರುವಾಯಿತು. ಸಾಗರತೀರಕ್ಕೆ ರಾಕೆಟ್‌ಗಳನ್ನು ಸಾಗಿಸಲು ರಸ್ತೆ ಕೂಡ ಇರಲಿಲ್ಲ. ಸೈಕಲ್ ಮೇಲೆ ರಾಕೆಟ್‌ಗಳ ಬಿಡಿಭಾಗಗಳನ್ನು ಸಾಗಿಸಿದ್ದೇ ಒಂದು ಮೈಲುಗಲ್ಲಾಗಿ ಉಳಿಯಿತು. ಈ ನಡುವೆ ಹೋಮಿ ಭಾಭಾ ಅದಾಗಲೇ ವಿಮಾನ ದುರ್ಘಟನೆಯಲ್ಲಿ ಗತಿಸಿದ್ದರು. ವಿಕ್ರಮ್ ಸಾರಾಭಾಯಿ ನಿಗೂಢ ಕಾರಣಗಳಿಂದ ಹಠಾತ್ ನಿಧನರಾದರು. ಅವರ ಸ್ಥಾನಕ್ಕೆ ಸತೀಶ್ ಧವನ್ ಬಂದರು. ನೆಹರೂ ಯುಗ ಮುಗಿದು ಇಂದಿರಾ ಗಾಂಧಿಯವರ ನೇತೃತ್ವದಲ್ಲಿ ಯು. ಆರ್ ರಾವ್, ಎಪಿಜೆ ಅಬ್ದುಲ್ ಕಲಾಂ, ನಂಬಿ ನಾರಾಯಣನ್ ಮುಂತಾದ ಪ್ರತಿಭಾವಂತರು ಇಸ್ರೋ ರಥವನ್ನು ಮುನ್ನಡೆಸುತ್ತ ಬಂದರು.

ಅಮೆರಿಕ ಚಂದ್ರನ ಮೇಲೆ ಕಾಲಿರಿಸಿದ ವರ್ಷವೇ (1969) **'ಇಸ್ರೋ'** ಸಂಸ್ಥೆ ಬೆಂಗಳೂರಿನಲ್ಲಿ ಸ್ಥಾಪನೆಯಾಯಿತು. ರಾಕೆಟ್ ನಿರ್ಮಾಣ ಮತ್ತು ಉಪಗ್ರಹಗಳ ತಯಾರಿಕೆಗೆ ಬೇಕಾದ ಪರಿಣತಿ ಮತ್ತು ತರಬೇತಿಗಳನ್ನು ಅಮೆರಿಕ ಮತ್ತು ರಷ್ಯಾ ಎರಡರಿಂದಲೂ ಪಡೆಯುವಲ್ಲಿ ಭಾರತೀಯ ರಾಜತಾಂತ್ರಿಕ ಕೌಶಲ ನೆರವಿಗೆ ಬಂತು. ಅಮೆರಿಕದ (ನಾಸಾ ನಿರ್ಮಿತ) ರಾಕೆಟ್‌ಗಳ ಮೇಲೆ ನಮ್ಮವರು ನಿರ್ಮಿಸಿದ ಆರ್ಯಭಟ, ಆಪಲ್ ಹೆಸರಿನ ಕೃತಕ ಉಪಗ್ರಹಗಳು ಕಕ್ಷೆಗೇರಿದವು. ರಷ್ಯಾದ ನೆರವಿನಿಂದ ರೋಹಿಣಿ, ಭಾಸ್ಕರ ಕಕ್ಷೆಗೇರಿದವು. ರಷ್ಯಾದ ನೌಕೆಯಲ್ಲಿ ಕೂತು ರಾಕೇಶ್ ಶರ್ಮಾ ಭೂಕಕ್ಷೆಯಲ್ಲಿ ನಾಲ್ಕು ದಿನ ಸುತ್ತಿ ಬಂದರು (ಕಕ್ಷೆಗೇರಿದಾಗ ಶ್ರೀಮತಿ ಇಂದಿರಾ ಗಾಂಧಿ ಅವರು "ಹೇಗೆ ಕಾಣುತ್ತಿದೆ ಭಾರತ ಅಲ್ಲಿಂದ?" ಎಂದು ಕೇಳಿದ್ದು, ಅದಕ್ಕೆ ಶರ್ಮಾ "ಸಾರಾ ಜಹಾಂಸೇ ಅಚ್ಛಾ" ಎಂದಿದ್ದು ನಮ್ಮ ದಾಖಲೆಯಲ್ಲಿ ಅಚ್ಚಳಿಯದೆ ಉಳಿಯುವಂತಾಯಿತು).

ಎರಡೂ ಶಕ್ತರಾಷ್ಟ್ರಗಳ ನೆರವಿನಿಂದ ನಮ್ಮ ವಿಜ್ಞಾನಿಗಳು ಆರಂಭಿಕ ತರಬೇತಿ ಮತ್ತು ತಾಂತ್ರಿಕ ನೆರವನ್ನು ಪಡೆದರು ನಿಜ. ಆದರೆ ಮುಂದೆ ಶ್ರೀಹರಿಕೋಟಾದಲ್ಲಿ ನಮ್ಮವರ ಸ್ವಂತ ಶ್ರಮದ ಸಾಧನೆಗಳು ಫಲಕೊಡಲು ಆರಂಭಿಸಿದವು. ಅಲ್ಲಿಂದ ಮುಂದೆ ವಿದೇಶೀ ನೆರವೂ ಕಡಿಮೆಯಾಗುತ್ತ ಬಂತು. ಒಂದು ಹಂತದಲ್ಲಿ ರಾಕೆಟ್ ಉಡಾವಣೆಗೆ ಬೇಕಾದ ಕ್ರಯೋಜೆನಿಕ್ ಎಂಜಿನ್ನನ್ನು ನೀಡಲು ಅಮೆರಿಕ ನಿರಾಕರಿಸಿತು. ನೀಡದಂತೆ ರಷ್ಯಾದ ಮೇಲೂ ಅದು ಒತ್ತಡ ಹೇರಿತು. ಆಗ ಧೃತಿಗೆಡದೆ ಇಸ್ರೋ ತಾನೇ ಬಲಿಷ್ಠ ರಾಕೆಟ್‌ಗಳನ್ನು ನಿರ್ಮಿಸುವಲ್ಲಿ ಜಯಶಾಲಿಯಾಯಿತು. ಭಾರತದ್ದೊಂದೇ ಅಲ್ಲದೆ ಬ್ರಿಟನ್, ಕೆನಡಾ, ಬ್ರಝಿಲ್ ಸೇರಿದಂತೆ ಅನೇಕ ವಿದೇಶೀ ಉಪಗ್ರಹಗಳನ್ನು ಜಿಎಸ್‌ಎಲ್‌ವಿ ಪಿಎಸ್‌ಎಲ್‌ವಿ ರಾಕೆಟ್‌ಗಳ ಮೂಲಕ ಕಡಿಮೆ ವೆಚ್ಚದಲ್ಲಿ ಕಕ್ಷೆಗೆ ಏರಿಸತೊಡಗಿತು.

ಭಾರತದ ಎಲ್ಲ ಪ್ರಧಾನ ಮಂತ್ರಿಗಳೂ **'ಇಸ್ರೋ'** ಸಂಸ್ಥೆಗೆ ಸೂಕ್ತ ಬೆಂಬಲ ನೀಡುತ್ತ ಬಂದರು. 1990ರ ದಶಕದಲ್ಲೇ ಕನ್ನಡಿಗ ಯು.ಆರ್. ರಾವ್ ಅವರ ನಿರ್ದೇಶನದಲ್ಲಿ ಚಂದ್ರ, ಮಂಗಳನ ನೌಕೆಗಳನ್ನು ಹಾರಿಬಿಡುವ ನೀಲನಕ್ಷೆ ಸಿದ್ಧವಾಗುತ್ತಲಿತ್ತು. ಚಂದ್ರನ ಭೇಟಿಗೆ **'ಸೋಮಯಾನ'** ಎಂದಿದ್ದ ಹೆಸರನ್ನು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರು 1999ರಲ್ಲಿ 'ಚಂದ್ರಯಾನ' ಎಂದು ಬದಲಿಸಿದರು. 'ರಾಕೆಟ್ ವಿಜ್ಞಾನಿ' ಎಂದೇ ಖ್ಯಾತಿ ಪಡೆದಿದ್ದ ಎಪಿಜೆ ಅಬ್ದುಲ್ ಕಲಾಮ್ ರಾಷ್ಟ್ರಪತಿಯಾಗಿ ಚುನಾಯಿತರಾದ ಮೇಲೆ **'ಇಸ್ರೋ'** ದ ಕನಸುಗಳಿಗೆ ಇನ್ನಷ್ಟು ಕಸುವು ಬಂತು. ಇತ್ತ ಚೀನಾ ಕೂಡಾ ಬಾಹ್ಯಾಕಾಶದತ್ತ ಒಂದೊಂದೇ ಹೆಜ್ಜೆ ಇಡುತ್ತ ಹೋದಂತೆ, ಭಾರತವೂ ಆ ನಿಟ್ಟಿನಲ್ಲಿ ದೃಢವಾದ ಹೆಜ್ಜೆ ಇಡುತ್ತ ಬಂತು.

ಮುಂದಿನ ಸಾಹಸಗಾಥೆಗಳೆಲ್ಲ ಇತ್ತೀಚಿನವಾಗಿದ್ದರಿಂದ ನಮಗೆ ಗೊತ್ತೇ ಇದೆ. 2009ರಲ್ಲಿ 'ಚಂದ್ರಯಾನ1' ಗಗನನೌಕೆ ಭೂಕಕ್ಷೆಗೆ ಏರಿ, ಭೂಮಿಯ ಗುರುತ್ವ ಬಲದಿಂದ ಪಾರಾಗಿ, ಚಂದ್ರನ ಗುರುತ್ವ ಕ್ಷೇತ್ರವನ್ನು ಸೇರಿ ಚಂದ್ರನ ಪ್ರದಕ್ಷಿಣೆ ಹಾಕಿತು. ಚಂದ್ರನೆಲದಲ್ಲಿ ನೀರಿನ ಪಸೆ ಇದೆ ಎಂಬುದನ್ನು ಗುರುತಿಸಿತು. ನಂತರದ ಹೆಜ್ಜೆಯಾಗಿ 2014ರಲ್ಲಿ 'ಮಂಗಳಯಾನ' ಮೇಲಕ್ಕೇರಿತು. ಇದೇ ಮೊದಲ ಬಾರಿಗೆ ಇನ್ನೊಂದು ಗ್ರಹದ ಕಕ್ಷೆಗೆ ಯಶಸ್ವಿಯಾಗಿ ನಮ್ಮ ನೌಕೆ ಸೇರಿತು. ಅಲ್ಲಿ ಇಳಿಯುವ ಸಾಹಸ ಮಾಡಲಿಲ್ಲ. ಅದಕ್ಕೆ ಇನ್ನೂ ಹೆಚ್ಚಿನ ತಾಲೀಮು ಬೇಕು. ಆದರೆ ಮಂಗಳ ಗ್ರಹದ ಲಕ್ಷಣಗಳನ್ನೆಲ್ಲ ಅಧ್ಯಯನ ಮಾಡಿ ಭೂಮಿಗೆ ವರದಿಗಳನ್ನು ಕಳಿಸತೊಡಗಿತು. ಈ ನಡುವೆ 2019ರಲ್ಲಿ ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿಯಲೆಂದು "ಚಂದ್ರಯಾನ2" ಸಕಲ ಸಿದ್ಧತೆ ನಡೆಸಿತು. ಯಶಸ್ವಿಯಾಗಿ ಅದು ಚಂದ್ರನ ಕಕ್ಷೆ ಸೇರಿ ತನ್ನೊಳಗಿನ ವಿಕ್ರಮ್ ಲ್ಯಾಂಡರ್ (ಇಳಿಯಂತ್ರ)ವನ್ನು ಪ್ರತ್ಯೇಕಿಸಿತು. ಆದರೆ ಚಂದ್ರನ ದುರ್ಬಲ ವಾತಾವರಣದಲ್ಲಿ ತೇಲಿ ಮೆಲ್ಲಗೆ ಇಳಿಯುವ ಬದಲು ಹಠಾತ್ತಾಗಿ ಧುಮುಕಿ ನಾಪತ್ತೆಯಾಯಿತು. ನಾವಷ್ಟೇ ಅಲ್ಲ, ಅಮೆರಿಕ, ರಷ್ಯಾ ಮತ್ತು ಚೀನಾ ಕೂಡ ಇಂಥ ಪ್ರಾರಂಭದ ವೈಫಲ್ಯಗಳಿಂದ ಪಾಠ ಕಲಿತಿವೆ. ನಾವೂ ಕಲಿತೆವು ಎಂಬುದು ಈಗಿನ "ಚಂದ್ರಯಾನ3"ರ ಯಶಸ್ವೀ ಕಾರ್ಯಾಚರಣೆಯಲ್ಲಿ ಸಾಬೀತಾಗಿದೆ.

ಯಶಸ್ವಿಯಾಗಿ ವಿಕ್ರಮನನ್ನು ಹೂವಿನಂತೆ ಚಂದ್ರ ನೆಲದ ಮೇಲೆ ಇಳಿಸಿದ್ದೇವೆ ನಿಜ. ಅದರೊಳಗಿಂದ ಪ್ರಜ್ಞಾನ್ ತೆವಳುಬಂಡಿ ಕೂಡ ಹೊರಬಂದು ಮೆಲ್ಲಗೆ ಓಡಾಡತೊಡಗಿದೆ. ಅಲ್ಲಿನ ಒಣ ಮರಳನ್ನು ಮೂಸುತ್ತ, ಖನಿಜಗಳನ್ನು ಗುರುತಿಸುತ್ತ, ಚಂದ್ರಕಂಪನಗಳನ್ನು ಅಳೆಯುತ್ತ ಅದು ಸಾಗುತ್ತಿದೆ. ಅದೆಲ್ಲ ಸರಿ, ಆ ಬರಡು ನೆಲದ ಅನ್ವೇಷಣೆಯಿಂದ ನಮಗೇನು ಪ್ರಯೋಜನ?

**ಈ ಪ್ರಶ್ನೆಗೆ ಉತ್ತರ ಸರಳವಾಗಿದೆ:** ಇಷ್ಟು ಅಲ್ಪವೆಚ್ಚದಲ್ಲಿ ಚಂದ್ರನನ್ನು ತಲುಪಬಹುದಾದರೆ ಬೇರೆ ಬೇರೆ ದೇಶಗಳು ತಮ್ಮ ಸಲಕರಣೆಗಳನ್ನು ಇಳಿಸಲು **'ಇಸ್ರೋ'** ದ ನೆರವನ್ನು ಕೋರಬಹುದು. ನಮಗಾಗಿ, ಇಲ್ಲವೆ ಇತರ ದೇಶಗಳಿಗಾಗಿ ನಾವು ಅಲ್ಲಿ ಟೆಲಿಸ್ಕೋಪ್ ಇಡಬಹುದು. ಅಲ್ಲಿನ ನಿಚ್ಚಳ ಆಕಾಶದಲ್ಲಿ ನಕ್ಷತ್ರಗಳು ಸುಸ್ಪಷ್ಟವಾಗಿ ಕಾಣುತ್ತವೆ. ಬೇರೆ ಗ್ರಹಗಳಿಗೆ ಅಲ್ಲಿಂದ ನೌಕೆಗಳನ್ನು ಚಿಮ್ಮಿಸುವುದು ಸುಲಭ. ಏಕೆಂದರೆ ಚಂದ್ರನಲ್ಲಿ ಗುರುತ್ವಬಲ ತೀರ ದುರ್ಬಲ ಇದೆ. ಅಲ್ಲಿ ಲಭ್ಯವಿರುವ 'ಹೀಲಿಯಂ' ಎಂಬ ಅಪರೂಪದ ಪರಿಸರಸ್ನೇಹಿ ಶಕ್ತಿದ್ರವ್ಯವನ್ನು ಇಲ್ಲಿಗೆ ತರಬಹುದು. ಇಂಥ ವಾಣಿಜ್ಯ ಅವಕಾಶಗಳ ಹೆಬ್ಬಾಗಿಲೇ ಅಲ್ಲಿ ತೆರೆಯಲಿದೆ.

ಇವೆಲ್ಲಕ್ಕಿಂತ ಮುಖ್ಯವಾಗಿ, ಬಾಹ್ಯಾಕಾಶ ಯಾನಗಳಲ್ಲಿ ಬಳಸಿದ ಅತಿ ವಿಶಿಷ್ಟ ಸಾಧನ ಸಲಕರಣೆಗಳು ಮುಂದಿನ ದಿನಗಳಲ್ಲಿ ನಮ್ಮ ಶಾಲೆ–ಕಾಲೇಜುಗಳನ್ನೂ ತಲುಪಲಿವೆ. ನಾಳಿನ ಪೀಳಿಗೆಯನ್ನು ವಿಶ್ವಪರ್ಯಟನಕ್ಕೆ ಸಜ್ಜುಗೊಳಿಸಲಿವೆ.

ಅದಲ್ಲವೆ ಅಸಲೀ ಲಾಭ? ■


Downloaded From:www.kpscvaani.com



ಶಕ್ತಿ ಯೋಜನೆ

# ಸ್ತ್ರೀಯರ ಪಾಲಿಗೆ ಸಂಜೀವಿನಿ...

**ಶಕ್ತಿ ಯೋಜನೆಯು ಪ್ರಾರಂಭವಾಗಿ ಎರಡು ತಿಂಗಳು ಕಳೆದಿದ್ದು, ಮಹಿಳೆಯರಿಗೆ ಈ ಯೋಜನೆಯು ಸಂಜೀವಿನಿಯಾಗಿ ಪರಿಣಮಿಸಿದೆ.**

ಯಗಟಿ ಮೋಹನ್

ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ಅವರು ಹೆಣ್ಣನ್ನು ವರ್ಣಿಸಿರುವ ರೀತಿ ಇದು. ಹೆಣ್ಣು ಸಂಸಾರದ ಕಣ್ಣು, ಆಕೆ ಹರಿಯುವ ನದಿ ಇದ್ದಂತೆ, ಇಡೀ ಜಗತ್ತಿನ ಭಾರ ಹೊತ್ತವಳು, ಮಾತೃ ಹೃದಯಿ ಎಂದೆಲ್ಲ ವರ್ಣನೆಗಳು ಇವೆ. ಕುಟುಂಬಕ್ಕೆ ಹೆಣ್ಣೇ ಆಧಾರ. ಆಕೆ ತ್ಯಾಗಮಯಿ, ಸಂಸಾರದ ವಿವಿಧ ಹಂತಗಳಲ್ಲಿ ಅವಳು ನಿರ್ವಹಿಸುವ ಜವಾಬ್ದಾರಿ ಹಾಗೆ-ಹೀಗೆ ಬಂದು ಹೋಗುವ ಪಾತ್ರಗಳಲ್ಲ. ಹೆಣ್ಣೆಂದರೆ ಬದುಕು.

ಹೀಗೆ ಉತ್ತಮ ಸಮಾಜ ನಿರ್ಮಿಸುವಲ್ಲಿ ಆಕೆಯ ಪಾತ್ರ ದೊಡ್ಡದು. ಇದನ್ನು ಕಂಡೇ ಕನ್ನಡದ ರಸ ಋಷಿ ರಾಷ್ಟ್ರಕವಿ ಕುವೆಂಪು ಅವರು ಹೆಣ್ಣನ್ನು ಒಂದು ಮಹಾನ್ ಶಕ್ತಿ ಎಂದಿದ್ದಾರೆ.

ನಮ್ಮ ಸಾಮಾಜಿಕ ವ್ಯವಸ್ಥೆ ಬದಲಾದಂತೆ ಹೆಣ್ಣಿನ ಸ್ಥಾನಮಾನವೂ ಬದಲಾಗುತ್ತಿದೆ. ಇಂದು ಹೆಣ್ಣು ಬರೀ ಅಡುಗೆ ಮನೆಗೆ, ಸಂಸಾರದ ನೊಗ ಹೊರಲಿಕ್ಕಷ್ಟೇ ಸೀಮಿತವಾಗಿಲ್ಲ. ಭೂಮಿಯ ಮೇಲಷ್ಟೇ ಅಲ್ಲದೆ ಅಂತರಿಕ್ಷಕ್ಕೂ ಹಾರಿ ಸಾಧನೆ ಮೆರೆದಿದ್ದಾಳೆ. ಹೀಗೆ ಎಲ್ಲ ರಂಗಗಳಲ್ಲೂ ಮುನ್ನಡೆ ಸಾಧಿಸುವಷ್ಟರ ಮಟ್ಟಿಗೆ ಪ್ರಗತಿಯಾಗಿದೆ. ಇದು ಕೆಲವು ಉದಾಹರಣೆಗಳು ಮಾತ್ರ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆ ಇನ್ನೂ ಪೂರ್ಣ ಸ್ವಾವಲಂಬಿಯಾಗಿಲ್ಲ. ಸಂಪ್ರದಾಯದ ಕಟ್ಟುಪಾಡುಗಳನ್ನು ಕಿತ್ತು ಇನ್ನೂ ಹೊರ ಬಂದಿಲ್ಲ.

ರಾಜ್ಯ ಸರ್ಕಾರಿ ಸ್ವಾಮ್ಯದ ಬಸ್ಸುಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸುವ ಶಕ್ತಿ ಯೋಜನೆಯು ಮಹಿಳೆಯರನ್ನು ಮುಖ್ಯವಾಹಿನಿಗೆ ತಂದು ಪುರುಷರಿಗೆ ಸಮಾನವಾಗಿ ನಿಲ್ಲುವಂತೆ ಮಾಡುವ ಪ್ರಯತ್ನಕ್ಕೆ ಸಹಕಾರಿಯಾಗಿದೆ.

ಕರ್ನಾಟಕದಲ್ಲಿ ಅಭಿವೃದ್ಧಿಯ ಹೊಸ ಕನಸುಗಳೊಂದಿಗೆ ಅಧಿಕಾರಕ್ಕೆ ಬಂದಿರುವ ನೂತನ ಸರ್ಕಾರ ಮಹಿಳೆಯರ ಸಮಗ್ರ ಪ್ರಗತಿಗಾಗಿ ರೂಪಿಸಿ ಜಾರಿಗೊಳಿಸಿರುವ



Downloaded From:www.kpscvaani.com



ಯೋಜನೆಗಳ ಪೈಕಿ ಶಕ್ತಿ ಯೋಜನೆ ಅಗ್ರ ಸ್ಥಾನದಲ್ಲಿ ನಿಲ್ಲುತ್ತದೆ. ಈ ಯೋಜನೆ ಜಾರಿಗೊಂಡು ಈಗ ಎರಡು ತಿಂಗಳು ಕಳೆದು ಮೂರನೇ ತಿಂಗಳಿಗೆ ಕಾಲಿಟ್ಟಿರುವ ಈ ಸಂದರ್ಭದಲ್ಲಿ ಅದಕ್ಕೆ ಸಿಕ್ಕಿರುವ ಉತ್ತೇಜನದಾಯಕ ಪ್ರತಿಕ್ರಿಯೆಯೇ ಒಂದು ಅದ್ಭುತ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯ ಎಲ್ಲ ನಿಗಮಗಳ ವ್ಯಾಪ್ತಿಯಲ್ಲಿ ಸಂಚರಿಸುವ ನಿಗಮದ ಸಾಮಾನ್ಯ ಬಸ್ಸುಗಳಲ್ಲಿ ರಾಜ್ಯದ ಉದ್ದಗಲಕ್ಕೂ ಪ್ರಯಾಣಿಸುವ ಸಲುವಾಗಿ ಟಿಕೆಟ್ ಪಡೆಯಲು ಮಹಿಳೆಯರು ಈಗ ದುಡ್ಡು ಕೊಡಬೇಕಿಲ್ಲ. ಉಚಿತವಾಗಿ ರಾಜ್ಯದ ಉದ್ದಗಲಕ್ಕೂ ಪ್ರಯಾಣಿಸಬಹುದು.

ಮುಖ್ಯ ಸಂಗತಿ ಎಂದರೆ ಈ ಯೋಜನೆ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಸಂಚರಿಸುವ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಬಸ್ಸುಗಳಿಗೂ ವಿಸ್ತರಣೆ ಆಗಿದೆ. ರಾಜ್ಯದ ರಾಜಧಾನಿ ಕೇಂದ್ರವಾದ ಮತ್ತು ಸಿಲಿಕಾನ್ ಸಿಟಿ ಎಂಬ ಹೆಗ್ಗಳಿಕೆಗೂ ಪಾತ್ರವಾದ ಬೆಂಗಳೂರಿನಲ್ಲಿ ವಿಶೇಷವಾಗಿ ಈ ಯೋಜನೆ ದುಡಿಯುವ ಮಹಿಳೆಯರಿಗೆ ಅದರಲ್ಲೂ ಮಧ್ಯಮ ಮತ್ತು ಕೆಳಮಧ್ಯಮ ವರ್ಗದ ದುಡಿಯುವ ಮಹಿಳೆಯರಿಗೆ ವರದಾನವಾಗಿದೆ.

**ಗ್ರಾಮೀಣ ಮಹಿಳೆಯರಿಗೂ ಸಂಜೀವಿನಿ**

ಇನ್ನು ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಮಹಿಳೆಯರು ಈ ಸೌಲಭ್ಯ ಜಾರಿಯಿಂದ ಸಂತಸಗೊಂಡಿದ್ದಾರೆ. ನಾಲ್ಕು ಗೋಡೆಗಳ ನಡುವೆ ಸಂಸಾರದ ಕೋಟೆಯಲ್ಲಿ ಬಂಧಿಗಳಂತೆ ಬದುಕುತ್ತಿದ್ದ ಮಹಿಳೆಯರು ಈಗ ಗೂಡಿನಿಂದ ಹೊರಬಂದು ಸ್ವಚ್ಛಂದ ಹಕ್ಕಿಗಳಂತೆ ಸಾರಿಗೆ ಸಂಸ್ಥೆಯ ಬಸ್ಸುಗಳಿಗೆ ಮುಗಿಬಿದ್ದು ರಾಜ್ಯದ ತೀರ್ಥ ಕ್ಷೇತ್ರಗಳು, ಪ್ರವಾಸಿ ತಾಣಗಳತ್ತ ಹೊರಟಿದ್ದಾರೆ. ಮತ್ತೊಂದು ಕಡೆ ಇದು ವಾಣಿಜ್ಯ ಚಟುವಟಿಕೆ ಗರಿಗೆದರಲು ಅವಕಾಶ ಬಂದೊದಗಿದಂತ್ತಾಗಿದೆ.

ಶಕ್ತಿ ಯೋಜನೆ ಮಹಿಳೆಯರ ಪಾಲಿಗೆ ಹೊಸ ಪ್ರಪಂಚದ ಬಾಗಿಲನ್ನು ತೆರೆದಿದ್ದು, ಹೊಸ ಬದುಕಿನ ಮಾರ್ಗಗಳನ್ನು ತೆರೆದಿಟ್ಟಿದೆ. ಆ ಕಾರಣಕ್ಕೇ ಈಗ ಅವರ ಮುಖಗಳಲ್ಲಿ ನೋವಿನ ಗೆರೆಗಳಿದ್ದ ಜಾಗದಲ್ಲಿ ಸಂತೋಷ, ಸಂಭ್ರಮ ಮೂಡಿದೆ. ಇಂಥದೊಂದು ಯೋಜನೆಯನ್ನು ಜಾರಿಗೆ ತಂದು ಸೌಲಭ್ಯ ಕಲ್ಪಿಸಿದ ಸರ್ಕಾರವನ್ನು ಅವರು ಅಭಿನಂದಿಸುತ್ತಿದ್ದಾರೆ. ಯೋಜನೆ ಜಾರಿಗೆ ಬಂದ ದಿನದಿಂದ ಇಲ್ಲಿಯವರೆಗೆ ಕೋಟ್ಯಾಂತರ ಮಹಿಳೆಯರು ಬಸ್ಸುಗಳಲ್ಲಿ ಪ್ರಯಾಣಿಸುತ್ತಿದ್ದಾರೆ.

ಶಕ್ತಿ ಯೋಜನೆಯಿಂದ ರಾಜ್ಯದ ಪ್ರವಾಸಿ ಸ್ಥಳಗಳು ದೇವಾಲಯಗಳನ್ನೊಳಗೊಂಡ ಪುಣ್ಯ ಕ್ಷೇತ್ರಗಳಿಗೂ ವರದಾನವಾಗಿದೆ. ರಾಜ್ಯದ ಪ್ರತಿಷ್ಠಿತ ಮುಜರಾಯಿ ಇಲಾಖೆ ವ್ಯಾಪ್ತಿಗೊಳಪಡುವ ದೇವಾಲಯಗಳಲ್ಲಿ ಮಹಿಳಾ ಭಕ್ತರ ಸಂಖ್ಯೆ ಹೆಚ್ಚಿರುವ ಪರಿಣಾಮ ದೇವಾಲಯಗಳ ಹುಂಡಿಗಳಿಗೆ ಕೋಟ್ಯಾಂತರ ರೂಪಾಯಿಗಳ ಹಣ ಕಾಣಿಕೆ ರೂಪದಲ್ಲಿ ಬರಲಾರಂಭಿಸಿದೆ. ಹೀಗೆ ದೇವಾಲಯಗಳ ಹುಂಡಿಗೆ ಬರುವ ಕಾಣಿಕೆ ರೂಪದ ಹಣ ಸ್ಥಳೀಯ ಅಭಿವೃದ್ಧಿಗೆ ಬಳಕೆ ಆಗಲಿರುವುದರ ಜತೆಗೇ ಸರ್ಕಾರದ ಬೊಕ್ಕಸಕ್ಕೂ ಆದಾಯ ಹರಿದು ಬರಲಿದೆ. ಇದು ಇನ್ನೊಂದು ರೀತಿಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ಸಹಕಾರಿ ಆಗಲಿದೆ.

ಆರಂಭದ ಹಂತದಲ್ಲಿ ಸರ್ಕಾರ ಈ ಯೋಜನೆಯನ್ನು ಘೋಷಿಸಿದಾಗ ಟೀಕೆಗಳೂ ಎದುರಾದವು. ಈಗಾಗಲೇ ಆರ್ಥಿಕ ಸಂಕಷ್ಟದಲ್ಲಿರುವ ಸಾರಿಗೆ ನಿಗಮಗಳಿಗೆ ಇದರಿಂದ ಹೊರೆ ಆಗಲಿದ್ದು, ಇನ್ನಷ್ಟು ನಷ್ಟದ ಹಾದಿಗೆ ತಳ್ಳಲ್ಪಡುತ್ತವೆ ಎಂಬ ಆಕ್ಷೇಪಣೆಗಳೂ ಎದುರಾದವು. ಆದರೆ ಸರ್ಕಾರ ಜನತೆಗೆ ನೀಡಿದ ವಚನ ಪಾಲಿಸುವ ಸಲುವಾಗಿ ದೃಢ ಹೆಜ್ಜೆ ಇಡುವ ಮೂಲಕ ಯೋಜನೆಯನ್ನು ಜಾರಿಗೊಳಿಸಿದ್ದು ಮತ್ತೊಂದು ರೀತಿಯಲ್ಲಿ ಸಾರಿಗೆ ನಿಗಮವನ್ನು ಸಂಕಷ್ಟದಿಂದ ಪಾರು ಮಾಡುವ ಪ್ರಯತ್ನಕ್ಕೂ ಮುನ್ನುಡಿ ಬರೆದಿದೆ.

ದೇಶ ಸುತ್ತು ಕೋಶ ಓದು ಎಂಬುದು ಚಾಲ್ತಿಯಲ್ಲಿರುವ ನಾಣ್ಣುಡಿ. ಶಕ್ತಿ ಯೋಜನೆಯಡಿ ಉಚಿತ ಪ್ರವಾಸದಿಂದಾಗಿ ಮಹಿಳೆಯರಿಗೆ ಹೊಸ ಸ್ಥಳಗಳ ದರ್ಶನದೊಂದಿಗೆ ಅಲ್ಲಿಯ ಜನಜೀವನ, ಸಂಸ್ಕೃತಿ, ಆಹಾರ ಪದ್ಧತಿ, ಕೃಷಿ ವ್ಯವಸ್ಥೆ, ಇತಿಹಾಸ ಹೀಗೆ ಅನೇಕ ವಿಚಾರಗಳ ಪರಿಚಯ ಆಗುತ್ತಿದೆ.

ಒಂದು ಕಡೆ ಉಚಿತ ಪ್ರಯಾಣ ಸಂತೋಷ ನೀಡಿದರೆ, ಮತ್ತೊಂದು ರೀತಿಯಲ್ಲಿ ಅರಿವಿನ ಬೆಳಕು ಮೂಡಲು ಸಹಕಾರಿ ಆಗಿದೆ. ಕರ್ನಾಟಕ ದೇವಾಲಯಗಳ ಬೀಡು, ಪ್ರಕೃತಿ ಸಂಪತ್ತಿನ ನಾಡು, ಪ್ರವಾಸೀ ತಾಣಗಳ ಸ್ವರ್ಗ. ಈಗೀಗ ಔದ್ಯಮಿಕ ಹಾಗೂ ವಾಣಿಜ್ಯ ಕ್ಷೇತ್ರಗಳಲ್ಲೂ ಮುನ್ನಡೆ ಸಾಧಿಸುತ್ತಿದೆ. ರಾಜ್ಯಾದ್ಯಂತ ಇರುವ ಪುಣ್ಯ ಕ್ಷೇತ್ರಗಳಲ್ಲಿನ ದೇವಾಲಯಗಳು ಇದೀಗ ಮಹಿಳೆಯರಿಂದ ತುಂಬಿ ತುಳುಕುತ್ತಿವೆ. ಅಲ್ಲಿನ ಹುಂಡಿಗಳಿಗೆ ಕಾಣಿಕೆ ರೂಪದಲ್ಲಿ ಭಕ್ತರು ಹಣವನ್ನು ಸಲ್ಲಿಸುತ್ತಿರುವುದರಿಂದ ದೇವಾಲಯದ ಹುಂಡಿಗಳು ಭರ್ತಿಯಾಗುತ್ತಿವೆ.

**ಸಾಮಾನ್ಯ ಬಸ್ಸುಗಳಲ್ಲಿ ಮಾತ್ರ ಸೌಲಭ್ಯ**

ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಸಾಮಾನ್ಯ ಬಸ್ಸುಗಳು ಮತ್ತು ಅದಕ್ಕಿಂತ ಸ್ವಲ್ಪ ಮೇಲ್ದರ್ಜೆಯ ರಾಜ ಹಂಸ ಮಾದರಿಯ ಬಸ್ಸುಗಳನ್ನು ಬಿಟ್ಟರೆ ಹವಾ ನಿಯಂತ್ರಿತ ವೋಲ್ವೋ, ಅಂಬಾರಿ ಬಸ್ಸುಗಳು ಸಂಚರಿಸುತ್ತಿವೆ. ಪ್ರಯಾಣಿಕರಿಗೆ ಇವುಗಳಿಂದ ಅತ್ಯುತ್ತಮ ಸಾರಿಗೆ ಸೇವೆಯೂ ದೊರಕಿದೆ. ರಾಜ ಹಂಸ, ವೋಲ್ವೋ ಮತ್ತು ಹವಾನಿಯಂತ್ರಿತ ಬಸ್ಸುಗಳ ಪ್ರಯಾಣದ ಟಿಕೆಟ್ ದರ ಮೊದಲು ತಿಳಿಸಿದ ಸಾಮಾನ್ಯ ಬಸ್ಸುಗಳ ಟಿಕೆಟ್ ದರಕ್ಕೆ ಹೋಲಿಸಿದರೆ ಕೊಂಚ ಹೆಚ್ಚು.

ಸಾಮಾನ್ಯರು ಮತ್ತು ಆರ್ಥಿಕವಾಗಿ ಶಕ್ತಿವಂತರಲ್ಲದವರು ಈ ಹವಾ ನಿಯಂತ್ರಿತ ಬಸ್ಸುಗಳಲ್ಲಿ ಪ್ರಯಾಣಿಸುವುದಿಲ್ಲ. ಹಣವಿದ್ದವರು ಮಾತ್ರ ಮೇಲ್ದರ್ಜೆಯ ಸೌಲಭ್ಯವಿರುವ ಬಸ್ಸುಗಳಲ್ಲಿ ಪ್ರಯಾಣಿಸುತ್ತಾರೆ.



Downloaded From:www.kpscvaani.com

ಇಲ್ಲಿ ಮುಖ್ಯವಾದ ಸಂಗತಿ ಎಂದರೆ ಉಚಿತ ಪ್ರಯಾಣದ ಸೌಲಭ್ಯ ಆರ್ಥಿಕವಾಗಿ ಸ್ಥಿತಿವಂತರಾದವರಿಗೆ ಸಿಗುತ್ತಿಲ್ಲ. ಅವರು ದುಡ್ಡು ಕೊಟ್ಟೇ ಪ್ರಯಾಣಿಸಬೇಕು. ಮತ್ತೊಂದು ಶಕ್ತಿ ಯೋಜನೆ ಮಹಿಳಾ ಪ್ರಯಾಣಿಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಜಾರಿಗೊಳಿಸಿರುವ ಯೋಜನೆ. ಪುರುಷ ಪ್ರಯಾಣಿಕರಿಗೆ ಉಚಿತ ಪ್ರಯಾಣ ಸೌಲಭ್ಯ ಇಲ್ಲ. ಹಾಗಾಗಿ ಇಲ್ಲಿ ನಷ್ಟದ ಬಾಬತ್ತೇ ಇಲ್ಲ.

**ಸರ್ಕಾರದ ನೆರವು:**

ಉಚಿತ ಪ್ರಯಾಣ ಸೌಲಭ್ಯದಿಂದ ಸಾರಿಗೆ ನಿಗಮಗಳಿಗೆ ಆಗುವ ಆರ್ಥಿಕ ಕೊರತೆಯನ್ನು ಸರ್ಕಾರ ಹೇಗೆ ಹೊಂದಿಸುತ್ತದೆ? ಎಂಬ ಪ್ರಶ್ನೆಗೆ ಉತ್ತರವೂ ಇದೆ. ಮೊದಲೇ ಹೇಳಿದಂತೆ ಸಾರಿಗೆ ನಿಗಮ ರಾಜ್ಯ ಸರ್ಕಾರದ ಅಧೀನ ಸಂಸ್ಥೆ. ತೆರಿಗೆ ರೂಪದಲ್ಲಿ ಸಂಗ್ರಹವಾಗುವ ಮೊತ್ತದಲ್ಲಿ ಸರ್ಕಾರ ಈ ನಿಗಮಕ್ಕೆ ಪ್ರತಿ ವರ್ಷ ಅನುದಾನದ ರೂಪದಲ್ಲಿ ಕೊಡುತ್ತದೆ. ಹೀಗಾಗಿ ಆರ್ಥಿಕ ಸಂಕಷ್ಟದ ಸನ್ನಿವೇಶವೇ ಒದಗಿ ಬರುವುದಿಲ್ಲ.

ಈಗಾಗಲೇ ರಾಜ್ಯ ಸರ್ಕಾರ ನಿಗಮಕ್ಕೆ ಎರಡು ಕಂತುಗಳಲ್ಲಿ ಒಟ್ಟು 200 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ. ಈ ಅನುದಾನ ಸಾರಿಗೆ ನಿಗಮಗಳ ಸಿಬ್ಬಂದಿ ವೇತನ, ಬಸ್ಸುಗಳ ನಿರ್ವಹಣೆ ಸೇರಿದಂತೆ ಇತರೆ ಅಗತ್ಯತೆಗಳಿಗೆ ಬಳಕೆ ಆಗಲಿದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಅಗತ್ಯ ಇರುವ ಪೂರ್ಣ ಅನುದಾನ ಬಿಡುಗಡೆ ಮಾಡಲಾಗುವುದು. ಇಲ್ಲಿ ಆರ್ಥಿಕ ಸಂಕಷ್ಟದ ಪ್ರಶ್ನೆಯೇ ಬರುವುದಿಲ್ಲ.

ಸಾರಿಗೆ ನಿಗಮ ಈಗ ಪ್ರಯಾಣಿಕರ ಅನುಕೂಲಕ್ಕೆ ಹಾಗೂ ಆದಾಯ ನಿರೀಕ್ಷಣೆ ದೃಷ್ಟಿಯಿಂದ ರಾಜ್ಯದ ಪ್ರವಾಸಿ ಸ್ಥಳಗಳಿಗೆ ವಿಶೇಷ ಪ್ಯಾಕೇಜ್ ಪ್ರವಾಸ ಯೋಜನೆಯನ್ನು ರೂಪಿಸಿದ್ದು, ಇದು ನಿಗಮಕ್ಕೆ ಹೆಚ್ಚು ಆದಾಯ ತರುವ ನಿರೀಕ್ಷೆಯಿದೆ.






ಪುಣ್ಯ ಕ್ಷೇತ್ರ, ಪ್ರವಾಸಿ ತಾಣ ಸೇರಿದಂತೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರಯಾಣಿಸುವ ಪ್ರಯಾಣಿಕರು ವಿವಿಧ ರೀತಿಯ ಖರೀದಿ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಗ್ರಾಹಕರು ಖರೀದಿಸಿದ ಪ್ರತಿ ವಸ್ತುವಿಗೆ ತೆರಿಗೆಯನ್ನೂ ಒಳಗೊಂಡಿರುತ್ತದೆ. ಹೀಗೆ ಖರೀದಿ, ಮಾರಾಟ ಪ್ರಕ್ರಿಯೆಯಿಂದ ಸಂಗ್ರಹವಾಗುವ ತೆರಿಗೆ ಸರ್ಕಾರದ ಖಜಾನೆ ಸೇರಿ, ಅಭಿವೃದ್ಧಿ ಚಟುವಟಿಕೆಗಳಿಗೆ ವೆಚ್ಚವಾಗುತ್ತದೆ.

ತೆರಿಗೆ ಸಂಗ್ರಹಣೆ ಪ್ರಮಾಣ ಹೆಚ್ಚಾದಷ್ಟೂ ಸರ್ಕಾರದ ಖಜಾನೆ ತುಂಬುತ್ತದೆ. ಹೀಗೆ ಸಂಗ್ರಹವಾಗುವ ಸಂಪನ್ಮೂಲ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗ ಆಗುತ್ತದೆ. ಇದೇ ತೆರಿಗೆ ಹಣದಲ್ಲಿ ಸಾರಿಗೆ ಸಂಸ್ಥೆಯ ಕಾರ್ಯ ನಿರ್ವಹಣೆಗೆ ಸರ್ಕಾರ ಅನುದಾನ ಬಿಡುಗಡೆ ಮಾಡುತ್ತದೆ. ಹೀಗಿರುವಾಗ ನಷ್ಟದ ಪ್ರಶ್ನೆಯೇ ಇಲ್ಲಿ ಉದ್ಭವಿಸುವುದಿಲ್ಲ.

**ಸಾಧನೆಗೆ ಸಮರ್ಥ ನಾಯಕತ್ವ:**

ಒಂದು ಯೋಜನೆ ಯಶಸ್ವಿಯಾಗಿ ಅನುಷ್ಠಾನಗೊಳ್ಳಬೇಕಾದರೆ ಸಮರ್ಥ ನಾಯಕತ್ವ ಮತ್ತು ಇಚ್ಛಾ ಶಕ್ತಿ ಖಂಡಿತಾ ಅಗತ್ಯ. ಸಾರಿಗೆ ನಿಗಮದಂತಹ ಬೃಹತ್ ಸಂಸ್ಥೆಯ ಆಡಳಿತ ನಿರ್ವಹಣೆ ಸುಲಭ ಸಾಧ್ಯವಲ್ಲ. ವ್ಯವಸ್ಥೆಯಲ್ಲಿ ಏನಾದರೂ ವ್ಯತ್ಯಾಸ ಆದರೆ ಅದರ ಬಿಸಿ ತಟ್ಟುವುದು ಸಂಬಂಧಪಟ್ಟ ಸಚಿವರಿಗೆ. ಸಾರಿಗೆ ಮತ್ತು ಮುಜರಾಯಿ ಖಾತೆ ಸಚಿವರಾಗಿರುವ ರಾಮಲಿಂಗಾರೆಡ್ಡಿಯವರು ಶಕ್ತಿ ಯೋಜನೆಯ ಪರಿಣಾಮಕಾರಿ ಮತ್ತು ಯಶಸ್ವಿ ಅನುಷ್ಠಾನದಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಅವರ ಸುದೀರ್ಘ ಅನುಭವ ಸಾರಿಗೆ ನಿಗಮಗಳ ಪಾಲಿಗೆ ವರವಾಗಿ ಪರಿಣಮಿಸಿದೆ.

ಶಕ್ತಿ ಯೋಜನೆಯ ಪರಿಣಾಮಕಾರಿ

**ನನಸಾದ ಸಿಎಂ ಕನಸು**

ಶಕ್ತಿ ಯೋಜನೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಚಿಂತನೆಯ ಕೂಸು. ಸಾಮಾಜಿಕ ವ್ಯವಸ್ಥೆಯಲ್ಲಿ ತಾರತಮ್ಯ ಇರಬಾರದು. ಸಮ ಸಮಾಜ ನಿರ್ಮಾಣ ಆಗಬೇಕು ಮಹಿಳೆಯರಿಗೂ ಪುರುಷರಿಗೆ ಸಮಾನವಾದ ಹಕ್ಕುಗಳು ಸಿಗಬೇಕು. ಅವರಿಗೆ ಪ್ರವಾಸದಿಂದ ಹೊರ ಜಗತ್ತಿನ ಪರಿಚಯ ಆಗಬೇಕು ಎಂಬುದು ಅವರ ಕನಸಾಗಿತ್ತು. ಅದರ ಒಟ್ಟು ಮೂರ್ತ ಸ್ವರೂಪವೇ ಶಕ್ತಿ ಯೋಜನೆ.



Downloaded From:www.kpscvaani.com




**ಇದು ಲಾಭದ ಹಾದಿ:**

ಸಾರಿಗೆ ನಿಗಮಗಳಿಗೆ ಶಕ್ತಿ ಯೋಜನೆ ಜಾರಿಯಿಂದ ನಷ್ಟವಾಗುತ್ತಿದೆ ಎಂಬ ವಾದಗಳಿಗೆ ಅರ್ಥವೇ ಇಲ್ಲ. ಮುಖ್ಯವಾಗಿ ರಾಜ್ಯ ರಸ್ತೆ ಸಾರಿಗೆ ನಿಗಮದ ಮೊದಲ ಗುರಿ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೇವೆ ಒದಗಿಸುವುದು. ಬರೀ ವಾಣಿಜ್ಯ-ವ್ಯವಹಾರದ ಉದ್ದೇಶಕ್ಕೆ ಕಾರ್ಯ ನಿರ್ವಹಿಸುತ್ತಿಲ್ಲ. ಹಾಗಾಗಿ ಇದು ವ್ಯಾಪಾರಿ ಸಂಸ್ಥೆಯಲ್ಲ. ಸೇವೆ ಅದರ ಮೊದಲ ಗುರಿ, ಲಾಭದ ವಿಚಾರಕ್ಕೆ ಇಲ್ಲಿ ಏನಿದ್ದರೂ ನಂತರದ ಸ್ಥಾನ. ಹಾಗೆ ನೋಡಿದರೆ ಇತರ ರಾಜ್ಯಗಳ ಸಾರಿಗೆ ನಿಗಮಗಳಿಗೆ ಹೋಲಿಸಿದರೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಉತ್ತಮ ಸ್ಥಿತಿಯಲ್ಲಿದೆ.

ಅನುಷ್ಠಾನಕ್ಕೆ ಅವರು ದೃಢ ಸಂಕಲ್ಪದಿಂದ ಹೆಜ್ಜೆ ಇಟ್ಟಿದ್ದಾರೆ. ಜನತಂತ್ರ ವ್ಯವಸ್ಥೆಯಲ್ಲಿ ಅಧಿಕಾರಕ್ಕೆ ಬಂದ ಸರ್ಕಾರ ಹೇಗೆ ಜನಪರವಾಗಿ ಚಿಂತಿಸಿ ಕಾರ್ಯ ಪ್ರವೃತ್ತವಾಗುತ್ತದೆ ಎಂಬುದಕ್ಕೆ ಶಕ್ತಿ ಯೋಜನೆಯೂ ಒಂದು ಸಾಕ್ಷಿ.

**ಶಕ್ತಿ ಯೋಜನೆಯಿಂದ ಮಹಿಳಾ ಆರ್ಥಿಕ ಅಭಿವೃದ್ಧಿ**

ಶಕ್ತಿ ಯೋಜನೆ ಮಹಿಳೆಯರಲ್ಲಿ ಹೊಸ ಭರವಸೆ ಮೂಡಿಸಿದೆ ಅಷ್ಟೇ ಅಲ್ಲ, ಮಹಿಳಾ ಆರ್ಥಿಕ ಸ್ವಾವಲಂಬನೆಗೆ ಮುನ್ನುಡಿ ಬರೆದಿದೆ. ಬೆಂಗಳೂರು ಮಹಾನಗರವೂ ಸೇರಿದಂತೆ ರಾಜ್ಯದ ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ದುಡಿಯುವ ಮಹಿಳೆಯರಿಗೆ ಈ ಯೋಜನೆ ವರದಾನವಾಗಿದೆ.

ಬೆಂಗಳೂರು ಮಹಾನಗರದಲ್ಲಿ ದಿನ ನಿತ್ಯ ಲಕ್ಷಾಂತರ ಮಹಿಳೆಯರು ಉದ್ಯೋಗ ನಿಮಿತ್ತ ಮನೆಯಿಂದ ಹೊರಗೆ ದುಡಿಯುತ್ತಾರೆ. ಮನೆ ಕೆಲಸದಿಂದ ಹಿಡಿದು ಸಿದ್ಧ ಉಡುಪು ಕಾರ್ಖಾನೆ, ಸಾಫ್ಟ್‌ವೇರ್ ಉದ್ಯೋಗ ಸೇರಿದಂತೆ ವಿವಿಧ ಹಂತಗಳಲ್ಲಿ ಮಹಿಳೆಯರು ದುಡಿಯುತ್ತಿದ್ದಾರೆ. ಅದರಲ್ಲೂ ಆರ್ಥಿಕವಾಗಿ ಶಕ್ತಿವಂತರಲ್ಲದ ಮಹಿಳೆಯರದ್ದು ಕರುಣಾಜನಕ ಸ್ಥಿತಿ. ಕುಟುಂಬದ ಅಗತ್ಯತೆಗಳನ್ನು ಪೂರೈಸಲು ದುಡಿಯಲೇ ಬೇಕಾದ ಪರಿಸ್ಥಿತಿ ಅಸಂಖ್ಯ ಮಹಿಳೆಯರದ್ದು.

ಹೀಗಿರುವಾಗ ವಾಸಿಸುವ ಸ್ಥಳದಿಂದ ದೂರದ ಕೆಲಸದ ಸ್ಥಳಕ್ಕೆ ಬಸ್ಸಿನಲ್ಲಿ ಹೋಗುವುದು ದಿನ ನಿತ್ಯದ ದಿನಚರಿ. ಆದರೆ ದುಡಿಮೆಯಿಂದ ಬಂದ ಅಲ್ಪ ಆದಾಯದಲ್ಲಿ ಬಸ್ಸು ಪ್ರಯಾಣಕ್ಕೇ ಒಂದಷ್ಟು ಹಣ ಖರ್ಚಾಗುತ್ತಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ದೂರದ ಸ್ಥಳದಲ್ಲಿ ಕೆಲಸಕ್ಕೆ ಬಸ್ಸಿನಲ್ಲಿ ಹೋಗಲು ಹಣ ತೆರಬೇಕಾಗಿಲ್ಲ. ಪ್ರಯಾಣ ಉಚಿತ. ತಿಂಗಳಿಗೆ ಪ್ರಯಾಣಕ್ಕೆಂದೇ ಖರ್ಚಾಗುತ್ತಿದ್ದ ಹಣವೂ ಉಳಿತಾಯವಾಗುತ್ತಿದೆ. ಮೊದಲಿನ ಧಾವಂತ ಕಡಿಮೆಯಾಗಿ ದುಡಿಯುವ ಮಹಿಳೆಯರ ಮುಖದಲ್ಲಿ ನೆಮ್ಮದಿಯ ನಗೆ ಮೂಡಿದೆ. ಇಂಥದೊಂದು ಸೌಲಭ್ಯ ಕಲ್ಪಿಸಿದ ಸರ್ಕಾರಕ್ಕೆ ಅವರೀಗ ಮನದುಂಬಿ ಹಾರೈಸುತ್ತಾರೆ.

ಬರೀ ಬೆಂಗಳೂರಷ್ಟೇ ಅಲ್ಲ, ರಾಜ್ಯದ ಗ್ರಾಮೀಣ ಪ್ರದೇಶದ ಮಹಿಳೆಯರ ಮುಖದಲ್ಲೂ ಸಂತಸ ಮೂಡಿದೆ. ಹಳ್ಳಿಯಿಂದ ಪಟ್ಟಣಕ್ಕೆ ಕಟ್ಟಡ ನಿರ್ಮಾಣ, ಕೃಷಿ, ಸೇರಿದಂತೆ ನಾನಾ ಕೆಲಸಗಳಿಗೆ ಹಳ್ಳಿಯಿಂದ ತೆರಳುವ ಮಹಿಳೆಯರಿಗೆ ಬಸ್ಸು ಪ್ರಯಾಣದ ಖರ್ಚು ಉಳಿಯುತ್ತಿದೆ. ಈ ಹಣವನ್ನು ಜೋಪಾನವಾಗಿಟ್ಟು, ಸ್ಥಳೀಯವಾಗಿ ಸಣ್ಣ ಪುಟ್ಟ ವ್ಯಾಪಾರ ಚಟುವಟಿಕೆಗಳಿಗೆ ಅಲ್ಪ ಪ್ರಮಾಣದ ಬಂಡವಾಳವಾಗಿ ತೊಡಗಿಸುತ್ತಿರುವುದರಿಂದ ಅವರ ಆದಾಯದ ಪ್ರಮಾಣದಲ್ಲೂ ಏರಿಕೆ ಆಗಿದೆ. ಮಹಿಳಾ ಸ್ವಾವಲಂಬನೆ, ಮಹಿಳಾ ಪುರೋಭಿವೃದ್ಧಿ ಎಂಬುದು ಬರೀ ಘೋಷಣೆ ರೂಪದಲ್ಲಿ ಉಳಿಯದೇ ಸರ್ಕಾರ ಅದನ್ನು ಕಾರ್ಯ ರೂಪಕ್ಕೆ ಇಳಿಸಿದೆ. ಇದು ರಾಜ್ಯದ ಪ್ರಗತಿಗೂ ನೆರವಾಗಿದೆ.

ವಿಶ್ವಸಂಸ್ಥೆಯ ಅಂಕಿ-ಅಂಶಗಳ ಪ್ರಕಾರ ಆಸ್ಟ್ರೇಲಿಯಾದಲ್ಲಿ ಶೇ.65 ರಷ್ಟು ಮಹಿಳೆಯರು ಸಾರ್ವಜನಿಕ ಕ್ಷೇತ್ರದಲ್ಲಿ ಪಾಲ್ಗೊಂಡರೆ, ಅಮೆರಿಕಾದಲ್ಲಿ ಶೇ.57 ರಷ್ಟು ಮಹಿಳೆಯರ ಪಾಲ್ಗೊಳ್ಳುವಿಕೆ ಇದೆ. ಚೀನಾದಲ್ಲಿ ಶೇ.54 ರಷ್ಟು ಮಹಿಳೆಯರು ಭಾಗೀದಾರರಾದರೆ, ನೆರೆಯ ಬಾಂಗ್ಲಾದೇಶದಲ್ಲಿ ಶೇ.38 ರಷ್ಟು ಮಹಿಳೆಯರ ಪಾಲ್ಗೊಳ್ಳುವಿಕೆ ಇದೆ. ಆದರೆ, ನಮ್ಮ ದೇಶದಲ್ಲಿ ಈ ಪ್ರಮಾಣವು ಕೇವಲ ಶೇ.24 ರಷ್ಟಿದೆ. ಇದು ಹೆಚ್ಚಾಗಬೇಕು ಎಂಬ ಮಹತ್ತರ ಉದ್ದೇಶದೊಂದಿಗೆ "ಶಕ್ತಿ" ಯೋಜನೆ ಜಾರಿಗೊಂಡಿದೆ.

ಉಳಿತಾಯದ ಮೂಲಕ ಮಕ್ಕಳ ಭವಿಷ್ಯ ರೂಪಿಸುವ, ಕುಟುಂಬದ ಆರ್ಥಿಕ ಭದ್ರತೆಯನ್ನು ಹೆಚ್ಚಿಸುವ ಕೆಲಸದಲ್ಲಿ ನಿರತಳಾಗಿದ್ದಾಳೆ. ಇದು ರಾಜ್ಯದ ಇಂತಹ ನಾನಾ ಮಾರುಕಟ್ಟೆಗಳಿಗೆ ಮಾತ್ರ ಸೀಮಿತವಲ್ಲ, ಹಲವಾರು ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ. ಮಾಲ್‌ಗಳು, ಮಾರುಕಟ್ಟೆ ಪ್ರದೇಶಗಳು, ಹೋಟೆಲ್‌ಗಳಲ್ಲಿ ಮಹಿಳೆಯರ ಓಡಾಟ ಕಂಡು ಬರುತ್ತಿದೆ.

ಈ ಮಹತ್ವಾಕಾಂಕ್ಷಿ ಯೋಜನೆ ಹಣ ಉಳಿತಾಯ ಮಾಡುವುದಷ್ಟೇ ಅಲ್ಲದೇ ಸಮಾನತೆ ತರಲು ಸಹಕಾರಿ ಆಗಿದೆ. ಜನರ ಜೀವನೋಪಾಯದ ಸುಧಾರಣೆ, ಬಡತನ ತೀವ್ರತೆಯನ್ನು ಕಡಿಮೆ ಮಾಡುವ ಈ ಕಾರ್ಯಕ್ರಮ ಮಹಿಳೆಯರ ಸಮಗ್ರ ಅಭಿವೃದ್ಧಿಗೆ ದಾರಿ ತೆರೆದಿಟ್ಟಿದೆ. ಕಡು ಬಡವರು, ಅವಕಾಶ ವಂಚಿತರಿಗೆ ಉಳಿತಾಯ ಮಾಡಲು, ಸಾಲ ಪಾವತಿ, ವಿಮೆ ಕಂತು ಕಟ್ಟುವ ಹತ್ತು ಹಲವು ಕಾರ್ಯಕ್ರಮಗಳನ್ನು ಪ್ರವೇಶಿಸಲು ಮತ್ತು ಈ ಮೂಲಕ ಸಮೃದ್ಧ ಬದುಕು ಕಟ್ಟಿಕೊಳ್ಳಲು ಪೂರಕವಾಗಿವೆ. ಒಟ್ಟಿನಲ್ಲಿ ಮಹಿಳಾ ಉದ್ಯಮಶೀಲತೆ, ಕೌಶಲ್ಯಾಭಿವೃದ್ಧಿಗೂ ಶಕ್ತಿ ಯೋಜನೆ ನೀರೆರೆಯುತ್ತಿದೆ.



Downloaded From:www.kpscvaani.com



# ಕರುನಾಡ ಪ್ರವಾಸೋದ್ಯಮಕ್ಕೆ ಮತ್ತಷ್ಟು ಜೀವಚೈತನ್ಯ

ಉಮೇಶ್ ಕೊಲಿಗೆರೆ

**ಗಂ**ಧದ ನಾಡು, ಚಂದದ ನೆಲೆವೀಡಾದ ಕರ್ನಾಟಕ ರಾಜ್ಯವು ಮಾಹಿತಿ ತಂತ್ರಜ್ಞಾನ, ಕೈಗಾರಿಕೆ, ಕೃಷಿ, ಸಂಸ್ಕೃತಿ, ಪರಂಪರೆಯಷ್ಟೇ ಶ್ರೀಮಂತ ಸಂಪತ್ತನ್ನು ಪ್ರವಾಸೋದ್ಯಮದಲ್ಲೂ ಹೊಂದಿದೆ.

ವಿಶ್ವದ ಅತಿಸುಂದರ 50 ರಾಷ್ಟ್ರಗಳಲ್ಲಿ ಭಾರತ ಏಳನೇ ಸ್ಥಾನದಲ್ಲಿದ್ದರೆ, ಕರ್ನಾಟಕ ದೇಶಿಯ ಪ್ರವಾಸಿಗರನ್ನು ಸೆಳೆಯುವ ಮೂರನೇ ಪ್ರಮುಖ ರಾಜ್ಯವಾಗಿದೆ. ವಿದೇಶಿ ಪ್ರವಾಸಿಗರ ಆಕರ್ಷಣೆಗೆ ಪಾತ್ರವಾಗಿರುವ ದೇಶದ ಹತ್ತು ರಾಜ್ಯಗಳಲ್ಲಿ ನಮ್ಮ ಕರುನಾಡು ಸ್ಥಾನ ಪಡೆದಿದೆ.

ಪ್ರವಾಸೋದ್ಯಮ ಎಂದರೆ ಶ್ರೀಮಂತರ ಮೋಜು, ಮಸ್ತಿ ಎಂಬ ಕಾಲವೊಂದಿತ್ತು. ಬದಲಾದ ಕಾಲಮಾನದ ಜೀವನ ಶೈಲಿ, ಒತ್ತಡ, ಯಾಂತ್ರೀಕೃತ ಬದುಕಿನ ಜಂಜಾಟಕ್ಕೆ ಸಿಲುಕಿರುವ ಪ್ರತಿಯೊಬ್ಬರಿಗೂ ಪ್ರವಾಸೋದ್ಯಮ ಅಪ್ಯಾಯಮಾನವಾಗಿದೆ. ಪ್ರಸ್ತುತ ದಿನಗಳಲ್ಲಿ ಪ್ರವಾಸೋದ್ಯಮ ಮುದ ನೀಡುವ ಉದ್ದೇಶಕ್ಕೆ ಸೀಮಿತವಾಗದೆ, ಬೊಕ್ಕಸದ ಆದಾಯ ಮೂಲವೂ ಆಗಿದೆ.

**ಪ್ರತಿವರ್ಷ ಸೆಪ್ಟೆಂಬರ್ 27ನ್ನು ವಿಶ್ವ ಪ್ರವಾಸೋದ್ಯಮ ದಿನವನ್ನಾಗಿ ಆಚರಿಸಲಾಗುತ್ತಿದ್ದು, ಈ ಸಂದರ್ಭದಲ್ಲಿ ರಾಜ್ಯದಲ್ಲಿರುವ ಪ್ರವಾಸಿ ತಾಣಗಳ ಮೇಲೆ ಬೆಳಕು ಚೆಲ್ಲಲಾಗಿದೆ.**

ಉದ್ಯೋಗ ಸೃಷ್ಟಿಯಲ್ಲಿ ಕೃಷಿ, ಕೈಗಾರಿಕೆ, ಸೇವಾ ವಲಯ ನಂತರದ ಸ್ಥಾನ ಪಡೆದಿದೆ. ರಾಜ್ಯ ಜಿಡಿಪಿಯಲ್ಲಿ ಪ್ರವಾಸೋದ್ಯಮದ ಪಾಲು ಶೇ.15ನ್ನು ದಾಟಿರುವುದಲ್ಲದೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ 50 ಲಕ್ಕಕ್ಕೂ ಅಧಿಕ ಉದ್ಯೋಗ ಸೃಷ್ಟಿಗೆ ಕಾರಣವಾಗಿದೆ.

ಅಪಾರ ವನ್ಯ ಸಂಪತ್ತು, ಜೀವವೈವಿಧ್ಯತೆಯ ಪಶ್ಚಿಮಘಟ್ಟ, ಮನಮೋಹಕ ಜೋಗ್ ಜಲಪಾತ ಸೇರಿದಂತೆ ಸಾವಿರಾರು ತಾಣಗಳನ್ನು


Downloaded From:www.kpscvaani.com

ಹೊಂದಿದೆ. ಬಹಳ ವರ್ಷಗಳ ಹಿಂದೆಯೇ ಹಂಪಿ, ಪಟ್ಟದಕಲ್ಲು, ಪಶ್ಚಿಮಘಟ್ಟಗಳು ಯುನೆಸ್ಕೋ ಮಾನ್ಯತೆ ಪಡೆದು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿದ್ದರೆ, ಐಹೊಳೆ-ಬಾದಾಮಿ, ಕಲಬುರಗಿ-ಬೀದರ್-ವಿಜಯಪುರ, ಶ್ರೀರಂಗಪಟ್ಟಣ, ಬೇಲೂರು-ಹಳೆಬೀಡು ಪ್ರದೇಶಗಳು ಕ್ರಮೇಣ ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿಕೊಂಡಿವೆ.




ರಾಜ್ಯದಲ್ಲಿ 35 ವನ್ಯ ಜೀವಿ ಅಭಯಾರಣ್ಯಗಳು, ಐದು ರಾಷ್ಟ್ರೀಯ ಉದ್ಯಾನವನಗಳು, 17 ಗಿರಿಧಾಮಗಳು, 320 ಕಿಲೋ ಮೀಟರ್ ಉದ್ದದ ಸಮುದ್ರ ತೀರ, 40ಕ್ಕೂ ಹೆಚ್ಚು ಪ್ರಮುಖ ಜಲಪಾತಗಳು ಕರ್ನಾಟಕದಲ್ಲಿವೆ. ಕದಂಬ, ಚಾಳುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ, ಮೈಸೂರು ಸಂಸ್ಥಾನದ ಒಡೆಯರ್ ಸೇರಿದಂತೆ ಅನೇಕ ರಾಜಮನೆತನಗಳ ಅರಮನೆಗಳು, ಐತಿಹಾಸಿಕ ಕುರುಹುಗಳು ಹಾಗೂ 840ಕ್ಕೂ ಹೆಚ್ಚು ಅಪರೂಪದ ಸ್ಮಾರಕಗಳನ್ನು ಹೊಂದಿದ್ದು, ಅವುಗಳಲ್ಲಿ ಭಾರತದ ಪುರಾತತ್ವ ಇಲಾಖೆ 600ಕ್ಕೂ ಹೆಚ್ಚು ಸ್ಮಾರಕಗಳನ್ನು ಕಾಪಿಟ್ಟುಕೊಂಡು ಬಂದಿದೆ.

ಪ್ರವಾಸಿಗರ ಸ್ವರ್ಗವೆಂದೇ ಕರೆಯಲಾಗುವ ಕರುನಾಡು ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಸೇರಿ ಐದು ರಾಜ್ಯಗಳೊಂದಿಗೆ ಗಡಿ ಹಂಚಿಕೊಂಡಿದೆ. ಕರಾವಳಿ, ಪಶ್ಚಿಮಘಟ್ಟ, ಮಲೆನಾಡಿನಂತಹ ಶ್ರೀಮಂತ ಪ್ರಾಕೃತಿಕ ಸಂಪತ್ತಿನ ಜೊತೆಗೆ ಹಂಪಿ, ಪಟ್ಟದಕಲ್ಲು, ಬಾದಾಮಿಯಂತಹ ಐತಿಹಾಸಿಕ ತಾಣಗಳನ್ನು ಹೊಂದಿದೆ. ಇನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಯಾಣವು ಚಾರಣಿಗರ ಪ್ರಸಿದ್ಧ ಪ್ರವಾಸಿ ತಾಣವಾಗಿದೆ. ಕರ್ನಾಟಕದ ಯಾವುದೇ ಜಿಲ್ಲೆಗೆ ಹೋದರೂ ಅಲ್ಲಿ ಒಂದಲ್ಲ ಒಂದು ಐತಿಹಾಸಿಕ, ಪಾರಂಪರಿಕ, ಸಾಂಪ್ರದಾಯಿಕ, ವಾಸ್ತು ಶಿಲ್ಪ, ನಿಸರ್ಗದತ್ತವಾದ ಪ್ರವಾಸಿತಾಣಗಳು ಇದ್ದೇ ಇರುತ್ತದೆ.

**ಪ್ರೇಕ್ಷಣೀಯ ಸ್ಥಳಗಳ ಖಜಾನೆ ಕರುನಾಡು:**

ಕರುನಾಡಿನಲ್ಲಿ ಸಾಂಸ್ಕೃತಿಕ ಶ್ರೀಮಂತ ಪರಂಪರೆ, ಐತಿಹಾಸಿಕ ಹೆಗ್ಗುರುತುಗಳು, ನಿಸರ್ಗದತ್ತವಾದ ಪ್ರವಾಸಿತಾಣಗಳು ಯಥೇಚ್ಛವಾಗಿವೆ. ರಾಜಧಾನಿ ಬೆಂಗಳೂರು ಮಾಹಿತಿ ತಂತ್ರಜ್ಞಾನ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೆಸರುವಾಸಿಯಾಗಿರುವಂತೆಯೇ ಕಬ್ಬನ್ ಪಾರ್ಕ್, ಲಾಲ್‌ಬಾಗ್ ನಂತಹ ಬಹು ದೊಡ್ಡ ಬೊಟಾನಿಕಲ್ ಉದ್ಯಾನವನಗಳು, ಬೆಂಗಳೂರು ಅರಮನೆ, ಟಿಪ್ಪು ಸುಲ್ತಾನರ ಬೇಸಿಗೆ ಅರಮನೆ, ನೆಹರು ತಾರಾಲಯ, ವಿಶ್ವೇಶ್ವರಯ್ಯ ಮ್ಯೂಸಿಯಂ, ಚಿನ್ನಸ್ವಾಮಿ, ಕಂಠೀರವ ಕ್ರೀಡಾಂಗಣಗಳು, ಕಂಠೀರವ ಸ್ಟುಡಿಯೋ, ಹೆಮ್ಮೆಯ ವಿಧಾನಸೌಧ, ಹೈಕೋರ್ಟ್, ಹಲವು ಪುರಾತನ ದೇವಾಲಯಗಳು ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಿವೆ.



ಅತ್ತ ಮೈಸೂರು ಸಾಂಪ್ರದಾಯಿಕ ನಗರವೆಂದು ಹೆಗ್ಗಳಿಕೆ ಗಳಿಸಿದ್ದು, ಐತಿಹಾಸಿಕ ಅರಮನೆಗಳು, ನಾಡಿನ ಪರಂಪರೆಯ ದಸರಾ. ಚಾಮುಂಡಿ ಬೆಟ್ಟ, ಸೇಂಟ್ ಫಿಲೋಮಿನಾ ಚರ್ಚ್, ಬೃಂದಾವನ ಉದ್ಯಾನ, ಪ್ರಾಣಿ ಸಂಗ್ರಹಾಲಯ ಸೇರಿದಂತೆ ಆಕರ್ಷಕ ಸ್ಥಳಗಳನ್ನು ಹೊಂದಿದೆ. ಮೈಸೂರು ಸಿಲ್ಕ್ ಜಗತ್ ಪ್ರಸಿದ್ಧಿಯಾಗಿದೆ.

ವಿಜಯನಗರ ಸಾಮ್ರಾಜ್ಯದ ಸಾಕ್ಷಿಪ್ರಜ್ಞೆಯಾದ ಹಂಪಿಯಲ್ಲಿನ ವಾಸ್ತುಶಿಲ್ಪ ಮತ್ತು ಕಲ್ಲಿನ ಕೆತ್ತನೆಗಳು ಅಚ್ಚರಿ ಹುಟ್ಟಿಸುತ್ತವೆ. ಚಾಲುಕ್ಯರ ರಾಜಧಾನಿಯಾಗಿದ್ದ ಬಾದಾಮಿ ಬಂಡೆಯಿಂದ ಕತ್ತರಿಸಿದ ಗುಹಾ ದೇವಾಲಯಗಳು, ಸಮೀಪದ ಐಹೊಳೆ



Downloaded From:www.kpscvaani.com



ಮತ್ತು ಪಟ್ಟದಕಲ್ಲಿನಲ್ಲಿರುವ ಪುರಾತನ ದೇವಾಲಯಗಳು ಯುನೆಸ್ಕೋ ವಿಶ್ವ ಪರಂಪರೆಯಲ್ಲಿ ಸ್ಥಾನ ಪಡೆದಿವೆ.

ಕರಾವಳಿಯಲ್ಲಿನ ಪ್ರಾಚೀನ ಕಡಲತೀರಗಳನ್ನು ದೇಶದಲ್ಲೇ ಸ್ವಚ್ಛ ಮತ್ತು ಸುಂದರವೆಂದು ಹೇಳಲಾಗುತ್ತದೆ. ಗೋಕರ್ಣ, ಓಂ ಬೀಚ್ ಮತ್ತು ಕುಡ್ಲೆ ಬೀಚ್ ಜನಪ್ರಿಯ ತಾಣಗಳಾಗಿವೆ. ಮುರುಡೇಶ್ವರ ಭಗವಾನ್ ಶಿವನ ಎತ್ತರದ ಪ್ರತಿಮೆ ಮತ್ತು ರಮಣೀಯ ಕಡಲತೀರದ ನೆಲೆಯಾಗಿದೆ.

ಪಶ್ಚಿಮಘಟ್ಟದ ದಾಂಡೇಲಿ ವನ್ಯಜೀವಿ ಅಭಯಾರಣ್ಯಕ್ಕೆ ಹೆಸರುವಾಸಿಯಾಗಿದೆ, ಅಲ್ಲಿನ ರಿವರ್ ರಾಫ್ಟಿಂಗ್, ಟ್ರೆಕ್ಕಿಂಗ್ ಹಾಗೂ ಇತರ ಸಾಹಸ ಚಟುವಟಿಕೆಗಳು ಪ್ರವಾಸೋದ್ಯಮಕ್ಕೆ ಬೆಂಬಲವಾಗಿವೆ. ಶಾಂತವಾದ ಕಡಲತೀರಗಳನ್ನು ಹೊಂದಿರುವ ಕಾರವಾರ ಜಲ ಕ್ರೀಡೆಗಳಿಗೆ ಉತ್ತಮ ಸ್ಥಳವಾಗಿದೆ.

ಶ್ರವಣಬೆಳಗೊಳದ ಗೊಮ್ಮಟೇಶ್ವರ ಬಾಹುಬಲಿಯ ಬೃಹತ್ ಪ್ರತಿಮೆ ಮತ್ತು ಪ್ರಾಚೀನ ಜೈನ ಯಾತ್ರಾ ಕೇಂದ್ರವಾಗಿದೆ. ದಕ್ಷಿಣ ಕನ್ನಡದ ಧರ್ಮಸ್ಥಳ ಸೇರಿ ಹಲವು ಯಾತ್ರಾಸ್ಥಳಗಳು, ಶಿವನಸಮುದ್ರದ ಗಗನಚುಕ್ಕಿ ಮತ್ತು ಭರಚುಕ್ಕಿಯ ಅವಳಿ ಜಲಪಾತಗಳು. ದಕ್ಷಿಣದ ಕಾಶ್ಮೀರವೆಂದೇ ಕರೆಸಿಕೊಳ್ಳುವ ಕೊಡಗಿನಲ್ಲಿ ಪ್ರಕೃತಿ ಸೌಂದರ್ಯದ ಜೊತೆಗೆ ಹೆಜ್ಜೆ ಹೆಜ್ಜೆಗೂ ಪ್ರವಾಸಿ ತಾಣಗಳಿವೆ. ಕಾಫಿ ತೋಟಗಳು, ಹಚ್ಚ ಹಸಿರಿನ ಮತ್ತು ಮಂಜಿನ ಭೂ ದೃಶ್ಯಗಳಿಗೆ ಹೆಸರುವಾಸಿಯಾದ ಗಿರಿಧಾಮ. ಅಬ್ಬೆ ಜಲಪಾತ ಮತ್ತು ರಾಜಾ ಆಸನಗಳು, ವನ್ಯ ಜೀವಿಧಾಮ, ಆನೆ ಶಿಬಿರ ದುಬಾರೆ, ಕಾವೇರಿಯ ಉಗಮ ಸ್ಥಾನ ಭಾಗಮಂಡಲ ಸೇರಿದಂತೆ ನೋಡಲೇಬೇಕಾದ ಸ್ಥಳಗಳ ಪಟ್ಟಿ ದೊಡ್ಡದಿದೆ. ಪ್ರಾಣಿ ಮತ್ತು ಪಕ್ಷಿ ಪ್ರಿಯರಿಗೆ ಬಂಡಿಪುರ ರಾಷ್ಟ್ರೀಯ ಉದ್ಯಾನವನ ವನ್ಯಜೀವಿ ಅಭಯಾರಣ್ಯ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಕಬಿನಿ ವನ್ಯಜೀವಿ ಅಭಯಾರಣ್ಯಗಳು ಸುರಕ್ಷಿತ ಪ್ರವಾಸೀ ತಾಣಗಳಾಗಿವೆ.

ಮಲೆನಾಡಿನ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಎಲ್ಲಾ ಋತುಮಾನಗಳಲ್ಲೂ ಅಹ್ಲಾದಕರ ವಾತಾವರಣದ ಮೂಲಕ ಸದಾ ಕಾಲ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಇಲ್ಲಿನ ಕಾಫಿ ಪ್ಲಾಂಟ್‌ಗಳು, ಪ್ರಶಾಂತ ನಿಸರ್ಗ ಸಂಪತ್ತು, ಮುಳ್ಳಯ್ಯನಗಿರಿ ಶಿಖರ, ಜಲಪಾತಗಳು, ಶಿವಮೊಗ್ಗದ ಜೋಗ್ ಜಲಪಾತ, ಸಿಂಹಧಾಮ, ಆನೆ ಶಿಬಿರ ಮತ್ತಿತರ ಪ್ರವಾಸಿತಾಣಗಳು ಕಣ್ಮನ ಸೆಳೆಯುತ್ತವೆ.ಉಡುಪಿಯ ಶ್ರೀ ಕೃಷ್ಣ ದೇವಸ್ಥಾನವು ಮಹತ್ವದ ತೀರ್ಥಯಾತ್ರೆ ಮತ್ತು ಸಾಂಸ್ಕೃತಿಕ ಕೇಂದ್ರವಾಗಿದೆ. ಕುಂದಾಪುರ ತನ್ನ ಭಾಷೆ ಮತ್ತು ಸಾಂಸ್ಕೃತಿ ಶೈಲಿಯಿಂದ ನಾಡಿನ ಗಮನ ಸೆಳೆದಿದೆ.

ವಿಜಯಪುರದ ಗೋಲ್ ಗುಂಬಜ್ ತನ್ನದೆ ಆದ ವೈಭವವನ್ನು ಹೊಂದಿದೆ. ಬಿಸಿಲನಾಡು ಕಲಬುರಗಿಯಲ್ಲಿನ ಗುಲ್ಬರ್ಗಾ ಕೋಟೆ ಮತ್ತು ಖ್ವಾಜಾ ಬಂದೆ ನವಾಜ್ ದರ್ಗಾದಂತಹ ಹೆಗ್ಗುರುತುಗಳು ನಾಡಿನ ಭಾವೈಕ್ಯತೆ ಬೆನ್ನೆಲುಬಾಗಿವೆ. ಗಡಿ ಜಿಲ್ಲೆ ಬೆಳಗಾವಿಯಲ್ಲಿ ಜಲಪಾತಗಳು, ಯಾತ್ರಸ್ಥಳಗಳು, ಚಿಕ್ಕಬಳ್ಳಾಪುರದ ನಂದಿಬೆಟ್ಟ, ಮಂಡ್ಯದ ಕೆಆರ್‌ಎಸ್ ಹೀಗೆ ಪ್ರವಾಸಿ ತಾಣಗಳ ದೊಡ್ಡ ಪಟ್ಟಿಯೇ ಇದೆ ರಾಜ್ಯದಲ್ಲಿದೆ.

**ಪ್ರವಾಸಿಗರ ಆಕರ್ಷಣೆಗೆ ಚೇತೋಹಾರಿ ಉಪಕ್ರಮಗಳು:**

ರಾಜ್ಯ ಸರ್ಕಾರವು ಪ್ರವಾಸೋದ್ಯಮವನ್ನು ಸಕ್ರಿಯವಾಗಿ ಉತ್ತೇಜಿಸುತ್ತಿದ್ದು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆಎಸ್‌ಟಿಡಿಸಿ)ದ ಮೂಲಕ ದೇಶೀಯ ಮತ್ತು ಅಂತಾರಾಷ್ಟ್ರೀಯ ಪ್ರವಾಸಿಗರನ್ನು ಆಕರ್ಷಿಸಲು ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ. ಸಾಹಸ ಪ್ರವಾಸೋದ್ಯಮ, ಕೃಷಿ ಮತ್ತು ಗ್ರಾಮೀಣ, ಕಾರವಾನ್, ಕರಾವಳಿ ಮತ್ತು ಬೀಚ್, ಸಾಂಸ್ಕೃತಿಕ-ಪಾರಂಪರಿಕ, ಪರಿಸರ, ಶಿಕ್ಷಣ, ಆಹಾರ, ಒಳನಾಡಿನ ಜಲ, ಕಡಲು, ವ್ಯಾಪಾರ, ಗಣಿಗಾರಿಕೆ, ಆಧ್ಯಾತ್ಮಿಕ, ಕ್ರೀಡೆ, ರೇಷ್ಮೆ ಸೇರಿ 18 ಮಾದರಿಯ ಪ್ರವಾಸೋದ್ಯಮಗಳ ಬೆಳವಣಿಗೆಗೆ ಚೇತೋಹಾರಿ ಕ್ರಮವಹಿಸಲಾಗುತ್ತಿದೆ.

ಕಿತ್ತೂರು ರಾಣಿ ಚೆನ್ನಮ್ಮ ಅರಮನೆ, ಸಂಗೊಳ್ಳಿ ರಾಯಣ್ಣರ ಜನ್ಮ ಹಾಗೂ ಪುಣ್ಯಭೂಮಿ, ರಾಣಿಅಬ್ಬಕ್ಕ ಅರಮನೆ ಸೇರಿದಂತೆ ಐತಿಹಾಸಿಕ ಸ್ಥಳಗಳ ಪುನರುಜ್ಜೀವನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಪರಂಪರೆ ಸಂರಕ್ಷಣೆ ಮತ್ತು ಪುನಃಸ್ಥಾಪನೆಯೊಂದಿಗೆ ಐತಿಹಾಸಿಕ ಸ್ಮಾರಕಗಳು, ದೇವಾಲಯಗಳು ಮತ್ತು ಇತರ ಪಾರಂಪರಿಕ ತಾಣಗಳನ್ನು ಹೆಚ್ಚು ಆಕರ್ಷಕವಾಗಿಸಲು ಕ್ರಮ ಕೈಗೊಳ್ಳಲಾಗಿದೆ. ಬ್ರಾಂಡ್ ಬೆಂಗಳೂರು, ಬ್ರಾಂಡ್


Downloaded From:www.kpscvaani.com

ಮೈಸೂರು ಮಾದರಿಯ ಕಾರ್ಯಕ್ರಮಗಳ ಮೂಲಕ ರಾಜ್ಯ ಸರ್ಕಾರ ಪ್ರೇಕ್ಷಣೀಯ ಸ್ಥಳಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಮಾಡಲು ಮುಂದಾಗಿದೆ. ಬ್ರಾಂಡ್ ಬೆಂಗಳೂರು ಯೋಜನೆಯ ರೂಪುರೇಷೆಗಳು ಚರ್ಚೆಯ ಹಂತದಲ್ಲಿವೆ. ಸ್ವದೇಶಿ ದರ್ಶನ್ 2.0 ಅಭಿಯಾನದಡಿ ಬ್ರಾಂಡ್ ಮೈಸೂರು ಕಲ್ಪನೆಯ ಕುರಿತು ಸ್ಪರ್ಧೆಗಳನ್ನು ಆಯೋಜಿಸಿದೆ.

ವಿವಿಧ ರಾಜ್ಯಗಳಲ್ಲಿರುವಂತೆ ಪ್ಯಾರಾ ಜಂಪಿಂಗ್ ಅನ್ನು ರಾಜ್ಯದಲ್ಲಿ ಆರಂಭಿಸಲು ಪ್ರಯತ್ನಿಸಲಾಗುತ್ತಿದೆ. ಭಂಗಿ ಜಂಪ್‌ನಂತಹ ಕ್ರೀಡೆಗಳು ಯುವ ಹಾಗೂ ಸಾಹಸಿ ಪ್ರವಾಸಿಗರನ್ನು ಸೆಳೆಯುವಲ್ಲಿ ಯಶಸ್ವಿಯಾಗುತ್ತವೆ. ಅವುಗಳನ್ನು ಆಯೋಜಿಸಲು ರಾಜ್ಯದಲ್ಲಿ ಸಾಕಷ್ಟು ಅವಕಾಶಗಳು ಮತ್ತು ಸೂಕ್ತ ಭೌಗೋಳಿಕ ವಾತಾವರಣವೂ ಇದೆ.

ಕರಾವಳಿ ಭಾಗದ ಬೈಂದೂರಿನ ಸೋಮೇಶ್ವರ ಬೀಚ್‌ನಲ್ಲಿ ದೇಶದಲ್ಲೇ ಮೊದಲ ಬಾರಿಗೆ ಮರೀನಾ ಎನ್ನು ದೋಣಿ ಜಲಾನಯನ ಪ್ರದೇಶವನ್ನು ನಿರ್ಮಿಸಲಾಗುತ್ತಿದೆ. ವಿಹಾರ ನೌಕೆಗಳು ಮತ್ತು ಸಣ್ಣದೋಣಿಗಳಿಗಾಗಿ ವಿಶೇಷವಾಗಿ ರಚಿಸಲಾಗುವ ಈ ಮನೋರಂಜನಾ ಪ್ರದೇಶ ಕರಾವಳಿ ಭಾಗದ ಪ್ರವಾಸೋದ್ಯಮವನ್ನು ಮತ್ತಷ್ಟು ಉತ್ತೇಜಿಸಲಿದೆ ಎಂಬ ನಿರೀಕ್ಷೆ ಇದೆ.

ಪ್ರಮುಖ ಗಿರಿಧಾಮಗಳಲ್ಲಿನ ಟ್ರಕ್ಕಿಂಗ್, ಸಮುದ್ರ ತೀರದಲ್ಲಿ ರಾಫ್ಟಿಂಗ್, ದೋಣಿವಿಹಾರ, ವನ್ಯ ಜೀವಿ ಅಭಯಾರಣ್ಯಗಳ ಸಫಾರಿಯಂತಹ ಸಂದರ್ಭದಲ್ಲಿ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸಿಗರು ಟಿಕೆಟ್ ಖರೀದಿಸುವಾಗ ಅವರಿಗೆ ವಿಮಾ ಸೌಲಭ್ಯ ಒದಗಿಸಲೂ ಕ್ರಮ ಕೈಗೊಳ್ಳಲಾಗುತ್ತಿದೆ.

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯ ವನ್ಯ ಜೀವಿಧಾಮದಲ್ಲಿ ತೇಲುವ ಮೇಲುಸೇತುವೆ ನಿರ್ಮಾಣದ ಬಗ್ಗೆ ಚರ್ಚೆಗಳು ನಡೆದಿವೆ. ಅದೇ ರೀತಿ ನಂದಿಬೆಟ್ಟ ಗಿರಿದಾಮದಲ್ಲಿ 2.93 ಕಿಲೋ ಮೀಟರ್ ರೂಪ್‌ವೇ ನಿರ್ಮಾಣದ ಪ್ರಸ್ತಾವನೆಗಳು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿವೆ.

**ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ:**

ವಿಶೇಷವಾಗಿ ಜನಪ್ರಿಯ ಪ್ರವಾಸಿ ತಾಣಗಳಲ್ಲಿನ ರಸ್ತೆ, ಸಾರಿಗೆ, ವಸತಿ ಸೌಕರ್ಯಗಳನ್ನು ಸುಧಾರಿಸುವ ಯೋಜನೆಗಳು ನಿರಂತರವಾಗಿ ಚಾಲ್ತಿಯಲ್ಲಿವೆ. ಜಿಲ್ಲೆಗೊಂದು ದೇಶಿಯ ವಿಮಾನ ನಿಲ್ದಾಣ ನಿರ್ಮಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಪ್ರಸ್ತುತ ಹುಬ್ಬಳ್ಳಿ, ಬೆಳಗಾವಿ, ಮೈಸೂರು, ಕಲಬುರಗಿ, ಬಳ್ಳಾರಿ ವಿಮಾನ ನಿಲ್ದಾಣಗಳು ಕಾರ್ಯಾಚರಿಸುತ್ತಿವೆ. ಶೀಘ್ರವೇ ಶಿವಮೊಗ್ಗದ ವಿಮಾನ ನಿಲ್ದಾಣವೂ ಶುರುವಾಗಲಿದೆ. ಕಳೆದ ಐದು ವರ್ಷದಲ್ಲಿ ಪ್ರವಾಸೋದ್ಯಮಕ್ಕೆ ರಾಜ್ಯ ಸರ್ಕಾರವೊಂದೇ 1700 ಕೋಟಿ ರೂಪಾಯಿಗೂ ಅಧಿಕ ಅನುದಾನವನ್ನು ಬಳಕೆ ಮಾಡಿದೆ. ಮತ್ತೊಂದೆಡೆ ನಬಾರ್ಡ್ ನೆರವಿನಲ್ಲೂ ಒಂದುವರೆ ಸಾವಿರ ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತವನ್ನು ಮೂಲಸೌಕರ್ಯಗಳಿಗೆ ವಿನಿಯೋಗಿಸಲಾಗಿದೆ.

ರಿವರ್ ರಾಫ್ಟಿಂಗ್, ಟ್ರೆಕ್ಕಿಂಗ್, ರಾಕ್ ಕ್ಲೈಂಬಿಂಗ್‌ನಂತಹ ಸಾಹಸ ಕ್ರೀಡೆಗಳ ಪ್ರವಾಸೋದ್ಯಮವನ್ನು ರಾಜ್ಯದಾದ್ಯಂತ ವಿವಿಧ ರಮಣೀಯ ಸ್ಥಳಗಳಲ್ಲಿ ಉತ್ತೇಜಿಸಲಾಗುತ್ತಿದೆ. ಪ್ರಕೃತಿ ಆಸಕ್ತರನ್ನು ಮತ್ತು ವನ್ಯಜೀವಿ ಛಾಯಾಗ್ರಾಹಕರನ್ನು ಆಕರ್ಷಿಸಲು ರಾಷ್ಟ್ರೀಯ ಉದ್ಯಾನವನಗಳಲ್ಲಿ ವನ್ಯಜೀವಿ ಪ್ರವಾಸೋದ್ಯಮವನ್ನು ಬೆಂಬಲಿಸಲಾಗುತ್ತಿದೆ. ಗೋಕರ್ಣ, ಕಾರವಾರ ಮತ್ತು ಉಡುಪಿಯಂತಹ ಕರಾವಳಿ ಭಾಗಗಳ ಕಡಲತೀರಗಳಲ್ಲಿ ಬೀಚ್ ಟೂರಿಸಂಗಾಗಿ ಜಲ ಕ್ರೀಡೆಗಳು, ಸಮುದ್ರ ವಿಹಾರವನ್ನು ಉತ್ತೇಜಿಸಲಾಗುತ್ತಿದೆ.

ವಿಶ್ವದ ಬಹಳಷ್ಟು ಮುಂದುವರೆದ ರಾಷ್ಟ್ರಗಳಿಗೆ ಹೋಲಿಕೆ ಮಾಡಿದಾಗ ಭಾರತದ ವೈದ್ಯಕೀಯ ಚಿಕಿತ್ಸಾ ವೆಚ್ಚ ಹಾಗೂ ಗುಣಮಟ್ಟ ಸುಧಾರಣಾ ಸ್ಥಿತಿಯಲ್ಲಿದೆ. ಹಾಗಾಗಿ 78ಕ್ಕೂ ಹೆಚ್ಚು ದೇಶಗಳಿಂದ ವರ್ಷಕ್ಕೆ ಸುಮಾರು 20 ಲಕ್ಷ ಮಂದಿ ಚಿಕಿತ್ಸೆ ಪಡೆಯಲು ಆಗಮಿಸುತ್ತಿದ್ದಾರೆ. ಕರ್ನಾಟಕದಲ್ಲಿ ಅತ್ಯುತ್ತಮ ವೈದ್ಯಕೀಯ ಸಂಸ್ಥೆಗಳಿದ್ದು, ಬೆಂಗಳೂರಿನ ಹೃದ್ರೋಗ ಸಂಸ್ಥೆ ಮತ್ತು ನಿಮಾನ್ಸ್ ಸೇರಿದಂತೆ ಅನೇಕ ಪ್ರತಿಷ್ಠಿತ ವೈದ್ಯಕೀಯ ಸಂಸ್ಥೆಗಳಿಗೆ ಕೇಂದ್ರ ಸರ್ಕಾರ ವೈದ್ಯಕೀಯ ಚಿಕಿತ್ಸೆಗಾಗಿ ಆಗಮಿಸುವವರ ದಾಖಲಾತಿಗಳನ್ನು ಸರಳೀಕರಿಸಿದೆ.

ಅನ್ಯರಾಜ್ಯಗಳಲ್ಲಿರುವ ಧಾರ್ಮಿಕ ಕ್ಷೇತ್ರಗಳಿಗೆ ಅದರಲ್ಲೂ ಕಾಶಿ ಯಾತ್ರೆಗೆ ತೆರಳಲು ಸಬ್ಸಿಡಿ ಸಹಿತ ನೆರವು ನೀಡಲಾಗುತ್ತಿದೆ ಅಲ್ಲದೆ ರಾಜ್ಯದಲ್ಲೇ ಇರುವ ಸ್ಥಳಗಳನ್ನು ಸಂದರ್ಶಿಸಲು ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ವಿಶೇಷ ಪ್ಯಾಕೇಜ್‌ಗಳನ್ನು ರೂಪಿಸಿದೆ. ಅವುಗಳ ಬಗ್ಗೆ ಸರಳ ಹಾಗೂ ಸುಲಭ ಮಾಹಿತಿಯನ್ನು ಹಂಚಿಕೊಳ್ಳುತ್ತಿದೆ. ಕಾಲಕಾಲಕ್ಕೆ ವಿಶೇಷ ಪ್ಯಾಕೇಜ್‌ಗಳ





Downloaded From:www.kpscvaani.com

ಮೂಲಕ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡುತ್ತಿದೆ. ನಿಗಮದಿಂದ ಜನಸಾಮಾನ್ಯರಿಗೂ ನಿಲುಕುವ ಹಾಗೂ ಉತ್ಕೃಷ್ಟ ದರ್ಜೆಯ ಸೇವೆ ನೀಡುತ್ತಿರುವುದು ಗಮನಾರ್ಹವಾಗಿದೆ.

ಗ್ರಾಮೀಣ ಪ್ರವಾಸೋದ್ಯಮದಲ್ಲಿ ಭಾಗವಹಿಸಲು ಸ್ಥಳೀಯರನ್ನು ಪ್ರೋತ್ಸಾಹಿಸುವುದು ಮತ್ತು ಪ್ರವಾಸಿಗರಿಗೆ ಅಧಿಕೃತ ಹಳ್ಳಿಯ ಜೀವನವನ್ನು ಅನುಭವಿಸುವ ಅವಕಾಶವನ್ನು ನೀಡುವ ಸಲುವಾಗಿ ಹೋಮ್‌ಸ್ಟೇ ಮತ್ತು ಗ್ರಾಮೀಣ ಪ್ರವಾಸೋದ್ಯಮ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರವಾಸಿಗರಿಗೆ ಮಾಹಿತಿಯನ್ನು ಒದಗಿಸಲು ಮತ್ತು ಪ್ರಯಾಣ ಯೋಜನೆಯನ್ನು ಸುಲಭಗೊಳಿಸಲು ಪ್ರವಾಸೋದ್ಯಮ ವೆಬ್‌ಸೈಟ್‌ಗಳು, ಅಪ್ಲಿಕೇಶನ್‌ಗಳು ಮತ್ತು ಸಾಮಾಜಿಕ ಮಾಧ್ಯಮಗಳನ್ನು ಅಭಿವೃದ್ಧಿ ಪಡಿಸಲು ಡಿಜಿಟಲ್ ಉಪಕ್ರಮಗಳನ್ನು ಬಳಸಲಾಗುತ್ತಿದೆ. ಪ್ರವಾಸಿ ತಾಣಗಳಲ್ಲಿ ವಸತಿಗಳು ಮತ್ತು ಮೂಲಸೌಕರ್ಯಗಳ ಅಭಿವೃದ್ಧಿಯನ್ನು ಉತ್ತೇಜಿಸಲು ಪ್ರವಾಸೋದ್ಯಮ ವಲಯದಲ್ಲಿ ಖಾಸಗಿ ಹೂಡಿಕೆಗೆ ಅನುಕೂಲಕರ ವಾತಾವರಣವನ್ನು ಕಲ್ಪಿಸಲಾಗುತ್ತಿದೆ.

ಚಲನಚಿತ್ರಗಳಲ್ಲಿ ರಾಜ್ಯದ ನಯನ ಮನೋಹರ ತಾಣಗಳನ್ನು ತೋರಿಸು ಮೂಲಕ ವ್ಯಾಪಕ ಪ್ರಚಾರ ಮಾಡುವ ಉದ್ದೇಶದಿಂದ ರಮಣೀಯ ಸ್ಥಳಗಳ ಬಗ್ಗೆ ನಿರ್ದೇಶಕರು ಮತ್ತು ನಿರ್ಮಾಪಕರಿಗೆ ಮಾಹಿತಿ ನೀಡುವ ಕೈಂಕರ್ಯಕ್ಕೂ ಸರ್ಕಾರ ಮುಂದಾಗಿದೆ.

**ಪ್ರವಾಸೋದ್ಯಮಕ್ಕೆ ಹೊಸ ನೀತಿ:**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ 2023-24 ನೇ ಸಾಲಿನ ಬಜೆಟ್‌ನಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. 'ಒಂದು ರಾಜ್ಯ ಹಲವು ಜಗತ್ತು' ಎಂಬ ಘೋಷವಾಕ್ಯದಂತೆ ಕರ್ನಾಟಕವೂ ಜಾಗತಿಕ ಮಟ್ಟದ ಪ್ರವಾಸಿ ತಾಣವಾಗಿ ಹೊರ ಹೊಮ್ಮುವ ನಿಟ್ಟಿನಲ್ಲಿ ಮಾಸ್ಟರ್ ಪ್ಲಾನ್ ರೂಪಿಸುವುದಾಗಿ ಘೋಷಿಸಿದ್ದಾರೆ.

ದೇಶದಲ್ಲೇ ಕರ್ನಾಟಕದ ಅಭಿವೃದ್ಧಿಯ ಮಾದರಿಯನ್ನು ಸೃಷ್ಟಿಸಲು ಸಾರ್ವತ್ರಿಕ ಮೂಲ ಆದಾಯ ಪರಿಕಲ್ಪನೆಯಡಿ ಜಾರಿಗೊಳಿಸಿರುವ ಪಂಚಖಾತ್ರಿ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆಯು ಪ್ರವಾಸಿತಾಣಗಳ ಆದಾಯವನ್ನು ವೃದ್ಧಿಸುವಂತೆ ಮಾಡಿದೆ. ಸಹಜವಾಗಿ ಪ್ರವಾಸೋದ್ಯಮಕ್ಕೆ ಇದು ಉತ್ತೇಜನ ನೀಡುತ್ತಿದೆ.

ಇನ್ನು ಆರ್ಥಿಕವಾಗಿ ಹಿಂದುಳಿದವರೂ ಪ್ರವಾಸದ ಅನುಭೂತಿ ಸವಿಯಲು ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಅನುಕೂಲ ಮಾಡಿಕೊಡಲು ಸರ್ಕಾರ ಚಿಂತನೆ ನಡೆಸಿದೆ. 2026ರ ಬಳಿಕ ಅನುಷ್ಠಾನಕ್ಕೆ ತರಲಾಗುವ ನೂತನ ಪ್ರವಾಸ ನೀತಿಯಲ್ಲಿ ಬಡ ಹಾಗೂ ಮಧ್ಯಮ ವರ್ಗವನ್ನು ಗಮನದಲ್ಲಿಟ್ಟುಕೊಂಡು ಯೋಜನೆ ರೂಪಿಸುವುದಾಗಿ ಪ್ರವಾಸೋದ್ಯಮ ಸಚಿವರಾದ ಹೆಚ್.ಕೆ.ಪಾಟೀಲ್ ಅವರು ಘೋಷಿಸಿದ್ದಾರೆ. ನೂತನ ನೀತಿಗಾಗಿ ಈಗಾಗಲೇ ಪೂರ್ವ ತಯಾರಿಗಳು ನಡೆಯುತ್ತಿವೆ.

ಪ್ರಸಕ್ತ ಬಜೆಟ್‌ನಲ್ಲಿ ಕಲ್ಯಾಣ ಕರ್ನಾಟಕ ಭಾಗದ ವ್ಯಾಪ್ತಿಯಲ್ಲಿ ಬರುವ ಪ್ರವಾಸಿ ತಾಣಗಳಾದ ಹಂಪಿ, ಮೈಲಾರ, ಗಾಣಗಾಪುರ, ಸನ್ನತಿ ಮತ್ತು ಮಳಖೇಡ, ಬೀದರ್, ರಾಯಚೂರು, ಕಲಬುರಗಿ ಕೋಟೆಗಳ ಸಮಗ್ರ ಅಭಿವೃದ್ಧಿಗೆ 75 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಕಿತ್ತೂರು ಕರ್ನಾಕಟ ಭಾಗದ ಸವದತ್ತಿ ಯಲ್ಲಮ್ಮನಗುಡ್ಡ, ದೇವರಗುಡ್ಡ, ಕಪ್ಪತ್ತಗುಡ್ಡ, ಬಾದಾಮಿ, ಬನಶಂಕರಿ, ಲಕ್ಕುಂಡಿ ಪ್ರವಾಸಿ ತಾಣಗಳನ್ನು ಮತ್ತು ಗದಗ ಜಿಲ್ಲೆಯ ಮಾಗಡಿ ಪಕ್ಷಿಧಾಮವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಘೋಷಣೆ ಮಾಡಲಾಗಿದೆ. ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಡಲ ತೀರದ ಸಮಗ್ರ ಅಭಿವೃದ್ಧಿಗಾಗಿ ಕಾರ್ಯಪಡೆ ರಚನೆ ಹಾಗೂ ಕಡಲ ತೀರದ ಸಮಗ್ರ ಅಭಿವೃದ್ಧಿಗೆ ವಿಸ್ತೃತ ಯೋಜನೆ ಜಾರಿಗೆ ತರಲಾಗುತ್ತಿದೆ. ಸಸಿಹಿತ್ಲು ಕಡಲ ತೀರವನ್ನು ಅಂತಾರಾಷ್ಟ್ರೀಯ ಸರ್ಫಿಂಗ್ ತಾಣವಾಗಿ ಅಭಿವೃದ್ಧಿ ಪಡಿಸಲು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಯೋಜನೆ ತಯಾರಿಸಲಾಗುತ್ತಿದೆ. ರಾಜ್ಯದ ವಿವಿಧ ಪ್ರವಾಸಿ ತಾಣಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಯಾತ್ರಿ ನಿವಾಸಗಳ ಮಾದರಿಯಲ್ಲಿ ಡಾರ್ಮಿಟರಿಗಳನ್ನು ನಿರ್ಮಾಣ ಮಾಡುವ ಕ್ರಿಯಾ ಯೋಜನೆ ತಯಾರುಗೊಳ್ಳುತ್ತಿದೆ.

ಮೈಸೂರಿನ ಹೃದಯ ಭಾಗದಲ್ಲಿರುವ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣವನ್ನು ದೆಹಲಿ ಪ್ರಗತಿ ಮೈದಾನದ ಮಾದರಿಯಲ್ಲಿ ಮೇಲ್ದರ್ಜೆಗೇರಿಸುವುದು, ರಾಜ್ಯದಲ್ಲಿರುವ 16 ವಸ್ತು ಸಂಗ್ರಹಾಲಯಗಳನ್ನು ಹಂತ ಹಂತವಾಗಿ ಆಕರ್ಷಕ ಮತ್ತು ಸಂವಾದಾತ್ಮಕವಾಗಿ ಅಭಿವೃದ್ಧಿ ಪಡಿಸಲಾಗುವುದು. ಈ ಆರ್ಥಿಕ ಸಾಲಿನಲ್ಲಿ ಕಲಬುರಗಿ, ಗದಗ, ಬೆಂಗಳೂರಿನ ಸರ್ಕಾರಿ ವಸ್ತು ಸಂಗ್ರಹಾಲಯಗಳ ಅಭಿವೃದ್ಧಿ ಹಾಗೂ ವಿಜಯಪುರದಲ್ಲಿ ಆನಂದ ಮಹಲ್ ಕಟ್ಟಡವನ್ನು ವಸ್ತು ಸಂಗ್ರಹಾಲಯವನ್ನಾಗಿ ಪರಿವರ್ತಿಸಲು ಅನುದಾನ ನಿಗದಿ ಮಾಡಿದ್ದಾರೆ.

ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದ ಬಳಿ ಎರಡೂವರೆ ಎಕರೆ ಜಮೀನಿನಲ್ಲಿ ಕರ್ನಾಟಕದ ಶ್ರೀಮಂತ ಕಲೆ ಮತ್ತು ಸಾಂಸ್ಕೃತಿ ಪರಂಪರೆಯನ್ನು ಪ್ರದರ್ಶಿಸಲು ಅಗ್ಮೆಂಟೆಡ್ ರಿಯಾಲಿಟಿ ಮತ್ತು ವರ್ಚುವಲ್ ರಿಯಾಲಿಟಿ ತಂತ್ರಜ್ಞಾನದೊಂದಿಗೆ ಅಂತಾರಾಷ್ಟ್ರೀಯ ಗುಣಮಟ್ಟದ ಕರ್ನಾಟಕ ಪುರಾತತ್ವ ವಸ್ತು ಸಂಗ್ರಹಾಲಯ ಮತ್ತು ಕಲಾಗ್ಯಾಲರಿ ನಿರ್ಮಾಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಅವರು ಆಯವ್ಯಯದಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿರುವ ರಾಷ್ಟ್ರೀಯ ಸಂರಕ್ಷಿತ ಸ್ಮಾರಕಗಳಾದ ಹಂಪಿಯ ವಿಜಯವಿಠಲ ದೇವಸ್ಥಾನ, ಬೀದರ್‌ಕೋಟೆ, ನಂದಿಬೆಟ್ಟದ ಶ್ರೀ ಭೋಗ ನಂದೀಶ್ವರ ದೇವಸ್ಥಾನ, ವಿಜಯಪುರದ ಗೋಲಗುಂಬಜ್, ಕಿತ್ತೂರು ಕೋಟೆ ಮತ್ತು ಬಾದಾಮಿ ಗುಹೆಗಳ ಬಳಿ ರಾತ್ರಿ ವೇಳೆ ಪ್ರವಾಸಿಗರ ಭೇಟಿಯನ್ನು ಉತ್ತೇಜಿಸಲು ಹಾಗೂ ಕರ್ನಾಟಕ ರಾಜ್ಯದ ಕಲೆ, ವಾಸ್ತುಶಿಲ್ಪ ಮತ್ತು ಸಾಂಸ್ಕೃತಿಕ ಪರಂಪರೆಯ ಶ್ರೀಮಂತಿಕೆಯನ್ನು ಪ್ರದರ್ಶಿಸಲು 3ಡಿ ಪ್ರೊಜೆಕ್ಷನ್, ಮಲ್ಟಿಮೀಡಿಯಾ, ಸೌಂಡ್ ಮತ್ತು ಲೈಟ್ ಷೋ ಆಯೋಜಿಸುವುದಾಗಿ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ರಾಜ್ಯದಲ್ಲಿರುವ ಪ್ರವಾಸೋದ್ಯಮದ ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ವಿಶ್ವ ಮಾನ್ಯತೆ ಹೆಚ್ಚಿಸಿಕೊಳ್ಳಲು ಹೊಸ ನೀತಿಯಲ್ಲಿ ಮತ್ತಷ್ಟು ಕಾರ್ಯಕ್ರಮಗಳನ್ನು ನಿರೀಕ್ಷಿಸಲಾಗಿದೆ.



Downloaded From:www.kpscvaani.com






# ಗ್ರಾಮೀಣ ಮಕ್ಕಳಿಗೆ ವಿಜ್ಞಾನದಲ್ಲಿ ಆಸಕ್ತಿ ಹುಟ್ಟುಹಾಕುತ್ತಿರುವ ಶಿಕ್ಷಕ

**"ಶಿಕ್ಷಣ ದಿನಾಚರಣೆ ನಿಮಿತ್ತ"**

**ಸರ್ಕಾರಿ ಶಾಲಾ ಮಕ್ಕಳಿಗೆ ವಿಜ್ಞಾನಿಗಳೊಂದಿಗೆ ಸಂವಾದ ಏರ್ಪಡಿಸುವ ಮೂಲಕ ವಿಜ್ಞಾನದಲ್ಲಿ ಆಸಕ್ತಿ ಮೂಡಿಸುತ್ತಿರುವ ಶಿಕ್ಷಕರೊಬ್ಬರನ್ನು ಪರಿಚಯಿಸಲಾಗಿದೆ**

ಸಂಧ್ಯಾ ಸೊರಬ

ಇವರು ವಿಜ್ಞಾನಕ್ಕೂ ಸೈ... ಸಮಾಜ ಸೇವೆಗೂ ಸೈ... ಎನ್ನುವ ಶಿಕ್ಷಕರು. ಬಳ್ಳಾರಿಯ ಗ್ರಾಮೀಣ ಭಾಗದ ಬಾಣಾಪುರದ ಸರ್ಕಾರಿ ಪ್ರೌಢ ಶಾಲೆಯಲ್ಲಿ ವಿಜ್ಞಾನ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವವರೇ ದೇವರಾಜ ಅವರು. ತಮ್ಮ ಬಾಲ್ಯದ ಕನಸು ಕನಸಾಗಿಯೇ ಉಳಿದಂತೆ ತಮ್ಮ ವಿದ್ಯಾರ್ಥಿಗಳಿಗೂ ಆಗಬಾರದು ಎಂಬ ಉದ್ದೇಶದಿಂದ ವಿಜ್ಞಾನಿಗಳೊಂದಿಗೆ ಮಕ್ಕಳ ಸಂವಾದವನ್ನು ಮುಖಾಮುಖಿ ಏರ್ಪಡಿಸಿದವರು. ಅದು ಕೂಡ ಗ್ರಾಮೀಣ ಭಾಗದಲ್ಲಿ ಇಸ್ರೋದಂತಹ ಮೇರು ಬಾಹ್ಯಾಕಾಶ ಸಂಸ್ಥೆಯ ವಿಜ್ಞಾನಿಗಳ ಜೊತೆಗೆ.

ವಿಜ್ಞಾನಿಯಾಗಬೇಕೆಂಬ ಕನಸು ಹೊತ್ತಿದ್ದ ದೇವರಾಜ ಕೆ. ಮೂಲತಃ ಈಗಿನ ವಿಜಯಪುರ ಜಿಲ್ಲೆ (ಆಗಿನ ಬಳ್ಳಾರಿ)ಯ ಕೂಡ್ಲಿಗಿ ತಾಲೂಕಿನ ಬಂಡೆಬಸಾಪುರ ತಾಂಡಾದವರು. ಗ್ರಾಮೀಣ ಭಾಗದ ಬಡತನದ ಬೇಗುದಿಯಲ್ಲಿಯೂ ವಿಜ್ಞಾನದ ಕನಸು ಕಂಡವರು. ಸದಾ ವಿಜ್ಞಾನದ ವಿಷಯಗಳ ಆಸಕ್ತಿ. ವಿಜ್ಞಾನಿಗಳನ್ನು ನೋಡಬೇಕು, ಅವರೊಂದಿಗೆ ಬೆರೆಯಬೇಕು ಎಂಬ ವಾಂಛೆ. ಆದರೇನು ಮಾಡುವುದು ಗ್ರಾಮೀಣ ಭಾಗದ ಕೂಲಿ ಕೃಷಿ ಮಾಡುವ ಆ ಪರಿಸರದಲ್ಲಿ ದೇವರಾಜರ ಕನಸು ಕನಸಾಗಿಯೇ ಉಳಿಯಿತು.

ಈ ದೇವರಾಜರಂತಹ ಮಾದರಿ ಶಿಕ್ಷಕರಿಗೂ ಸ್ಫೂರ್ತಿಯಾಗಿದ್ದು ಶಿಕ್ಷಕಿಯೇ. ಅದು "ಸಿದ್ದಮ್ಮ" ಎಂಬ ಇಂಗ್ಲೀಷ್ ಶಿಕ್ಷಕಿ ಇವರಿಗೆ ಪ್ರೇರಣೆಯಾದವರು. ಗ್ರಾಮೀಣ ಭಾಗದಲ್ಲಿನ ಹುಡುಗ ದೇವರಾಜ ಅವರು ಹತ್ತನೇ ತರಗತಿಯಲ್ಲಿ ವಿಜ್ಞಾನ ವಿಷಯದಲ್ಲಿ ಹೆಚ್ಚು ಅಂಕ ಪಡೆದುದನ್ನು ಕಂಡ ಸಿದ್ದಮ್ಮ ಶಿಕ್ಷಕರು ದೇವರಾಜರಿಗೆ ವಿಜ್ಞಾನ ವಿಷಯದಲ್ಲಿ ಡಿಗ್ರಿ ಬಿಎಡ್ ಪಡೆಯುವಂತೆ ಪ್ರೇರೇಪಿಸಿದರು.

ವಿಜ್ಞಾನ ಸೇರಿದಂತೆ ಇತರೆ ವಿಷಯಗಳ ಓದಿನಲ್ಲಿಯೂ ಮುಂದಿದ್ದ ದೇವರಾಜ ಅವರು, ಶಿಕ್ಷಣ ಮುಗಿದ ಕೂಡಲೇ ಖಾಸಗಿ ಶಾಲೆಗಳು ಮತ್ತು ಮೊರಾರ್ಜಿ ಶಾಲೆಗಳಲ್ಲಿ ಶಿಕ್ಷಕರಾಗುತ್ತಾರೆ. ಬಳಿಕ ಸರ್ಕಾರಿ ಶಿಕ್ಷಕರಾಗಿ ಬಾಣಾಪುರದ ಪ್ರೌಢಶಾಲೆಗೆ ಬರುತ್ತಾರೆ.

ಬಾಣಾಪುರದ ಸುತ್ತಮುತ್ತ ಕೃಷಿ ಕೂಲಿ ಮಾಡಿಕೊಂಡೇ ಬದುಕು ಸಾಗಿಸುವ ಮಂದಿಯೇ ಪ್ರಧಾನ. ಇಂತಹದರಲ್ಲಿ



Downloaded From:www.kpscvaani.com



ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವುದಿರಲಿ, ಪ್ರೌಢಶಾಲೆಗೆ ಕಳುಹಿಸುವುದೇ ಕಷ್ಟ. ಮಕ್ಕಳ ಶಿಕ್ಷಣಕ್ಕಿಂತ ಕೂಲಿಯ ಆಸೆಯೇ ಇದಕ್ಕೆ ಕಾರಣ. ಹಾಗಾಗಿ ಬಹಳಷ್ಟು ಮಕ್ಕಳಿಗೆ ವಿಜ್ಞಾನವಿರಲಿ ಬೇರೆ ವಿಷಯದಲ್ಲೂ ಆಸಕ್ತಿ ಕಡಿಮೆಯೇ ಇರುತ್ತದೆ. ಇಂತಹ ಮನಸ್ಥಿತಿಯಲ್ಲಿರುವ ಮಕ್ಕಳನ್ನು ವಿಜ್ಞಾನದತ್ತ ಆಕರ್ಷಿಸಿದ್ದಾರೆ ಎಂದರೆ ಆಶ್ಚರ್ಯವಾಗುತ್ತದೆ.

**ವಿದ್ಯಾರ್ಥಿನಿಯನ್ನು ಮೌಢ್ಯ ಪದ್ಧತಿಯಿಂದ ಹೊರತಂದವರು:**

ಹೀಗೇ ಕಳೆದ ನಾಲ್ಕು ವರ್ಷಗಳ ಹಿಂದೆ 8ನೇ ತರಗತಿಗೆ ಮಲ್ಲೇಶ್ವರಿ ಎನ್ನುವ ವಿದ್ಯಾರ್ಥಿನಿ ಶಾಲೆಗೆ ದಾಖಲಾಗುತ್ತಾಳೆ. ಆದರೆ ಈಕೆ ಇತರೆ ಎಲ್ಲಾ ವಿದ್ಯಾರ್ಥಿನಿಯರಿಗಿಂತ ಭಿನ್ನವಾಗಿರುತ್ತಾಳೆ. ಕಾರಣ ಗಂಟುಕಟ್ಟಿದ ಕೂದಲು, ಭಂಡಾರ ಕುಂಕುಮ ಬಳಿದ ಮುಖ, ಕೈಯಲ್ಲಿ ಹಸಿರು-ಕೆಂಪು ಗಾಜಿನ ಬಳೆಗಳು. ಇತರೆ ಸಾಮಾನ್ಯ ಹುಡುಗಿಯಂತಿರದ ಈಕೆ ಬಹಳ ಮುಗ್ಧೆ. ಈ ವಿದ್ಯಾರ್ಥಿನಿಯನ್ನು ಕಂಡು ದೇವರಾಜರಿಗೆ ಕುತೂಹಲವಾಗುತ್ತದೆ. (ಉತ್ತರ ಕರ್ನಾಟಕ ಭಾಗದ ಅಲ್ಲಿ-ಇಲ್ಲಿ ಇಂತಹ ದೃಶ್ಯ ಕಂಡು ಬರುವುದು ಈಗಲೂ ಸಹಜ) ಮಲ್ಲೇಶ್ವರಿಯನ್ನು ಈ ಬಗ್ಗೆ ಕೇಳಿದಾಗ, ಆಕೆಯ ಪೋಷಕರು ಆಕೆಯನ್ನು ಊರಿನ ಹುಲಿಗೆಮ್ಮ ದೇವಿಗೆ ಬಿಟ್ಟಿದ್ದಾರೆ ಎಂಬ ವಿಷಯ ತಿಳಿಯುತ್ತದೆ. ಹೀಗೆ ಗಂಟು ಕೂದಲಾಗುವುದಕ್ಕೆ ವೈಜ್ಞಾನಿಕವಾಗಿ ಫಂಗಸ್ ಇನ್ಫೆಕ್ಷನ್ ಕಾರಣವೆಂಬುದನ್ನು ಅರಿಯದ ಗ್ರಾಮೀಣ ಭಾಗದ ಜನರು ದೇವರ ಮಗ/ಮಗಳೆಂದು ದೇವರಿಗೆ ಬಿಟ್ಟು ಬಿಡುತ್ತಾರೆ.

ಆದರೆ ವೈಜ್ಞಾನಿಕ ಹಿನ್ನಲೆ ಅರಿತ ದೇವರಾಜ ಅವರು ಮಲ್ಲೇಶ್ವರಿಯ ವೇಷಭೂಷಣವು ಸೂಕ್ಷ್ಮ ಮನಸ್ಸಿನ ಇತರೆ ವಿದ್ಯಾರ್ಥಿಗಳನ್ನು ಸೆಳೆಯಬಹುದೆಂಬ ಮುಂದಾಲೋಚನೆಯಿಂದ ಮಲ್ಲೇಶ್ವರಿಯನ್ನು ಬದಲಾಯಿಸಲು ಬಹಳ ಶ್ರಮ ಪಡುತ್ತಾರೆ. ಈ ಮಧ್ಯೆ ಈ ಹುಡುಗಿ ಸ್ವಲ್ಪ ದಿನಗಳ ಕಾಲ ಶಾಲೆಯನ್ನು ಬಿಡುತ್ತಾಳೆ. ಈ ತರಹ ಕೂದಲಿನ ಗಂಟಿಗೆ ನೈಜ ಕಾರಣದ ಬಗ್ಗೆ ಮನಮುಟ್ಟುವಂತೆ ಪೋಷಕರಿಗೆ ಅರಿವು ಮೂಡಿಸಿ, ಆಕೆಯ ಕೇಶಕ್ಕೆ ಕತ್ತರಿ ಹಾಕಿಸುತ್ತಾರೆ. ಅಲ್ಲದೆ ಇತರೆ ಮಕ್ಕಳಂತೆ ಶಾಲಾ ಸಮವಸ್ತ್ರ ಧರಿಸುವಂತೆ ಮಾಡಿ, ಆಕೆಯ ಮನಸ್ಥಿತಿಯನ್ನು ನಿಧಾನವಾಗಿ ಬದಲಾಯಿಸುತ್ತಾರೆ. ಅದರ ಪರಿಣಾಮ ಮಲ್ಲೇಶ್ವರಿ ಎಲ್ಲರಂತೆ ಈಗ ಪಿಯುಸಿ ವಿದ್ಯಾಭ್ಯಾಸ ಮಾಡುತ್ತಿದ್ದಾಳೆ.

ಮತ್ತೆ ದೇವರಾಜರ ವಿಜ್ಞಾನ ಶಿಕ್ಷಕ ವೃತ್ತಿಯ ಬಗ್ಗೆ ಹೇಳುವುದಾದರೆ, ವಿದ್ಯಾರ್ಥಿಗಳು ವಿಜ್ಞಾನ ವಿಚಾರಗೋಷ್ಠಿಯಲ್ಲಿ ಜಿಲ್ಲಾ ಮಟ್ಟ ಮತ್ತು ರಾಜ್ಯಮಟ್ಟಕ್ಕೆ ಆಯ್ಕೆಯಾಗುವಂತೆ ಶ್ರಮವಹಿಸಿದ್ದಾರೆ. ವಿದ್ಯಾರ್ಥಿಗಳನ್ನು ವಿಜ್ಞಾನಿಯನ್ನಾಗಿಸುವ ಗುರಿಯೊಂದಿಗೆ ಗ್ರಾಮದ ಮುಖಂಡರ ಸಹಕಾರದೊಂದಿಗೆ ಸ್ವತಃ ಇಸ್ರೋ ವಿಜ್ಞಾನಿಗಳನ್ನೇ ಶಾಲೆಗೆ ಆಹ್ವಾನಿಸಿ ವಿಜ್ಞಾನಿಗಳು ಮತ್ತು ವಿದ್ಯಾರ್ಥಿಗಳೊಂದಿಗೆ ನೇರ ಸಂವಾದ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ.

ಶಿಕ್ಷಕರ ಈ ಕಾರ್ಯದಿಂದ ಪ್ರೇರಣೆಗೊಂಡು ವರ್ಲ್ಡ್ ವಿಷನ್ ಆಫ್ ಇಂಡಿಯಾ ಸಂಸ್ಥೆ 1 ಲಕ್ಷ ರೂಪಾಯಿ ಮೌಲ್ಯದ ವಿಜ್ಞಾನೋಪಕರಣಗಳನ್ನು ದೇಣಿಗೆ ನೀಡುವಲ್ಲಿ ಕಾರ್ಯಯೋನ್ಮುಖವಾಗಿದೆ. ಇದೇ ಸಂಸ್ಥೆಯು ಈ ಶಾಲೆಯನ್ನು ಮಾದರಿ ಶಾಲೆಯನ್ನಾಗಿಸುವ ಗುರಿಯಾಗಿಟ್ಟುಕೊಂಡು ಮತ್ತೆ 2 ಲಕ್ಷದ 75,000 ಸಾವಿರ ರೂ ಮೌಲ್ಯದಲ್ಲಿ ಶಾಲೆಗೆ ಅವಶ್ಯಕವಾಗಿ ಬೇಕಿರುವ ವಸ್ತುಗಳನ್ನು ದೇಣಿಗೆಯಾಗಿ ನೀಡಿದೆ.

ವಿಜ್ಞಾನ ವಿಷಯವನ್ನು ಅತ್ಯಂತ ಸರಳ ರೀತಿಯಲ್ಲಿ ಅರ್ಥ ಮಾಡಿಸುವ ಸಲುವಾಗಿ ಸ್ವತಃ ತಾವೇ ವಿಜ್ಞಾನ ಮಾದರಿಗಳನ್ನು ಸ್ವಂತ ಖರ್ಚಿನಲ್ಲಿ ತಯಾರಿಸಿದ್ದಾರೆ. ಈ ವಿಜ್ಞಾನ ಮಾದರಿಗಳ ಮೂಲಕ ಚಟುವಟಿಕೆಗಳನ್ನು ಮಾಡುತ್ತಾ, ವಿದ್ಯಾರ್ಥಿಗಳು ಆಸಕ್ತಿಯಿಂದ ವಿಜ್ಞಾನವನ್ನು ಕಲಿಯುವಂತೆ ಪ್ರೇರೇಪಿಸುತ್ತಿದ್ದಾರೆ.

ಶಿಕ್ಷಣ ಇಲಾಖೆಯ ಮಾರ್ಗದರ್ಶನ ಮತ್ತು ಸ್ಥಳೀಯ ಮುಖಂಡರ ಮುಖ್ಯೋಪಾಧ್ಯಾಯರ ಸಹಕಾರದೊಂದಿಗೆ ಸ್ವಂತ ಖರ್ಚಿನಲ್ಲಿ ವಿಜ್ಞಾನ ಪ್ರಯೋಗಾಲಯವನ್ನು ಸಿದ್ಧಪಡಿಸಿದ್ದಾರೆ. ತಾಲೂಕಿನ ಮತ್ತು ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ವಿಜ್ಞಾನ ಫಲಿತಾಂಶವನ್ನು ಉತ್ತಮಪಡಿಸಲು ಜಿಲ್ಲಾ ಮಟ್ಟದ ಕಾರ್ಯ ಯೋಜನೆಯನ್ನು ಸಿದ್ಧಪಡಿಸಿಕೊಂಡು ಮಕ್ಕಳಿಗೆ ವಿಜ್ಞಾನ ವಿಷಯವನ್ನು ಬೋಧನೆ ಮಾಡುತ್ತಿರುವುದಲ್ಲದೆ ರೇಡಿಯೋದಲ್ಲಿ ಬರುವ ಫೋನ್-ಇನ್ ಕಾರ್ಯಕ್ರಮಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿಯೂ ಕೂಡ ಅವರು ಕಾರ್ಯನಿರ್ವಹಿಸುತ್ತಿದ್ದಾರೆ.

ಮೂಢನಂಬಿಕೆಗಳು, ಬಾಲ್ಯವಿವಾಹ ಪದ್ಧತಿಗಳಂತಹ ಸಾಮಾಜಿಕ ಅನಿಷ್ಟಗಳ ಬಗ್ಗೆ ತಮ್ಮ ಬೋಧನೆಯ ಮೂಲಕ ವೈಜ್ಞಾನಿಕ ರೀತಿಯಲ್ಲಿ ಮನವರಿಕೆ ಮಾಡಿ, ವಿದ್ಯಾರ್ಥಿಗಳು ಇವುಗಳಿಂದ ಹೊರಬರುವಂತೆ ಮಾಡುತ್ತಿದ್ದಾರೆ. ಹಾಗೆಯೇ ಉನ್ನತಮಟ್ಟದ ವಿದ್ಯಾಭ್ಯಾಸಕ್ಕೆ ಸೇರುವಂತೆ ಪ್ರೇರೇಪಣೆ ನೀಡುತ್ತಿದ್ದಾರೆ. ಇನ್ನು ತಮ್ಮ ತಾಲ್ಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗಾಗಿ ಸನ್ಮಾರ್ಗ ಗೆಳೆಯರ ಬಳಗದ ವತಿಯಿಂದ ಸಂಪನ್ಮೂಲ ವ್ಯಕ್ತಿಯಾಗಿ ವಿದ್ಯಾರ್ಥಿಗಳು ಪರೀಕ್ಷೆಯನ್ನು ಯಶಸ್ವಿಯಾಗಿ ಹೇಗೆ ಬರೆಯುವುದು ಎಂಬುದರ ಕುರಿತು ಉಪನ್ಯಾಸ ನೀಡುತ್ತಾರೆ.

ವಿದ್ಯಾರ್ಥಿಗಳನ್ನು ವಿಜ್ಞಾನಿಗಳನ್ನಾಗಿಸುವ ಗುರಿಯೊಂದಿಗೆ ವಿಜ್ಞಾನಿಗಳನ್ನೇ ಶಾಲೆಗೆ ಆಹ್ವಾನಿಸಿ ವಿದ್ಯಾರ್ಥಿಗಳೊಂದಿಗೆ ಸಂವಾದವನ್ನು ಏರ್ಪಡಿಸುವುದರಿಂದ ಮಕ್ಕಳಿಗೆ ವಿಜ್ಞಾನ ವಿಷಯದಲ್ಲಿ ಆಸಕ್ತಿ ಹೆಚ್ಚಿದ್ದು, ಮಕ್ಕಳು ಜಿಲ್ಲಾ ಮತ್ತು ರಾಷ್ಟ್ರಮಟ್ಟದ ವಿಜ್ಞಾನ ವಿಚಾರಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದಾರೆ.

ಇವರ ಪರಿಶ್ರಮವನ್ನು ಇಲಾಖೆಯು ಗುರುತಿಸಿ ತಾಲೂಕು ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ, ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಿದೆ. ಹೀಗೆ ಎಲೆಮರೆ ಕಾಯಿಯಂತೆ ಗ್ರಾಮೀಣ ಭಾಗದ ಮಕ್ಕಳಿಗೆ ವಿಜ್ಞಾನ ವಿಷಯದಲ್ಲಿ ಉತ್ತಮ ಶಿಕ್ಷಣ ನೀಡುತ್ತಿರುವ ದೇವರಾಜರನ್ನು ಶಿಕ್ಷಕರ ದಿನಾಚರಣೆಯ ನಿಮಿತ್ತ ಪರಿಚಯ ಮಾಡಿಸಲಾಗಿದೆ.

ದೇವರಾಜ ಅವರಂತೆ ಮಕ್ಕಳ ಬಾಳಿಗೆ ದೀಪವಾಗಿರುವ ಎಲ್ಲಾ ಶಿಕ್ಷಕರಿಗೂ ವಾರ್ತಾ ಜನಪದ ಬಳಗದ ಪರವಾಗಿ ಶಿಕ್ಷಕರ ದಿನಾಚರಣೆಯ ಶುಭಾಶಯಗಳು.



Downloaded From:www.kpscvaani.com




## ಬಸವನಬಾಗೇವಾಡಿ ತಾಲೂಕು ಆಸ್ಪತ್ರೆಗೆ

# ರಾಜ್ಯಮಟ್ಟದ ಕಾಯಕಲ್ಪ ಪ್ರಶಸ್ತಿ

**ಸ್ವಚ್ಛತೆ. ಶುಚಿತ್ವ ಮತ್ತು ಗುಣಮಟ್ಟದ ಚಿಕಿತ್ಸೆಯನ್ನು ನೀಡುವ ಮೂಲಕ ಬಸವನಬಾಗೇವಾಡಿ ತಾಲೂಕು ಆಸ್ಪತ್ರೆಯು ಕಾಯಕಲ್ಪ ಪ್ರಶಸ್ತಿಯನ್ನು ಪಡೆದಿದೆ.**

ಗುರುರಾಜ.ಕನ್ನೂರ

ಸರ್ಕಾರಿ ಆಸ್ಪತ್ರೆಗಳೆಂದರೆ ದೂರ ಉಳಿಯುವ ಇಂದಿನ ದಿನಗಳಲ್ಲಿ ಗುಣಮಟ್ಟ ಹಾಗೂ ಸೋಂಕು ರಹಿತ ಸೇವೆಗೆ ಮುಂದಾಗಿ ಸಾರ್ವಜನಿಕರಿಂದ ಪ್ರಶಂಸೆಯನ್ನು ಪಡೆಯುವ ಮೂಲಕ ರಾಜ್ಯ ಸರ್ಕಾರದ 2021–22 ನೇ ಸಾಲಿನ ಕಾಯಕಲ್ಪ ಪ್ರಶಸ್ತಿಯನ್ನು ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕು ಆಸ್ಪತ್ರೆಯು ತನ್ನದಾಗಿಸಿಕೊಂಡಿದೆ.

ನಿಜಕ್ಕೂ ಸರ್ಕಾರಿ ಆಸ್ಪತ್ರೆಗಳು ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿವೆ ಎನ್ನುವುದಕ್ಕೆ ಈ ಆಸ್ಪತ್ರೆಯೇ ತಾಜಾ ಉದಾಹರಣೆ. ರಾಜ್ಯದಲ್ಲಿಯೇ 176 ತಾಲೂಕಾ ಆಸ್ಪತ್ರೆಯ ವಿಭಾಗದಲ್ಲಿ ಎರಡನೆಯ ಸ್ಥಾನದಲ್ಲಿ ಕಾಯಕಲ್ಪ ಪ್ರಶಸ್ತಿಗೆ ಭಾಜನವಾದ ರಾಜ್ಯದ ಎರಡನೇ ತಾಲೂಕು ಆಸ್ಪತ್ರೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಈ ಬಸವನಬಾಗೇವಾಡಿ ತಾಲೂಕು ಆಸ್ಪತ್ರೆ.

ಆಸ್ಪತ್ರೆಯ ಪ್ರವೇಶ ದ್ವಾರಕ್ಕೆ ಕಾಲಿಟ್ಟರೆ ಸಾಕು, ಕಣ್ಣು ಹಾಯಿಸಿದಲೆಲ್ಲಾ ಹಸಿರು ಲೋಕವೇ ನಿಮ್ಮ ಮುಂದೆ ಅನಾವರಣವಾಗುತ್ತದೆ. ಪ್ರಶಸ್ತಿಯೊಂದಿಗೆ 10 ಲಕ್ಷ ರೂ. ಬಹುಮಾನ ನೀಡಲಾಗಿದೆ. ರಾಜ್ಯದ 174 ತಾಲೂಕು ಆಸ್ಪತ್ರೆಗಳನ್ನು ಹಿಂದಿಕ್ಕಿ ಈ ಪ್ರಶಸ್ತಿಗೆ ಬಸವನಬಾಗೇವಾಡಿ ತಾಲೂಕು ಆಸ್ಪತ್ರೆಯು ಭಾಜನವಾಗಿದೆ.


Downloaded From:www.kpscvaani.com

### ಆಯ್ಕೆ ಹೇಗೆ?

ದಾಖಲಾತಿ ನಿರ್ವಹಣೆ, ತ್ಯಾಜ್ಯಗಳ ವಿಲೇವಾರಿ, ಒಳ ಹಾಗೂ ಹೊರ ರೋಗಿ ವಾರ್ಡ್‌ಗಳ ಸ್ವಚ್ಛತೆ, ಪ್ರಸೂತಿ ಶೌಚಾಲಯ, ಪರಿಸರ, ರೋಗಿಗಳಿಗೆ ಕುಡಿಯುವ ನೀರು ಸರಬರಾಜು, ಸೊಳ್ಳೆ ಪರದೆ, ಸಿಬ್ಬಂದಿ ಲಭ್ಯತೆ, ಹೊರಾಂಗಣ ವಾತಾವರಣ, ಸಂಘ ಸಂಸ್ಥೆಯೊಂದಿಗೆ ಕಾರ್ಯನಿರ್ವಹಣೆ ಸೇರಿದಂತೆ ಪ್ರಮುಖ ಅಂಶಗಳ ಆಧಾರದ ಮೇಲೆ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

"ಸ್ವಚ್ಛತೆಯೇ ಆರೋಗ್ಯ" ಎನ್ನುವ ಧ್ಯೇಯ ಹೊಂದಿರುವ ಈ ತಾಲೂಕು ಆಸ್ಪತ್ರೆಯಲ್ಲಿ ವೈದ್ಯಕೀಯ ಸೇವೆ ಜೊತೆಗೆ ಸ್ವಚ್ಛತೆ, ಶುಚಿತ್ವಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಎಲ್ಲಿ ಸ್ವಚ್ಚತೆ, ಶಿಸ್ತು ಇರುತ್ತದೋ ಅಲ್ಲಿ ಉತ್ತಮ ಆರೋಗ್ಯ ಇರುತ್ತದೆ ಎನ್ನುವುದು ಇಲ್ಲಿನ ಸಿಬ್ಬಂದಿಗಳ ಅಭಿಮತ.

### ಸಿಬ್ಬಂದಿಗೆ ತರಬೇತಿ:

ಈ ಆಸ್ಪತ್ರೆಯಲ್ಲಿ 60 ಖಾಯಂ ಸಿಬ್ಬಂದಿಗಳಿದ್ದು. 40 ಸಿಬ್ಬಂದಿಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ಸ್ವಚ್ಛತೆ ಕಾಪಾಡಲು ನಿಯೋಜಿಸಲಾಗಿದೆ. ದಿನಕ್ಕೆ ಮೂರು ಬಾರಿ ವಾರ್ಡ್‌ಗಳ, ಹೊರಾಂಗಣ ಪ್ರಾಂಗಣ, ಆಸ್ಪತ್ರೆ ಸುತ್ತಮುತ್ತ ಸ್ವಚ್ಛತೆ ಕಾಪಾಡಲು ಸಿಬ್ಬಂದಿಗಳಿಗೆ ಪ್ರತಿ ವಾರ ತರಬೇತಿ ನೀಡಲಾಗುತ್ತದೆ.

1957 ರಲ್ಲೇ 6 ಎಕರೆ ವಿಸ್ತಾರವಾದ ಪ್ರದೇಶದಲ್ಲಿ ಸ್ಥಾಪನೆಯಾಗಿರುವ ಈ ಆಸ್ಪತ್ರೆಗೆ ಒಟ್ಟು 100 ಹಾಸಿಗೆಗಳಿವೆ. ಎಲ್ಲ ವಿಭಾಗಗಳಲ್ಲೂ ಯಾವುದೇ ಖಾಸಗಿ ಹೈಟೆಕ್ ಆಸ್ಪತ್ರೆಗೆ ಕಡಿಮೆಯಿಲ್ಲದಂತೆ ಕಾರ್ಯ ನಿರ್ವಹಿಸುತ್ತಾ, ಬಸವನಬಾಗೇವಾಡಿ ತಾಲೂಕು ಅಲ್ಲದೇ ನೆರೆ ತಾಲೂಕಿನ ವಿವಿಧ ಹಳ್ಳಿಗಳಿಂದ ನಿತ್ಯ ಆಗಮಿಸುವ ಏಳುನೂರಕ್ಕೂ ಅಧಿಕ ರೋಗಿಗಳ ಪಾಲಿಗೆ ಧನ್ವಂತರಿಯಂತೆ ಸೇವೆ ಒದಗಿಸುತ್ತಿದೆ. ಗ್ರಾಮೀಣ ಭಾಗದಲ್ಲಿ ವಾರ್ಡಗಳ ಸ್ವಚ್ಛತೆ ಕಾಪಾಡುವುದು ಕಷ್ಟಕರ. ಆದರೆ ಇಲ್ಲಿನ ಸಿಬ್ಬಂದಿ ಅದನ್ನು ಸವಾಲಾಗಿ ಸ್ವೀಕರಿಸಿದ್ದಾರೆ.






**ವೈದ್ಯಕೀಯ ಸೇವೆ ಜೊತೆಗೆ ಇಲ್ಲಿ ಪ್ರಮುಖವಾಗಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಗುಣಮಟ್ಟದ ಸೇವೆ ನೀಡಲು ಸಿಬ್ಬಂದಿ ಹಾಗೂ ಸಾರ್ವಜನಿಕರ ಪಾಲು ಹೆಚ್ಚಿನದಿದೆ. ನಿರಂತರವಾಗಿ ಸಿಬ್ಬಂದಿ ಹಾಗೂ ರೋಗಿಗಳಿಗೆ ಸ್ವಚ್ಛತೆ ಕುರಿತಾಗಿ ಶಿಕ್ಷಣ ಹಾಗೂ ತಿಳುವಳಿಕೆ ನೀಡಲಾಗುತ್ತದೆ. ಈ ಪ್ರಶಸ್ತಿಯಿಂದ ನಮ್ಮ ಸಿಬ್ಬಂದಿ ವರ್ಗದವರ ಸಂತೋಷ ಹಿಮ್ಮಡಿಯಾಗಿದೆ. ಇದರೊಂದಿಗೆ ಕೇವಲ ಪ್ರಶಸ್ತಿಗೆ ಅಪೇಕ್ಷೆ ಪಡದೇ ಬಡ ರೋಗಿಗಳ ಸೇವೆಯಲ್ಲಿ ನಮ್ಮ ಚಿತ್ತವಿದೆ.**

**–ಡಾ. ಸಾಬರ್.ಡಿ. ಪಟೇಲ್,**
**ವೈದ್ಯಾಧಿಕಾರಿಗಳು,**
**ಬಸವನಬಾಗೇವಾಡಿ ತಾಲೂಕು**

ಇನ್ನು ಪ್ರತಿನಿತ್ಯ ಬಂದು ಹೋಗುವ ರೋಗಿಗಳಿಗೆ ನೀರು, ಹಾಸಿಗೆ, ಕೆಲವು ಬಡ ರೋಗಿಗಳಿಗೆ ಊಟದ ವ್ಯವಸ್ಥೆ ಹೀಗೆ ಹತ್ತು ಹಲವು ಸೌಲಭ್ಯಗಳನ್ನು ನೀಡುವ ಕಾರಣಗಳಿಂದ ಈ ಆಸ್ಪತ್ರೆಯು ಜನಸ್ನೇಹಿಯಾಗಿದೆ. ಹಾಗೆಯೇ ಇಲ್ಲಿ ರೋಗಿಗಳ ಸಹಾಯಕರುಗಳಿಗಾಗಿಯೇ ಒಂದು ವಿಶ್ರಾಂತಿ ಧಾಮವು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

ಈ ಆಸ್ಪತ್ರೆಯು 2 ಡಯಾಲಿಸಸ್ ಯಂತ್ರಗಳನ್ನು ಹೊಂದಿದ ಸುಸಜ್ಜಿತ ವಿಭಾಗ, 4 ಯಂತ್ರ ಒಳಪಟ್ಟ ಮಕ್ಕಳ ತೀವ್ರ ನಿಗಾ ಘಟಕ, 17 ಹಾಸಿಗೆಯ ವಯಸ್ಕ ರೋಗಿಗಳ ತೀವ್ರ ನಿಗಾ ಘಟಕ, 1 ಸುಸಜ್ಜಿತ ಶಸ್ತ್ರಚಿಕಿತ್ಸಾ ಕೊಠಡಿ, ಎದೆ ಹಾಲುಣಿಸುವ ಸ್ಥಳ, ಔಷಧಿಯ ಸಸ್ಯಗಳ ವನ, ಬಟ್ಟೆ ತೊಳೆಯುವ ಸ್ಥಳ, ತುರ್ತು ಚಿಕಿತ್ಸಾ ಘಟಕ, ರೋಗಿಗಳಿಗೆ ರಿಯಾಯತಿ ದರದಲ್ಲಿ ಕ್ಯಾಂಟೀನ್, ನಂದಿನಿ ಮಳಿಗೆ, ಮಕ್ಕಳ ಸಂತಾನಹರಣ ಚಿಕಿತ್ಸಾ ಕೊಠಡಿಯನ್ನು ಹೊಂದಿದೆ. ಈ ತಾಲೂಕು ಆಸ್ಪತ್ರೆಗೆ ನಿತ್ಯವೂ ಸುಮಾರು 50 ಜನರು ಒಳರೋಗಿಗಳಾಗಿ ಬಂದರೆ 700 ಕ್ಕೂ ಹೆಚ್ಚು ಜನ ಹೊರರೋಗಿಗಳಾಗಿ ಬರುತ್ತಾರೆ. ಇಲ್ಲಿ ತಿಂಗಳಲ್ಲಿ 10 ರಿಂದ 15 ಸಿಜರೀನ್ ಹೆರಿಗೆ ಆಗುತ್ತದೆ. ಮೂರು ತಿಂಗಳಲ್ಲಿ 23 ಸಾವಿರ ಹೊರರೋಗಿಗಳು ಇಲ್ಲಿಗೆ ಬಂದು ತಪಾಸಣೆ ಮಾಡಿಸಿಕೊಂಡಿದ್ದಾರೆ.

2021–22ನೇ ಸಾಲಿನ ರಾಜ್ಯಮಟ್ಟದ ಕಾಯಕಲ್ಪ ಪ್ರಶಸ್ತಿಯನ್ನು 10 ಲಕ್ಷ ರೂಗಳ ಬಹುಮಾನವನ್ನು ಆಡಳಿತ ವೈದ್ಯಾಧಿಕಾರಿಗಳಾದ ಡಾ. ಸಾಬರ್ ಡಿ ಪಟೇಲ್ ರಾಜ್ಯ ಆರೋಗ್ಯ ಆಯುಕ್ತರಾದ ರಣದೀಪ್ ಸಿಂಗ್ ಹಾಗೂ ರಾಜ್ಯ ಉಪ ನಿರ್ದೇಶಕರಾದ ಡಾ. ರಾಜಕುಮಾರ್ ಅವರಿಂದ ಇತ್ತೀಚೆಗೆ ಪ್ರಶಸ್ತಿ ಸ್ವೀಕರಿಸಿದರು. ಪ್ರಶಸ್ತಿ ಮೊತ್ತ 10 ಲಕ್ಷ ರೂ..ಗಳನ್ನು ಸಹ ಆಸ್ಪತ್ರೆಯ ಅಭಿವೃದ್ಧಿಗೆ ಬಳಸಲಾಗುತ್ತದೆ ಎಂದು ವೈದ್ಯಾಧಿಕಾರಿಗಳು ತಿಳಿಸಿದ್ದಾರೆ.



Downloaded From:www.kpscvaani.com













## ಫಲಪುಷ್ಪ ಪ್ರದರ್ಶನದಲ್ಲಿ ಕಳೆಕಟ್ಟಿದ

# ವಿಧಾನಸೌಧದ ಪುಷ್ಪ ಮಾದರಿ

ಸ್ವಾತಂತ್ರ್ಯೋತ್ಸವದ ಅಂಗವಾಗಿ ಪ್ರತಿ ವರ್ಷ ಲಾಲ್‌ಬಾಗ್‌ನಲ್ಲಿ ತೋಟಗಾರಿಕೆ ಇಲಾಖೆಯು ಆಯೋಜಿಸುವ ಫಲಪುಷ್ಪ ಪ್ರದರ್ಶನದಲ್ಲಿ ಈ ವರ್ಷ ಕೆಂಗಲ್ ಹನುಮಂತ್ಯ ಅವರ ಸ್ಮರಣಾರ್ಥ ಫಲಪುಷ್ಪ ಪ್ರದರ್ಶವನ್ನು ಏರ್ಪಡಿಸಲಾಗಿತ್ತು. ಬ್ರಿಟೀಷರ ಕಾಲದಲ್ಲಿ 140 ಎಕರೆ ಪ್ರದೇಶದಲ್ಲಿ ನಿರ್ಮಾಣ ಮಾಡಲಾಗಿದ್ದ ಲಾಲ್‌ಬಾಗ್ ಉದ್ಯಾನವನಕ್ಕೆ ಕೆಂಗಲ್ ಹನುಮಂತಯ್ಯ ಅವರು ಇನ್ನೂ ಹೆಚ್ಚುವರಿಯಾಗಿ 100 ಎಕರೆ ಪ್ರದೇಶವನ್ನು ನೀಡುವ ಮೂಲಕ ಲಾಲ್‌ಬಾಗ್ ಉದ್ಯಾನವನವನ್ನು ಮತ್ತಷ್ಟು ಕಳೆಕಟ್ಟುವಂತೆ ಮಾಡಿದರಲ್ಲದೆ, ಲಾಲ್‌ಬಾಗ್ ಸುತ್ತ ರಕ್ಷಣಾ ಗೋಡೆಯ ನಿರ್ಮಾಣ ಮಾಡಿಸಿ, ಅತಿಕ್ರಮಣಕ್ಕೆ ಕಡಿವಾಣ ಹಾಕಿದರು.

ಹಾಗಾಗಿ ಈ ವರ್ಷ ಅವರ ನೆನಪಿಗಾಗಿ ಅವರು ನಿರ್ಮಿಸಿದ ವಿಧಾನಸೌಧದ ಮಾದರಿಯನ್ನು ಫಲಪುಷ್ಪ ಪ್ರದರ್ಶನಲ್ಲಿ ನಿರ್ಮಿಸಲಾಗಿತ್ತು. ಅಲ್ಲದೆ ಹನುಮಂತಯ್ಯ ಅವರು ಲಾಲ್‌ಬಾಗ್‌ನಲ್ಲಿ ಗಿಡ ನೆಡುತ್ತಿರುವುದು, ಅವರು ರೈಲ್ವೇ ಮಂತ್ರಿ ಆಗಿದ್ದ ಸಂದರ್ಭ, ಕರ್ನಾಟಕ ಏಕೀಕರಣಗೊಂಡ ಸಂದರ್ಭ, ಕನ್ನಡ ಸಂಸ್ಕೃತಿ ಇಲಾಖೆ ಪ್ರಾರಂಭಸಿದ ಸಂದರ್ಭ, ಇವೇ ಮುಂತಾದ ಸಂದರ್ಭಗಳಲ್ಲಿ ಸೆರೆಹಿಡಿಯಲಾದ ಅವರ ಅಪರೂಪದ ಛಾಯಾಚಿತ್ರಗಳನ್ನು ಪ್ರದರ್ಶಿಸುವ ಜೊತೆ ಜೊತೆಗೆ ಅದಕ್ಕೆ ಸಂದರ್ಭೋಚಿತವಾಗಿ ಪುಷ್ಪದಲ್ಲಿ ಕಲಾಕೃತಿಗಳನ್ನು ನಿರ್ಮಿಸಲಾಗಿತ್ತು.

ಸುಮಾರು 7.3 ಲಕ್ಷ ವಿವಿಧ ತಳಿಯ ಪುಷ್ಪಗಳನ್ನು ಬಳಸಿಕೊಂಡು ನಿರ್ಮಿಸಲಾಗಿದ್ದ ವಿಧಾನಸೌಧದ ಮಾದರಿಯು ಜನರನ್ನು ಆಕರ್ಷಿಸಿತು. ಅಲ್ಲದೆ ವಿಧಾನಸೌಧ ಮಾದರಿಯ ಮುಂಭಾಗದಲ್ಲಿ ಇರಿಸಲಾಗಿದ್ದ 14 ಅಡಿ ಎತ್ತರದ ಕೆಂಗಲ್ ಹನುಮಂತಯ್ಯ ಪ್ರತಿಮೆಯಂತೂ ಎಲ್ಲರ ಮನ ಸೂರೆಗೊಳಿಸಿತು. ಇದುವರೆಗೂ ತೋಟಗಾರಿಕೆ ಇಲಾಖೆ ಮತ್ತು ಮೈಸೂರು ಉದ್ಯಾನ ಕಲಾ ಸಂಘದ ಆಶ್ರಯದಲ್ಲಿ 213 ಫಲಪುಷ್ಪ ಪ್ರದರ್ಶನವನ್ನು ನಡೆಸಲಾಗಿದೆ. ಈ ವರ್ಷ ಕೆಂಗಲ್ ಹನುಮಂತಯ್ಯ ಅವರ ಸ್ಮರಣಾರ್ಥ ಆಯೋಜಿಸಲಾಗಿದ್ದ ಫಲಪುಷ್ಪ ಪ್ರದರ್ಶನವು 214ನೇ ಪ್ರದರ್ಶನವಾಗಿದ್ದು, ಫಲಪುಷ್ಪ ಪ್ರದರ್ಶನ ಕ್ಷೇತ್ರದಲ್ಲಿ ರಾಷ್ಟ್ರಮಟ್ಟದಲ್ಲಷ್ಟೇ ಅಲ್ಲದೆ ಅಂತಾರಾಷ್ಟ್ರೀಯ ಮಟ್ಟದಲ್ಲೂ ದಾಖಲೆಯಾಗಿದೆ.

ಹನ್ನೆರಡು ದಿನಗಳ ಕಾಲ ಪ್ರದರ್ಶನಗೊಂಡ ಈ ಬಾರಿಯ ಫಲಪುಷ್ಪ ಪ್ರದರ್ಶನವನ್ನು 8.26 ಲಕ್ಷ ಜನರು ವೀಕ್ಷಣೆ ಮಾಡಿದ್ದರಿಂದ ನಾಲ್ಕು ಕೋಟಿ ರೂ ಹಣ ಸಂಗ್ರಹವಾಗಿದೆ. ಇದರಲ್ಲಿ ಪ್ರದರ್ಶನಕ್ಕೆ ತಗುಲಿದ ವೆಚ್ಚವನ್ನು ಕಳೆದರೆ ಸರ್ಕಾರಕ್ಕೆ ಇದರಿಂದ ಒಂದು ಕೋಟಿ ಇಪ್ಪತ್ತೂರು ಲಕ್ಷ ರೂ ಆದಾಯ ಬಂದಿದೆ. ಈ ಮೊತ್ತವು ಅತಿ ಹೆಚ್ಚು ಆದಾಯಗಳಿಸಿದ ಸಾಧನೆಗೆ ಪ್ರಾಪ್ತವಾಗಿದೆ.



Downloaded From:www.kpscvaani.com




# ಅಂತಾರಾಷ್ಟ್ರೀಯ ಐರನ್ ಮ್ಯಾನ್

**ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯ ಸಹಾಯಕ ನಿರ್ದೇಶಕರು ಈಗ ಅಂತಾರಾಷ್ಟ್ರೀಯ ಐರನ್ ಮ್ಯಾನ್ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ**

ಸುರೇಶ ಹಿರೇಮಠ

ಜುಲೈ 2ನೇ ತಾರೀಖಿನಂದು ಕಜಖಿಸ್ಥಾನ ದೇಶದ ರಾಜಧಾನಿ ಆಸ್ತಾನದಲ್ಲಿ ನಡೆದ ಅಂತಾರಾಷ್ಟ್ರೀಯ ಐರನ್ ಮ್ಯಾನ್ ಸ್ಪರ್ಧೆಯಲ್ಲಿ ಭಾಗವಹಿಸಿ 4.2 ಕಿ.ಮೀ ಈಜಿ, 180 ಕಿ.ಮೀ ಸೈಕ್ಲಿಂಗ್ ಮಾಡಿ ಹಾಗೂ 42 ಕಿ.ಮೀ ಓಟವನ್ನು 13 ಗಂಟೆ 27 ನಿಮಿಷದಲ್ಲಿ ಪೂರ್ಣಗೊಳಿಸಿ ಭಾರತ ದೇಶದ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

62 ದೇಶಗಳಿಂದ 1200 ಸ್ಪರ್ಧಾಳುಗಳು ಭಾಗವಹಿಸಿದ್ದ ಈ ಸ್ಪರ್ಧೆಯಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿದ ಮೊದಲ ಸರ್ಕಾರಿ ಅಧಿಕಾರಿ ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ. ಬಾಲ್ಯದಿಂದಲು ಕ್ರೀಡೆಯಲ್ಲಿ ಆಸಕ್ತಿ ಹೊಂದಿದ ಇವರು ಡಿವೈಎಸ್‌ಪಿ ಆಗಿದ್ದ ದಿವಗಂತ ಹಣಮಂತಪ್ಪ ನಿ ಅಮರಾಪುರ ಅವರ ಪುತ್ರರಾಗಿದ್ದಾರೆ. ತಂದೆಯಂತೆ ಕುಸ್ತಿಯಲ್ಲಿ ಆಸಕ್ತಿ ಹೊಂದಿರುವ ಇವರು ಕಾಲೇಜು ದಿನಗಳಲ್ಲಿ ರಾಷ್ಟ್ರೀಯ ಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ.

2010 ರಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಬೆಳಗಾವಿ ಜಿಲ್ಲೆಯ ಸವದತ್ತಿಯ ಕಗದಾಳ, ಇನಾಮಹೊಂಗಲ್, ಉಗರಗೋಳ ಗ್ರಾಮ ಪಂಚಾಯತ್‌ನಲ್ಲಿ ಸೇವೆ ಸಲ್ಲಿಸಿದ್ದಾರೆ. ಇಲಾಖೆಯ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ, "ಗಾಂಧಿ ಗ್ರಾಮ ಪುರಸ್ಕಾರಕ್ಕೆ" ಭಾಜನರಾಗಿದ್ದಾರೆ. 2018 ರಲ್ಲಿ ಸಹಾಯಕ ನಿರ್ದೇಶಕರ (ಗ್ರಾಮೀಣ ಉದ್ಯೋಗ) ಹುದ್ದೆಗೆ ಬಡ್ತಿ ಹೊಂದಿದ ಇವರು ಗ್ರಾಮೀಣ ಕೂಲಿ ಕಾರ್ಮಿಕರಿಗಾಗಿ ಸೇವೆ ಸಲ್ಲಿಸಿದ್ದಕ್ಕೆ 'ಅತ್ಯುತ್ತಮ ಸಹಾಯಕ ನಿರ್ದೇಶಕ' ಪ್ರಶಸ್ತಿಯನ್ನು ಸ್ವಿಕರಿಸಿದ್ದಾರೆ. ಕ್ರೀಡಾ ಸ್ಪೂರ್ತಿಯನ್ನು ಗ್ರಾಮಗಳ ಜನತೆಯ ಕಲ್ಯಾಣಕ್ಕಾಗಿ ಶ್ರಮಿಸುತ್ತಿದ್ದು, ಓಟ ಮತ್ತು ಸೈಕಲ್ ಮೂಲಕ ಬೆಳಗಿನ ಹೊತ್ತಿನಲ್ಲಿ ಹಳ್ಳಿಗಳಿಗೆ ತೆರಳಿ ಜನ ಜಾಗೃತಿ ಮೂಡಿಸುತ್ತಿರುವ ಯುವ ಅಧಿಕಾರಿ ಸದಾನಂದ ಹುಬ್ಬಳ್ಳಿ ತಾಲ್ಲೂಕು ಪಂಚಾಯತಿಯಲ್ಲಿ ಸಹಾಯಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಕೆಲಸದ ಒತ್ತಡದ ಮಧ್ಯೆಯೂ ದೇಹದ ತೂಕವನ್ನು ನಿಯಂತ್ರಿಸಿಕೊಳ್ಳಲು ಪ್ರಾರಂಭಿಸಿದ ಸೈಕ್ಲಿಂಗ್ ಇಂದು ಈ ಸಾಧನೆಯ ಮಟ್ಟಕ್ಕೆ ಅವರನ್ನು ಬೆಳಸಿದೆ. ಬಿಡುವಿನ ಮತ್ತು ರಜಾ ದಿನಗಳಲ್ಲಿ ಹುಬ್ಬಳ್ಳಿ ಧಾರವಾಡದ ಸೈಕ್ಲಿಸ್ಟ್‌ಗಳೊಂದಿಗೆ ಆಗಾಗ ಅಭ್ಯಾಸ ಮಾಡುತ್ತಾರೆ. ಹವ್ಯಾಸವಾಗಿ ಪ್ರಾರಂಭಗೊಂಡ ಸೈಕ್ಲಿಂಗ್, ಓಟ ಇಂದು






Downloaded From:www.kpscvaani.com

**ಅವರ ಸಾಧನೆಗಳು:**

- ಹುಬ್ಬಳ್ಳಿ ಸೈಕ್ಲಿಂಗ್ ವತಿಯಿಂದ 2017 ರಲ್ಲಿ ಆಯೋಜಿಸಿದ "ಎಮ್.ಟಿ.ಬಿ ಚಾಂಪಿಯನ್ ಶಿಪ್" ನಲ್ಲಿ 8 ನೇ ಸ್ಥಾನ.
- ಗೋವಾದಲ್ಲಿ 2017 ರ ಅಕ್ಟೋಬರ್‌ನಲ್ಲಿ ನಡೆದ "ಟಫ್ ಮ್ಯಾನ್" ಪೂರ್ಣಗೊಳಿಸಿದ್ದಾರೆ.
- 2018 ರಲ್ಲಿ ಹುಬ್ಬಳ್ಳಿ ಫಿಟ್ನೆಸ್ ಕ್ಲಬ್‌ನಿಂದ ಆಯೋಜಿಸಿದ "ಡುವಾತ್ಲಾನ್"ನಲ್ಲಿ ಪ್ರಥಮ ಸ್ಥಾನ.
- 2019 ರಲ್ಲಿ ಒಂದೇ ವರ್ಷದಲ್ಲಿ 100,200,300,400 ಮತ್ತು 600 ಕಿ.ಮೀ ಸೈಕ್ಲಿಂಗ್‌ನಲ್ಲಿ 'ಸೂಪರ್ ರಾಂಡನರ್' ಆಗಿದ್ದಾರೆ.
- 2019 ರಲ್ಲಿಯ ಕೊಲ್ಹಾಪೂರದಲ್ಲಿ ಆಯೋಜಿಸಿದ್ದ ಸ್ಪರ್ಧೆಯಲ್ಲಿ "ಲೋಹ ಪುರುಷ" ಆಗಿದ್ದಾರೆ.
- 2020 ರ ಫೆಬ್ರವರಿಯಲ್ಲಿ ನಾಗಪುರದಲ್ಲಿ ನಡೆದ ಡ್ಯುವಾತ್ಲಾನ್‌ನಲ್ಲಿ "ಟೈಗರ್ ಮ್ಯಾನ್" ಆಗಿದ್ದಾರೆ.
- 2021 ರಲ್ಲಿ ಒರಿಸ್ಸಾದಲ್ಲಿ ಹರ್ಕೂಲಿಯನ್ ಟ್ರೈಯೊತ್ಲಾನ್ ಪೂರ್ಣಗೊಳಿಸಿದ್ದಾರೆ.
- ಅಕ್ಟೋಬರ್ 2021 ರಲ್ಲಿ "ಆಜಾದಿ ಕಾ ಅಮೃತ ಮಹೋತ್ಸವ" ಅಂಗವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಗಳು ಹಾಗೂ ವ್ಯಸನ ಮುಕ್ತ ಭಾರತದ ಜಾಗೃತಿಗಾಗಿ 3800 ಕಿ.ಮೀ ಕಾಶ್ಮೀರದಿಂದ ಕನ್ಯಾಕುಮಾರಿ ವರೆಗೆ 14 ದಿನ 14 ಗಂಟೆಗಳ ಕಾಲ ಕ್ರಮಿಸಿ ಪೂರ್ಣಗೊಳಿಸಿದ್ದಾರೆ.
- 2022 ರಲ್ಲಿ ಗೋವಾದಲ್ಲಿ ನಡೆದ ಆಫ್ ಐರನ್ ಮ್ಯಾನ್ ಪೂರ್ಣಗೊಳಿಸಿದ್ದಾರೆ.



ಅವರಿಗೆ ಹಲವಾರು ಪ್ರಶಸ್ತಿಗಳನ್ನು ತಂದುಕೊಟ್ಟಿದೆ.

ಹವ್ಯಾಸದಿಂದ ಕನಸನ್ನು ನನಸಾಗಿಸಿಕೊಂಡ ಸದಾನಂದರವರ ಸತತ ಪರಿಶ್ರಮ ಛಲ, ತಾಳ್ಮೆ ಯುವಕರಿಗೆ ಮಾದರಿಯಾಗಿದೆ. ಧಾರವಾಡದಲ್ಲಿ ನಡೆದ ರಾಷ್ಟ್ರೀಯ ಯುವ ದಿನದ ಅಂಗವಾಗಿ ನಡೆದ ಯುವ ಜನೋತ್ಸವ ಕಾರ್ಯಕ್ರಮದಲ್ಲಿ ದೇಸಿ ಕ್ರೀಡೆಗಳ ಸಂಪರ್ಕಾಧಿಕಾರಿಯಾಗಿ ಕಾರ್ಯನಿರ್ವಹಿಸಿ ಮೆಚ್ಚುಗೆ ಗಳಿಸಿದ್ದಾರೆ. ಗ್ರಾಮೀಣ ಸರ್ಕಾರಿ ಶಾಲೆಗಳಲ್ಲಿ 8 ಹೈಟೆಕ್ ಆಟದ ಮೈದಾನಗಳನ್ನು ನಿರ್ಮಿಸಿ ವಿದ್ಯಾರ್ಥಿಗಳ ಕ್ರೀಡೋತ್ಸವಕ್ಕೆ ಸ್ಫೂರ್ತಿಯಾಗಿದ್ದಾರೆ. ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ಸಹಾಯಕ ವ್ಯವಸ್ಥಾಪಕರಾಗಿರುವ ಇವರ ಧರ್ಮಪತ್ನಿ ಮುಕ್ತಾ ಕೆ. ಅವರು, ಇವರ ಸಾಧನೆಗೆ ಬೆನ್ನೆಲುಬಾಗಿ ನಿಂತಿದ್ದಾರೆ. ಬಿಡುವಿನ ವೇಳೆಯಲ್ಲಿ ವಿದ್ಯಾರ್ಥಿಗಳಿಗೆ, ಚಿಕ್ಕ ಮಕ್ಕಳಿಗೆ ಕ್ರೀಡಾ ಮಾರ್ಗದರ್ಶನ ನೀಡುತ್ತಾರೆ. ಒಲಿಂಪಿಕ್ಸ್‌ನಲ್ಲಿ ಭಾರತಿಯವರಿಗೆ ಹೆಚ್ಚಿನ ಅವಕಾಶಗಳಿರುವುದರಿಂದ ತರಬೇತಿಯ ಅವಶ್ಯಕತೆ ಇದೆ ಎಂದು ತಮ್ಮ ಕನಸನ್ನು ಬಿಚ್ಚಿಡುತ್ತಾರೆ. ಇತ್ತೀಚೆಗೆ ಸದಾನಂದ ಅವರು ತಮ್ಮ ಸ್ವ ಗ್ರಾಮವಾದ ಹಾವೇರಿಯ ಇಚ್ಚಂಗಿಯಲ್ಲಿ ತಂದೆಯವರ ಪುಣ್ಯಸ್ಮರಣೆ ಅಂಗವಾಗಿ "ಮುಕ್ತ ಕುಸ್ತಿ" ಪಂದ್ಯಾವಳಿಯನ್ನು ಏರ್ಪಡಿಸಿ ದೇಶದ ನೂರಾರು ಜನ ಕುಸ್ತಿ ಪಟುಗಳು ಭಾಗವಹಿಸುವಂತೆ ಮಾಡಿ ತಮ್ಮ ಕ್ರೀಡಾಸಕ್ತಿಯನ್ನು ಮೆರೆದಿದ್ದಾರೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾದ ಸ್ವರೂಪ ಟಿ.ಕೆ. ಅವರು ಸದಾನಂದ ಅವರನ್ನು ಸನ್ಮಾನಿಸಿ ಮಾತನಾಡಿ, ಸದಾನಂದ ಅಮರಾಪುರ್ ಅವರು ಕ್ರೀಡೆಯಲ್ಲಿ ಆಸಕ್ತಿ ಉಳ್ಳವರು ಆಗಿದ್ದು, ಯುವಕರಿಗೆ ಸ್ಫೂರ್ತಿಯಾಗಿದ್ದಾರೆ. ಇವರು ಇನ್ನೂ ಹೆಚ್ಚಿನ ಸಾಧನೆ ಮಾಡಲಿ, ಈ ಸಾಧನೆಯಿಂದ ಜಿಲ್ಲೆಯ ಕೀರ್ತಿ ಹೆಚ್ಚಿದೆ. ಜಿಲ್ಲಾ ಪಂಚಾಯತ್ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ತಿಳಿಸಿದರು.

ಕಾರ್ಯನಿರ್ವಾಹಕ ಅಧಿಕಾರಿ ಗಂಗಾಧರ ಕಂದಕೂರ ಅವರು ಮಾತನಾಡಿ, ಸದಾನಂದ ಅಮರಾಪುರ್ ಅವರು ಕಛೇರಿ ಕೆಲಸದ ಜೊತೆಯಲ್ಲಿ ಈ ಸಾಧನೆ ಮಾಡಿರುವುದು ನಮಗೆ ಮತ್ತು ಹುಬ್ಬಳ್ಳಿ ತಾಲೂಕಿಗೆ ಹೆಮ್ಮೆಯ ವಿಷಯವಾಗಿದೆ ಎಂದರು, ಹಾಗೂ ತಾಲೂಕಿನ ವತಿಯಿಂದ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಗ್ರಾಮೀಣಾಭಿವೃದ್ಧಿ ಇಲಾಖೆಯ ಉನ್ನತ ಅಧಿಕಾರಿ ಸದಾನಂದ ಅಮರಾಪೂರ ಎಲ್.ಕೆ. ಅತೀಕ ಸರ್ ಕುಟುಂಬ ವರ್ಗ, ಸ್ನೇಹಿತರ ಬೆಂಬಲ ಸಹಕಾರ ಮತ್ತು ಸತತ ಕಠಿಣ ಪರಿಶ್ರಮ ತಾಳ್ಮೆಯಿಂದ ಬಹುದಿನದ ಕನಸನ್ನು ನನಸು ಮಾಡಿಕೊಳ್ಳಲು ಸಾಧ್ಯವಾಯಿತು ಎಂದು ಹೇಳಿದರು.






Downloaded From:www.kpscvaani.com



# ಸಿರಿಧಾನ್ಯ ಬೆಳಗಾರರಿಗೆ ಉತ್ತೇಜನ ನೀಡುವ ಯೋಜನೆ: 'ರೈತಸಿರಿ'

**ಸರ್ಕಾರವು ಸಿರಿಧಾನ್ಯ ಬೆಳೆಯುವ ಬೆಳೆಗಾರರಿಗೆ ಉತ್ತೇಜನ ನೀಡುವ ಸಲುವಾಗಿ 'ರೈತಸಿರಿ' ಎಂಬ ಯೋಜನೆಯನ್ನು ಜಾರಿಗೆ ತಂದಿದೆ.**

ಕೆ.ಎಸ್. ರಾಜಮನ್ನಾರ್

ಸಿರಿಧಾನ್ಯಗಳು ಪ್ರಮುಖವಾಗಿ ಮಳೆಯಾಶ್ರಿತ ಬೆಳೆಯಾಗಿದ್ದು ಮುಂಗಾರು ಹಂಗಾಮಿನಲ್ಲಿ ಬೆಳೆಯಲಾಗುತ್ತದೆ. ಈ ಯೋಜನೆಯಡಿ ಸಿರಿಧಾನ್ಯ ಬೆಳೆಗಾರರಿಗೆ (ರಾಗಿ, ಜೋಳ ಮತ್ತು ಸಜ್ಜೆ ಬೆಳೆಗಾರರನ್ನು ಹೊರತುಪಡಿಸಿ) ಪ್ರತಿ ಹೆಕ್ಟೇರ್‌ಗೆ 10 ಸಾವಿರ ರೂಪಾಯಿ ನಗದು ಪ್ರೋತ್ಸಾಹ ನೀಡಲಾಗುತ್ತದೆ. ಸಿರಿಧಾನ್ಯ ಬೆಳೆಯುವ ರೈತರಿಗೆ ಗರಿಷ್ಠ ಎರಡು ಹೆಕ್ಟೇರ್‌ಗೆ ಮಾತ್ರ ಸೀಮಿತವಾಗುವಂತೆ ನೇರ ಸೌಲಭ್ಯ ವರ್ಗಾವಣೆ ಮೂಲಕ ರೈತರ ಬ್ಯಾಂಕ್ ಖಾತೆಗೆ ಪ್ರೋತ್ಸಾಹಧನ ಜಮೆ ಮಾಡಲಾಗುತ್ತದೆ. ಮುಖ್ಯವಾಗಿ ರಾಜ್ಯದ 17 ಜಿಲ್ಲೆಗಳಲ್ಲಿ ಊದಲು, ನವಣೆ, ಹಾರಕ, ಕೊರಲೆ, ಸಾಮೆ, ಮತ್ತು ಬರಗು ಸಿರಿಧಾನ್ಯಗಳಿಗೆ ಈ ಯೋಜನೆಯಡಿ ಒತ್ತು ನೀಡಲಾಗಿದೆ.

ಸಿರಿಧಾನ್ಯಗಳು ಪೌಷ್ಠಿಕಾಂಶಗಳ ಆಗರ. ಇತರೆ ಏಕದಳ ಧಾನ್ಯಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಸಸಾರಜನಕ (ಪ್ರೋಟೀನ್), ನಾರಿನಾಂಶ (ಫೈಬರ್), ಸುಣ್ಣ (ಕ್ಯಾಲ್ಸಿಯಂ) ಮತ್ತು ಖನಿಜಾಂಶ (ಮಿನರಲ್ಸ್)ಗಳನ್ನು ಹೊಂದಿರುತ್ತವೆ. ಸಿರಿಧಾನ್ಯಗಳ ಕೃಷಿಗೆ ಹೆಚ್ಚಿನ ಪರಿಕರಗಳು ಬೇಕಾಗುವುದಿಲ್ಲ, ಅಷ್ಟೇ ಅಲ್ಲ, ಮಣ್ಣಿನ ಫಲವತ್ತತೆ ಕಡಿಮೆ ಇದ್ದರೂ, ಶುಷ್ಕ ಭೂಮಿಯಲ್ಲೂ ಇವುಗಳನ್ನು ಬೆಳೆಯಬಹುದಾಗಿದೆ.

ಸಿರಿಧಾನ್ಯ ಬೆಳೆಯುವ ರಾಜ್ಯಗಳಲ್ಲಿ ಕರ್ನಾಟಕವೇ ಮಂಚೂಣಿಯಲ್ಲಿದೆ. ಲಭ್ಯವಾಗಿರುವ ಅಂಕಿ-ಅಂಶಗಳ ಮಾಹಿತಿ ಪ್ರಕಾರ ರಾಜ್ಯದಲ್ಲಿ 16 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸಿರಿಧಾನ್ಯ ಬೆಳೆಯಲಾಗುತ್ತಿದೆ. ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಉತ್ತರಪ್ರದೇಶ, ಪಂಜಾಬ್, ರಾಜಸ್ಥಾನ ಸಹ ಹೆಚ್ಚಿನ ಪ್ರಮಾಣದಲ್ಲಿ ಸಿರಿಧಾನ್ಯ ಬೆಳೆಯುವ ರಾಜ್ಯಗಳ ಪಟ್ಟಿಯಲ್ಲಿವೆ. ಭಾರತದ ಮನವಿ ಮೇರೆಗೆ ವಿಶ್ವಸಂಸ್ಥೆ 2023 ವರ್ಷವನ್ನು ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷವೆಂದು ಘೋಷಣೆ ಮಾಡಿದೆ. ನೈಜೀರಿಯಾ, ಚೀನಾ, ಮಾಲಿ, ಇಥಿಯೋಪಿಯಾ, ಸೆನೆಗಲ್, ರಷ್ಯಾ ಸಿರಿಧಾನ್ಯ ಬೆಳೆಯುವ ಇತರ ದೇಶಗಳು.


Downloaded From:www.kpscvaani.com

## ರೈತಸಿರಿ ಯೋಜನೆಯ ಉದ್ದೇಶಗಳು

- ಸಿರಿಧಾನ್ಯ ಬೆಳೆ ಬೆಳೆಯಲು ರೈತರನ್ನು ಪ್ರೋತ್ಸಾಹಿಸುವುದು.
- ಸಿರಿಧಾನ್ಯಗಳ ಪ್ರದೇಶ ವಿಸ್ತರಣೆ ಹಾಗೂ ಉತ್ಪಾದನೆ ಹೆಚ್ಚಳ.
- ಪೌಷ್ಠಿಕಭರಿತ ಸಿರಿಧಾನ್ಯಗಳನ್ನು ನಿರಂತರವಾಗಿ ಗ್ರಾಹಕರಿಗೆ ಒದಗಿಸುವುದು.
- ಕಡಿಮೆ ಫಲವತ್ತತೆಯುಳ್ಳ ಜಮೀನಿನ ಸದ್ಬಳಕೆ ಮಾಡುವುದು.
- ಸಿರಿಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಿ ಸಂಸ್ಕರಣೆ ಮತ್ತು ವಾಣಿಜ್ಯೀಕರಣ ಪ್ರೋತ್ಸಾಹಿಸುವುದು.

## ಯೋಜನೆಯ ಅನುಷ್ಠಾನ ಹೇಗೆ?

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಒಗ್ಗೂಡಿಸಿ 'ರೈತಸಿರಿ' ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುವುದು. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಿರಿಧಾನ್ಯ ಬೆಳೆ ಪ್ರಾತ್ಯಕ್ಷಿಕೆ ಕೈಗೊಳ್ಳಲು ಶೇಕಡ 60 ರಷ್ಟು ಅನುದಾನ ಭರಿಸಲಾಗುವುದು. ಉಳಿದ ಶೇಕಡ 40 ರಷ್ಟನ್ನು ರಾಜ್ಯವಲಯ ರೈತಸಿರಿ ಕಾರ್ಯಕ್ರಮದಡಿ ಭರಿಸಲಾಗುವುದು. ಒಂದು ವೇಳೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಅನುದಾನ ಲಭ್ಯವಿಲ್ಲದಿದ್ದರೆ ರಾಜ್ಯವಲಯದಡಿಯೇ ಪೂರ್ಣ ಶೇಕಡ 100 ರಷ್ಟು ಅನುದಾನ ಭರಿಸಬೇಕಾಗುವುದು. ರೈತಸಿರಿ ಯೋಜನೆಯಡಿ ರೂ. 4000/– ಗಳ ಅನುದಾನವನ್ನು ಸಿರಿಧಾನ್ಯ ಬೆಳೆ ಬಿತ್ತನೆ ಮಾಡಿದ 30 ದಿನಗಳ ನಂತರ ಸಿರಿಧಾನ್ಯ ಬೆಳೆಯ ಛಾಯಾಚಿತ್ರವನ್ನು ಪರಿಶೀಲಿಸಿ ರೈತರಿಗೆ ಅನುದಾನ ಪಾವತಿಸಲಾಗುವುದು. ಜಿಲ್ಲಾವಾರು ನಿಗದಿಪಡಿಸಿರುವ ಭೌತಿಕ ಹಾಗೂ ಆರ್ಥಿಕ ಗುರಿಯನ್ವಯ ಈ ಅನುದಾನ ಒದಗಿಸಲಾಗುವುದು.



## ರೈತಸಿರಿ ಯೋಜನೆಯ ಫಲಾನುಭವಿಗಳ ಅರ್ಹತೆ

- ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದರೆ, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮಲೆಕ್ಕಿಗರಿಂದ ದೃಢೀಕರಿಸಿ, ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸಬಹುದು.
- ಒಂದು ವೇಳೆ ಜಮೀನು ಮಹಿಳೆಯ ಹೆಸರಿನಲ್ಲಿದ್ದರೆ, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಿನಲ್ಲಿ ಅರ್ಜಿ ಸಲ್ಲಿಸುವಂತಿಲ್ಲ. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸಬೇಕು.
- ಮುಖ್ಯವಾಗಿ, ಫಲಾನುಭವಿ ರೈತರು ಊದಲು, ನವಣೆ, ಹಾರಕ, ಕೊರಲೆ, ಸಾಮೆ ಮತ್ತು ಬರಗು ಸಿರಿಧಾನ್ಯ ಬೆಳೆದಿರಬೇಕು.
- ರೈತ ಸಂಪರ್ಕ ಕೇಂದ್ರಗಳಲ್ಲಿ ರೈತರು ತಮ್ಮ ಹೆಸರನ್ನು ಫ್ರೂಟ್ಸ್ ಐಡಿ (FRUITS ID) ಯೊಂದಿಗೆ ನೋಂದಾಯಿಸಿಕೊಳ್ಳಲು ನೀಡಿರುವ ಗಡುವಿನೊಳಗೆ ಅರ್ಜಿ ಸಲ್ಲಿಸಬೇಕು.

## ರೈತಸಿರಿ ಯೋಜನೆಯ ಪ್ರಕ್ರಿಯೆ

- ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರಿಂದ ಆಯಾ ಜಿಲ್ಲೆಗೆ ನೀಡಿರುವ ಗುರಿಯನ್ವಯ ತಾಲ್ಲೂಕುವಾರು ಗುರಿ ನಿಗದಿ.
- ರೈತ ಸಂಪರ್ಕ ಕೇಂದ್ರದಲ್ಲಿ ಆಸಕ್ತ ರೈತರ ಹೆಸರುಗಳ ನೋಂದಣಿ.
- ರೈತರಿಂದ ಪಹಣಿ, ರೈತರ ಬ್ಯಾಂಕ್ ಪಾಸ್ ಪುಸ್ತಕ ಹಾಗೂ ಆಧಾರ್ ಕಾರ್ಡ್, ಜಾತಿ ಪ್ರಮಾಣ ಪತ್ರ (ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದ ರೈತರಾದಲ್ಲಿ ಮಾತ್ರ) ದಾಖಲೆ ಪಡೆಯುವುದು.
- ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳಿಂದ ರೈತರ ಜಮೀನಿಗೆ ಭೇಟಿ, ಜಮೀನು ವಿಸ್ತೀರ್ಣ ಮತ್ತು ಜಿಪಿಎಸ್ ಆಧಾರಿತ ಛಾಯಾಚಿತ್ರದ ದಾಖಲೆ ಪಡೆಯುವುದು.
- ಬಿತ್ತನೆ ಸಮಯದಲ್ಲಿ ನೋಂದಾಯಿತ ರೈತರಿಗೆ ಸಂಬಂಧಿಸಿದ ಬೆಳೆಯ ಬೇಸಾಯ ಕ್ರಮಗಳ ಬಗ್ಗೆ ಮಾಹಿತಿ ನೀಡುವುದು ಹಾಗೂ ಬಿತ್ತನೆ ಬೀಜವನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನು ಮಾಡಲು ಕ್ರಮ ಕೈಗೊಳ್ಳುವುದು.
- ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಕಾರ್ಯಕ್ರಮದಡಿ ನಿಯೋಜಿಸಲ್ಪಟ್ಟ ಸಮುದಾಯ ಸಹಾಯಕ (ಸಿಎ) ಮತ್ತು ಸಮುದಾಯ ಸಂಪನ್ಮೂಲ ವ್ಯಕ್ತಿ (ಸಿಆರ್‌ಪಿ) ಇವರ ಸಹಯೋಗದೊಂದಿಗೆ ಬಿತ್ತನೆಯಾದ ವಿಸ್ತೀರ್ಣವನ್ನು ಜಿಪಿಎಸ್ ಆಧಾರಿತ ಛಾಯಾಚಿತ್ರ ಸಹಿತ ದಾಖಲಿಸುವುದು.





Downloaded From:www.kpscvaani.com



- ಬಿತ್ತನೆ ಅವಧಿ ಪೂರ್ಣಗೊಂಡ ಕೂಡಲೇ ತಮ್ಮ ವ್ಯಾಪ್ತಿಯ ಬಿತ್ತನೆಯಾದ ಪ್ರದೇಶದ ಮಾಹಿತಿಯೊಂದಿಗೆ ಅರ್ಹ ರೈತರಿಗೆ ಸರ್ಕಾರದ ಪ್ರೋತ್ಸಾಹಧನ ಪಾವತಿಸಲು ಬಿಲ್ ತಯಾರಿಸಿ ಸಹಾಯಕ ಕೃಷಿ ನಿರ್ದೇಶಕರುಗಳಿಗೆ ಸಲ್ಲಿಸುವುದು.
- ಫಲಾನುಭವಿಗಳು ಹೊಂದಿರುವ ವಿಸ್ತೀರ್ಣಕ್ಕೆ ಸಮನಾಗಿ ಪ್ರೋತ್ಸಾಹಧನ ನೀಡುವುದು ಹಾಗೂ ಬಿಡುಗಡೆಯಾದ ಅನುದಾನವನ್ನು ರೈತರಿಗೆ ನೇರ ನಗದು ವರ್ಗಾವಣೆ ಮೂಲಕ ರೈತರ ಬ್ಯಾಂಕ್ ಖಾತೆಗೆ ಪ್ರೋತ್ಸಾಹಧನ ಜಮೆ ಮಾಡುವುದು.
- ಬೆಳೆಯ ಕಟಾವಿನ ಹಂತದಲ್ಲಿ ಸಿ.ಎ, ಸಿ.ಆರ್.ಪಿ ಸಹಯೋಗದೊಂದಿಗೆ ಎರಡನೇ ಬಾರಿಗೆ ಜಿ.ಪಿ.ಎಸ್ ಆಧಾರಿತ ಛಾಯಾಚಿತ್ರ ಸಹಿತವಾಗಿ ದಾಖಲಿಸುವುದು.

**ಸಂಸ್ಕರಣೆಗೂ ನೆರವು:**

ಸಿರಿಧಾನ್ಯಗಳ ಸಂಸ್ಕರಣೆಗೆ ಉತ್ತೇಜನ ನೀಡಲು ರೈತಸಿರಿ ಯೋಜನೆಯಡಿ ಸಿರಿಧಾನ್ಯ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರಾಂಡಿಂಗ್ ಘಟಕಗಳಿಗೆ ಸಹಾಯಧನ ನೀಡಲು ಸಹ ಅವಕಾಶ ಕಲ್ಪಿಸಲಾಗಿದೆ.

- ಸಿರಿಧಾನ್ಯಗಳ ಸಂಸ್ಕರಣೆಗೆ ಅಗತ್ಯವಿರುವ ಯಂತ್ರೋಪಕರಣಗಳ ಒಟ್ಟು ವೆಚ್ಚದ ಮೇಲೆ ಶೇಕಡ 50 ರಷ್ಟು ಅಥವಾ ಗರಿಷ್ಠ ರೂ.10 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತದೆ. ಆಸಕ್ತರು ಜಿಲ್ಲಾ ಕೇಂದ್ರದ ಕೃಷಿ ಕಚೇರಿಯಲ್ಲಿ ವಿವರವಾದ ಯೋಜನಾ ಪ್ರಸ್ತಾವನೆ ಸಹಿತ ಅರ್ಜಿ ಸಲ್ಲಿಸಬಹುದು.
- ಯೋಜನಾ ಪ್ರಸ್ತಾವನೆಯ ಒಟ್ಟು ಮೊತ್ತ ರೂ.5 ಲಕ್ಷಕ್ಕಿಂತ ಹೆಚ್ಚಿದ್ದರೆ, ನೆರವು ಕೋರುವ ಅರ್ಜಿದಾರರು ಘಟಕ ಸ್ಥಾಪನೆಯ ಉದ್ದೇಶಕ್ಕಾಗಿ ಯಾವುದಾದರೂ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಯಿಂದ ಕಡ್ಡಾಯವಾಗಿ ಸಾಲ ಪಡೆದಿರಬೇಕು.
- ಯೋಜನಾ ಪ್ರಸ್ತಾವನೆಯ ಒಟ್ಟು ಮೊತ್ತ ರೂ.5 ಲಕ್ಷಕ್ಕಿಂತ ಕಡಿಮೆಯಿದ್ದಲ್ಲಿ, ನೆರವು ಕೋರುವ ಅರ್ಜಿದಾರರು ಘಟಕ ಸ್ಥಾಪನೆ ಉದ್ದೇಶಕ್ಕಾಗಿ ಸ್ವಂತ ಬಂಡವಾಳ ಹೂಡಿ ಅಥವಾ ಯಾವುದಾದರೂ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಘಟಕಗಳನ್ನು ಅಳವಡಿಸಿಕೊಳ್ಳತಕ್ಕದ್ದು.
- ಯಂತ್ರೋಪಕರಣಗಳು ಐಎಸ್ಐ/ಬಿಐಎಸ್ ಅಥವಾ ಯಾವುದೇ ರಾಷ್ಟ್ರೀಯ/ಅಂತಾರಾಷ್ಟ್ರೀಯ ಮಾನಕ ಸಂಸ್ಥೆಗಳಿಂದ ಪ್ರಮಾಣ ಪತ್ರ ಪಡೆದಿದ್ದಲ್ಲಿ ಮಾತ್ರ ಖರೀದಿಗೆ ಅವಕಾಶ.
- 2021 ಏಪ್ರಿಲ್ 1 ರ ನಂತರ ಖರೀದಿಸಿ ಅಳವಡಿಸಿದ ಘಟಕಗಳಿಗೆ ಮಾತ್ರ ಸಹಾಯಧನ.

**ಅರ್ಜಿ ಸಲ್ಲಿಕೆಗೆ ಅಗತ್ಯ ದಾಖಲೆಗಳು:**

- ನಿಗದಿತ ನಮೂನೆಯ ಅರ್ಜಿ
- ಘಟಕದ ವಿಳಾಸದ ದಾಖಲೆ
- ವಿವರವಾದ ಯೋಜನಾ ವರದಿ
- ಉದ್ಯಮ್ ಆಧಾರ್ ನೋಂದಾಣಿ (ಇದ್ದಲ್ಲಿ)
- ಕಟ್ಟಡದ ನೀಲನಕ್ಷೆ
- ಮೂಲಸೌಕರ್ಯ ವ್ಯವಸ್ಥೆಗೆ ಪಡೆದ ಪರವಾನಗಿ ಪತ್ರ
- ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲ ಮಂಜೂರಾತಿ ಪತ್ರ
- ಯಂತ್ರೋಪಕರಣಗಳ ಕೊಟೇಷನ್ / ಇನ್‌ವಾಯ್ಸ್
- ಕನಿಷ್ಠ 3 ವರ್ಷಗಳು ಘಟಕದ ಕಾರ್ಯನಿರ್ವಹಣೆ ಕೈಗೊಳ್ಳುವ ಬಗ್ಗೆ ಮುಚ್ಚಳಿಕೆ ಪತ್ರ, ಸಾಧ್ಯವಾಗದಿದ್ದಲ್ಲಿ ಸರಳ ಬಡ್ಡಿ ಸಹಿತ ಸಹಾಯಧನ ಹಿಂದಿರುಗಿಸಬೇಕು
- ಆಧಾರ್ ಕಾರ್ಡ್ / ಪ್ಯಾನ್ ಕಾರ್ಡ್ ಪ್ರತಿ
- ಪರಿಶಿಷ್ಟ ಜಾತಿ/ಪಂಗಡದ ಫಲಾನುಭವಿಯಾದಲ್ಲಿ ಜಾತಿ ಪ್ರಮಾಣ ಪತ್ರ
- ಅನುಷ್ಠಾನಗೊಂಡ ಘಟಕಗಳ ಛಾಯಾಚಿತ್ರಗಳೊಂದಿಗೆ ನಿಗದಿತ ನಮೂನೆಯಲ್ಲಿ ತಪಾಸಣಾ ವರದಿ

ಫಲಾನುಭವಿಗಳು ಸಿರಿಧಾನ್ಯ ಬೆಳೆದಿರುವ ವಿಸ್ತೀರ್ಣಕ್ಕೆ ಸಮನಾಗಿ ಪ್ರೋತ್ಸಾಹಧನ ನೀಡಲಾಗುವುದು. ಆದರೆ 2022-23ನೇ ಸಾಲಿನಲ್ಲಿ ಎನ್ ಎಫ್ ಎಸ್ ಎಮ್ ಯೋಜನೆಯಡಿ ಸಿರಿಧಾನ್ಯ ಪ್ರಾತ್ಯಕ್ಷಿಕೆಯ ಫಲಾನುಭವಿಗಳು ರೈತಸಿರಿ ಯೋಜನೆಯಡಿ ಪ್ರೋತ್ಸಾಹಧನ ಪಡೆಯಲು ಅರ್ಹರಾಗಿರುವುದಿಲ್ಲ. ಹೆಚ್ಚಿನ ರೈತರು ಈ ಯೋಜನೆಯ ಲಾಭ ಪಡೆಯುವಂತಾಗಲು ಸರ್ಕಾರವು ನಿಯಮಗಳಲ್ಲಿ ಪರಿಷ್ಕರಣೆ ತರಲು ಚಿಂತನೆ ನಡೆಸಿದೆ.


Downloaded From:www.kpscvaani.com



# ಸೂರ್ಯ ನಗರಿಯಲ್ಲಿ ಗೃಹ ಜ್ಯೋತಿ ಯೋಜನೆಗೆ ಚಾಲನೆ

**ಆರ್ಥಿಕ ಕತ್ತಲನ್ನು ಸುಸ್ಥಿರ ಬೆಳಕಿನಿಂದ ಹೋಗಲಾಡಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಗೃಹಜ್ಯೋತಿ ಯೋಜನೆಗೆ ಸರ್ಕಾರ ಕಲಬುರಗಿಯಲ್ಲಿ ಚಾಲನೆ ನೀಡಿತು.**

ರವಿ ಮಿರಸ್ಕರ್

**ಮೂ**ರು ತಿಂಗಳ ಹಿಂದೆ ಜರುಗಿದ ಸಾರ್ವತ್ರಿಕ ವಿಧಾನಸಭೆ ಚುನಾವಣೆಯಲ್ಲಿ ಅಭೂತಪೂರ್ವ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಪಂಚ ಗ್ಯಾರಂಟಿಯಲ್ಲಿ ಒಂದಾದ 200 ಯೂನಿಟ್ ಉಚಿತ ವಿದ್ಯುತ್ ಒದಗಿಸುವ "ಉಚಿತ ಬೆಳಕು, ಸುಸ್ಥಿರ ಬದುಕು" ಎಂಬ ಧ್ಯೇಯವಾಕ್ಯದ "ಗೃಹ ಜ್ಯೋತಿ" ಯೋಜನೆಗೆ ಕಳೆದ ಆಗಸ್ಟ್ 5 ರಂದು ಕಲ್ಯಾಣ ಕರ್ನಾಟಕದ ಕೇಂದ್ರಸ್ಥಾನ ಸೂರ್ಯ ನಗರಿ ಕಲಬುರಗಿಯಲ್ಲಿ ಚಾಲನೆ ನೀಡಲಾಗಿದ್ದು, ಇದು ಆರ್ಥಿಕ ಕತ್ತಲಿನಿಂದ ಸುಸ್ಥಿರ ಬೆಳಕಿನೆಡೆಗೆ ಪಯಣ ಎಂದೇ ಬಿಂಬಿಸಲಾಗಿದೆ.

ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಲ್ಲಿ ಒಂದಾದ "ಗೃಹ ಜ್ಯೋತಿ" ರಾಜ್ಯ ಮಟ್ಟದ ಕಾರ್ಯಕ್ರಮವಾದ ಕಾರಣ ಸಹಜವಾಗಿಯೇ ಸುಮಾರು 15–20 ಸಾವಿರ ಜನಸ್ತೋಮ ಕಲಬುರಗಿ ನಗರದ ಐತಿಹಾಸಿಕ ಎನ್.ವಿ. ಮೈದಾನದಲ್ಲಿ ಸೇರಿಕೊಂಡಿದ್ದರು. ಮಳೆಗಾಲ ಹಿನ್ನೆಲೆಯಲ್ಲಿ ವಾಟರ್ ಪ್ರೂಫ್ ಜರ್ಮನ್ ಟೆಂಟ್ ಅಳವಡಿಸಿ, ಬೃಹತ್ ವೇದಿಕೆ ನಿರ್ಮಿಸಲಾಗಿತ್ತು. ಸಾವಿರಾರು ಜನರಿಗೆ ಆಸನದ ವ್ಯವಸ್ಥೆ ಮಾಡಲಾಗಿತ್ತು. ಬಂದಂತಹ ಜನರನ್ನು ರಂಜಿಸಲು ಸ್ಥಳೀಯ ಕಲಾವಿದರಿಂದ ಸಂಗೀತ ಕಾರ್ಯಕ್ರಮ ಸಹ ಏರ್ಪಡಿಸಲಾಗಿತ್ತು.

ವೇದಿಕೆ ಮೇಲೆ ಕೃತಕವಾಗಿ ನಿರ್ಮಿಸಲಾದ ಮನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಟನ್ ಒತ್ತಿ ದೀಪ ಉರಿಸುವ ಮೂಲಕ "ಗೃಹ ಜ್ಯೋತಿ" ಯೋಜನೆಗೆ ವಿದ್ಯುಕ್ತವಾಗಿ ಚಾಲನೆ ನೀಡಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೈಯಲ್ಲಿ ದೀಪದ ಬಲ್ಬ್ ಹಿಡಿದು ಜನರತ್ತ ತಿರಗಿಸಿದ್ದಾಗ ಇದು ಉಚಿತ ಬೆಳಕು, ಸುಸ್ಥಿರ ಬದುಕು ಎಂದು ತೋರಿಸುವಂತಿತ್ತು. ನಂತರ ಮುಖ್ಯಮಂತ್ರಿಗಳು ಸಾಂಕೇತಿಕವಾಗಿ 10 ಜನ ಫಲಾನುಭವಿಗಳಿಗೆ ಶೂನ್ಯ ದರದ ವಿದ್ಯುತ್ ಬಿಲ್ಲು ನೀಡಿ ರಾಜ್ಯದಾದ್ಯಂತ



Downloaded From:www.kpscvaani.com

ಅಧಿಕೃತ ಬಿಲ್ಲು ವಿತರಣೆಗೆ ಚಾಲನೆ ಕೊಟ್ಟರು. ಇದರಿಂದ ರಾಜ್ಯದಲ್ಲಿ 2 ಕೋಟಿ ಗ್ರಾಹಕರು ಯೋಜನೆಯ ಸೌಲಭ್ಯ ಪಡೆಯಲು ಸಹಕಾರವಾಯಿತು. ರಾಜ್ಯಸಭೆ ವಿಪಕ್ಷ ನಾಯಕರಾದ ಡಾ. ಮಲ್ಲಿಕಾರ್ಜುನ ಖರ್ಗೆ, ಇಂಧನ ಸಚಿವರಾದ ಕೆ.ಜೆ.ಜಾರ್ಜ್ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಪಂಚ ಸಚಿವರು, ಶಾಸಕರು, ಜನಪ್ರತಿನಿಧಿಗಳು, ಗಣ್ಯರು, ಹಿರಿಯ ಅಧಿಕಾರಿಗಳು, ಸಾರ್ವಜನಿಕರು, ಫಲಾನುಭವಿಗಳು ಇದಕ್ಕೆ ಸಾಕ್ಷಿಯಾದರು.

ಪ್ರಸ್ತುತ ಪೆಟ್ರೋಲ್, ಡೀಸೆಲ್, ಗ್ಯಾಸ್, ತರಕಾರಿ, ದಿನಸಿ ಬೆಲೆ ಏರಿಕೆ, ರೂಪಾಯಿ ಅಮಾನ್ಯೀಕರಣ, ಜಿ.ಎಸ್.ಟಿ. ತೆರಿಗೆ, ಹಣದುಬ್ಬರದಿಂದ ಜನಸಾಮಾನ್ಯರು ವಿಶೇಷವಾಗಿ ಬಡ ಮತ್ತು ಮಧ್ಯಮ ವರ್ಗದವರ ದೈನಂದಿನ ಜೀವನ ದುಸ್ಥರವಾಗಿದೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ಪ್ರಸಕ್ತ 2023–24ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿ ಜಾರಿಗೆ ತಂದಿರುವ "ಶಕ್ತಿ", "ಅನ್ನ ಭಾಗ್ಯ", "ಗೃಹ ಜ್ಯೋತಿ", "ಗೃಹ ಲಕ್ಷ್ಮೀ" ಹಾಗೂ "ಯುವ ನಿಧಿ" ಜನಪರ ಯೋಜನೆಗಳು ಜನಸಾಮಾನ್ಯರ, ಮಹಿಳೆಯರ, ಲಿಂಗತ್ವ ಅಲ್ಪಸಂಖ್ಯಾತರ, ಯುವಕ–ಯುವತಿಯರ ಬದುಕಿನಲ್ಲಿ ಹೊಸ ಆಶಾಕಿರಣ ಮೂಡಿದೆ. ಒಂದು ಅಂದಾಜಿನ ಪ್ರಕಾರ ರಾಜ್ಯದ ಪ್ರತಿ ಕುಟುಂಬಕ್ಕೆ ವಾರ್ಷಿಕವಾಗಿ ಸುಮಾರು 60 ಸಾವಿರ ರೂ. ವರೆಗೆ ಈ ಯೋಜನೆಗಳಿಂದ ಲಾಭ ಸಿಗಲಿದೆ. ಇನ್ನೂ "ಗೃಹ ಜ್ಯೋತಿ" ಯೋಜನೆಗೆ ರಾಜ್ಯ ಸರ್ಕಾರ 2 ಕೋಟಿ ಗ್ರಾಹಕರಿಗೆ ಉಚಿತ ವಿದ್ಯುತ್ ಒದಗಿಸಲು ಪ್ರತಿ ವರ್ಷ 14 ಸಾವಿರ ಕೋಟಿ ರೂ. ಖರ್ಚು ಮಾಡುತ್ತಿದೆ.

**ಕರ್ನಾಟಕ ಮಾದರಿ ಆಡಳಿತ:** ಕಾರ್ಯಕ್ರಮ ಉದ್ಘಾಟಿಸಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬುದ್ಧ, ಬಸವ, ಅಂಬೇಡ್ಕರ, ಗಾಂಧಿ, ಕುವೆಂಪು ಅವರ ಆಶಯ ಮತ್ತು ಆದರ್ಶಗಳನ್ನು ನಮ್ಮ ಸರ್ಕಾರ ಅಳವಡಿಸಿಕೊಂಡಿದೆ. ಪ್ರಗತಿಪರ ಅಭಿವೃದ್ಧಿಗೆ ನುಡಿದಂತೆ ನಡೆಯುತ್ತಿರುವ ಸರ್ಕಾರ ನಮ್ಮದಾಗಿದೆ. ರಾಜ್ಯದ ಜನರಲ್ಲಿ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ "ಸರ್ವೋದಯ ಸಮಾಜ" ನಿರ್ಮಾಣಕ್ಕೆ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ. ಇದುವೇ ಕರ್ನಾಟಕ ಮಾದರಿ ಆಡಳಿತ ಎಂದು ಬಣ್ಣಿಸಿದರು.

ಮಾತು ಮುಂದುವರೆಸಿದ ಮುಖ್ಯಮಂತ್ರಿಗಳು, ಯೂರೋಪ್ ದೇಶದಲ್ಲಿನ ಸಾರ್ವತ್ರಿಕ ಮೂಲ ಆದಾಯ ಪರಿಕಲ್ಪನೆಯಲ್ಲಿಯೇ "ಶಕ್ತಿ", "ಅನ್ನ ಭಾಗ್ಯ", "ಗೃಹ ಜ್ಯೋತಿ", "ಗೃಹ ಲಕ್ಷ್ಮೀ" ಹಾಗೂ "ಯುವ ನಿಧಿ" ಈ 5 ಗ್ಯಾರಂಟಿ ಯೋಜನೆಗಳು ಜಾರಿಗೆ ತರಲಾಗಿದೆ. ಅನೇಕ ಗುಡಿಸಲುಗಳು ಇಂದಿಗೂ ಬೆಳಕು ಕಂಡಿಲ್ಲ, ಮುಂದೆ ಅವರೆಲ್ಲರ ಮನೆಯಲ್ಲಿಯೂ "ಗೃಹ ಜ್ಯೋತಿ" ಬೆಳಕು ಮೂಡಲಿದೆ. ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿ ಕಾರ್ಯಗಳು ಸಮ–ಸಮನಾಗಿ ನಡೆಯಲಿವೆ. ಇಂತಹ ಯೋಜನೆಗಳ ಜಾರಿಯಿಂದ ರಾಜ್ಯದ ಆರ್ಥಿಕ ಸ್ಥಿತಿ ದಿವಾಳಿಯಾಗಲ್ಲ, ಬದಲಾಗಿ ಜನರ ಆರ್ಥಿಕ ಮಟ್ಟ ಸುಧಾರಣೆಯಾಗಿ ಅವರಲ್ಲಿ ಕೊಂಡುಕೊಳ್ಳುವ ಶಕ್ತಿ ಹೆಚ್ಚಲಿದೆ. ಆ ಮುಖೇನ ರಾಜ್ಯದ ಜಿಡಿಪಿ, ಆರ್ಥಿಕ ಚಟುವಟಿಕೆ ಜಾಸ್ತಿಯಾಗುತ್ತದೆ. ಇದರಿಂದ ಬಡಜನರ ಬದುಕಲ್ಲಿ ಆರ್ಥಿಕಾಭಿವೃದ್ಧಿ ನಿರೀಕ್ಷಿಸಬಹುದಾಗಿದೆ ಎಂದು ವಿಶ್ಲೇಷಿಸಿದರು.

**ಭರವಸೆಯ ಬೆಳಕು:** ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾತನಾಡಿ, ನಮ್ಮ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಬಡವರ ಧ್ವನಿಯಾಗಿ ನಿಂತಿರುವ ಮತ್ತು ಅವರ ಬದುಕು ಭದ್ರಪಡಿಸುವ ಯೋಜನೆಗಳಾಗಿವೆ. "ದೇವರು ವರವನ್ನು ಕೊಡಲ್ಲ, ಶಾಪನು ಕೊಡಲ್ಲ. ಕೇವಲ ಅವಕಾಶ ಮಾತ್ರ ಕೊಡುತ್ತಾನೆ" ಎಂದು ಮಾರ್ಮಿಕವಾಗಿ ನುಡಿದ ಅವರು, ನಮ್ಮ ಸರ್ಕಾರಕ್ಕೆ ಜನತಾ ಜನಾರ್ಧನ ನೀಡಿದ ತೀರ್ಪಿಗೆ ತಲೆ ಬಾಗಿ ಬಡವರ ಹೊಟ್ಟೆಗೆ ಅನ್ನ, ಉಚಿತ ವಿದ್ಯುತ್, ಮಹಿಳೆಯರಿಗೆ ಉಚಿತ ಪ್ರಯಾಣ, ಮಹಿಳಾ ಸಬಲೀಕರಣಕ್ಕೆ 2,000 ರೂ. ಆರ್ಥಿಕ ಸಹಾಯ, ನಿರುದ್ಯೋಗಿ ಯುವಕ–ಯುವತಿಯರಿಗೆ ಮಾಸಿಕ ಭತ್ಯೆ ಒದಗಿಸುವ ಯೋಜನೆ ಜಾರಿಗೆ ತಂದಿದ್ದೇವೆ. ಇವುಗಳು ಜನರ ಬದುಕಿನಲ್ಲಿ ಭರವಸೆಯ ಬೆಳಕು ಚೆಲ್ಲುವ ಯೋಜನೆಗಳಾಗಿವೆ ಎಂದರು.

**ದೇಶದಲ್ಲಿ ಪಂಚ ಗ್ಯಾರಂಟಿ ಸದ್ದು:** ರಾಜ್ಯಸಭೆ ವಿಪಕ್ಷ ನಾಯಕರಾದ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಮಾತನಾಡಿ, ದೇಶದಲ್ಲಿ ಪಂಚ ಗ್ಯಾರಂಟಿ ಯೋಜನೆ ಇದೀಗ ಚರ್ಚೆಯ ವಿಷಯವಾಗಿದೆ. ಇತರೆ ರಾಜ್ಯದ ಮುಖ್ಯಮಂತ್ರಿಗಳು, ರಾಷ್ಟ್ರೀಯ ನಾಯಕರು ತಮ್ಮನ್ನು ಭೇಟಿಯಾದಾಗಲೆಲ್ಲ ಕರ್ನಾಟಕ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆ ಬಗ್ಗೆ ವಿಚಾರಿಸುತ್ತಿರುತ್ತಾರೆ. ಬಡಜನರ ನೋವು–ನಲಿವು ಬಲ್ಲವರು, ಸರ್ವರನ್ನು ಒಳಗೊಂಡ ಅಭಿವೃದ್ಧಿ ಚಿಂತಕರು, ಸರ್ವ ಜನಾಂಗದ ಅಭಿವೃದ್ಧಿಯ ಏಳಿಗೆ ಬಯಸುವವರು ಮಾತ್ರ ಇಂತಹ ಯೋಜನೆ ತರಲು ಸಾಧ್ಯ. ಕರ್ನಾಟಕದಲ್ಲಿ ಇರುವುದು ಜನಪರ ಸರ್ಕಾರ ಎಂದಿರುವೆ. ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ 371 ಜೆ ತಿದ್ದುಪಡಿ ಘೋಷಿಸಿದ ನೆಲದಲ್ಲಿಯೆ ಇಂದು "ಗೃಹ ಜ್ಯೋತಿ" ಯೋಜನೆಗೆ ಚಾಲನೆ ಸಿಗುತ್ತಿರುವುದು ಸಂತಸ. ಗೃಹ ಜ್ಯೋತಿಯ ಈ ಬೆಳಕು ನಾಡಿನ ಉದ್ದಗಲಕ್ಕೂ ಅಭಿವೃದ್ಧಿಯ ಹೊಸ ಕಿರಣವಾಗಿ ಹೊರಹೊಮ್ಮಲಿದೆ ಎಂದು ಆಶಿಸಿದ ಅವರು, ರಾಜ್ಯ ಸರ್ಕಾರ ಕೆ.ಕೆ.ಆರ್.ಡಿ.ಬಿ. ಮಂಡಳಿಗೆ ಪ್ರಸಕ್ತ 2023–24ನೇ ಆಯವ್ಯಯದಲ್ಲಿ ಘೋಷಿಸಿರುವ 5,000 ಕೋಟಿ ರೂ. ಅನುದಾನ ಸಂಪೂರ್ಣವಾಗಿ ಇದೇ ವರ್ಷದಲ್ಲಿ ಖರ್ಚು ಮಾಡಬೇಕು ಮತ್ತು ಈ ಭಾಗದಲ್ಲಿನ ರಾಷ್ಟ್ರೀಯ ಹೆದ್ದಾರಿಗಳನ್ನು ದ್ವಿಪಥದಿಂದ ಆರು ಪಥಕ್ಕೆ ಮೇಲ್ದರ್ಜೇಗೇರಿಸುವ ಮೂಲಕ ಹಿಂದುಳಿದ ಈ ಪ್ರದೇಶದ ಅಭಿವೃದ್ಧಿಗೆ ಕಂಕಣಬದ್ಧರಾಗಬೇಕು ಎಂದರು.

**ಹಾರ–ಸ್ಮರಣಿಕೆ ಹಣ ಪುಸ್ತಕ ಖರೀದಿಗೆ**

ಕಾರ್ಯಕ್ರಮದಲ್ಲಿ ಗಣ್ಯರಿಗೆ ಹಾರ ತುರಾಯಿ, ಸ್ಮರಣಿಕೆ ನೀಡಲಿಲ್ಲ. ದುಂದು ವೆಚ್ಚಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಆ ಹಣವನ್ನು ಗ್ರಾಮ ಪಂಚಾಯತಿಯಲ್ಲಿನ ಗ್ರಂಥಾಲಯಗಳಾದ "ಅರಿವು ಕೇಂದ್ರಕ್ಕೆ" ಮಕ್ಕಳ ಜ್ಞಾನಾರ್ಜನೆಯ ಸ್ಪರ್ಧಾತ್ಮಕ ಪುಸ್ತಕ ಖರೀದಿಗೆ ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ ಅವರಿಗೆ 26 ಲಕ್ಷ ರೂ.ಗಳ ಚೆಕ್ ಅನ್ನು ಸಂಘಟಕರಿಂದ ಮುಖ್ಯಮಂತ್ರಿಗಳ ಮುಖೇನ ಹಸ್ತಾಂತರಿಸಲಾಯಿತು.



Downloaded From:www.kpscvaani.com




**ಇದು ಉಚಿತವಲ್ಲ, ಖಚಿತ ಯೋಜನೆಗಳು:** ರಾಜ್ಯದ ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ತಮ್ಮ ದಿಕ್ಸೂಚಿ ಭಾಷಣದಲ್ಲಿ, ರಾಜ್ಯದಲ್ಲಿ ಜುಲೈ 25 ರೊಳಗೆ 1.42 ಕೋಟಿ ಜನ "ಗೃಹ ಜ್ಯೋತಿ" ಯೋಜನೆಯಡಿ ನೋಂದಣಿ ಮಾಡಿಕೊಂಡಿದ್ದು, ಅವರೆಲ್ಲರಿಗೂ ಆಗಸ್ಟ್ ಮಾಹೆಯ ಬಿಲ್ಲಿನಲ್ಲಿ ಈ ಸೌಲಭ್ಯ ಸಿಗಲಿದೆ. ನೋಂದಣಿ ಪ್ರಕ್ರಿಯೆ ನಿರಂತರವಾಗಿರಲಿದೆ. ಪಂಚ ಗ್ಯಾರಂಟಿಗಳನ್ನು ಕೆಲವರು ಉಚಿತ ಅಂತಾರೆ, ಆದರೆ ಇದು ಉಚಿತ ಅಲ್ಲ ಜನರಲ್ಲಿ ಆರ್ಥಿಕ ಸುಸ್ಥಿರ ತರುವ ಖಚಿತ ಯೋಜನೆಗಳಾಗಿವೆ ಎಂದರು.

**ನುಡಿದಂತೆ ನಡೆಯುವ ಸಂಪ್ರದಾಯ ಮುಂದುವರಿಕೆ:** ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಚುನಾವಣಾ ಪೂರ್ವ ನೀಡಿದ ವಾಗ್ದಾನದಂತೆ 3 ತಿಂಗಳೊಳಗೆ "ಶಕ್ತಿ", "ಅನ್ನಭಾಗ್ಯ", ಹಾಗೂ "ಗೃಹ ಜ್ಯೋತಿ" ಪ್ರಮುಖ ಮೂರು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. 2013–18 ಅವಧಿಯಲ್ಲಿ ನಮ್ಮ ಸರ್ಕಾರ ಇದ್ದಾಗಲು ಸಹ ನಾವು ಜನರಿಗೆ ನೀಡಿದ ಭರವಸೆಯನ್ನು ಈಡೇರಿಸಿದ್ದೇವೆ. ಅದೇ ಭರವಸೆ ಮೇರೆಗೆ ಜನರು ನಮಗೆ ಆಶೀರ್ವಾದ ನೀಡಿದ್ದು, ನುಡಿದಂತೆ ನಡೆಯುವ ಸಂಪ್ರದಾಯ ಈಗಲೂ ಮುಂದುವರೆಸಿದ್ದೇವೆ ಎಂದರು.

**ಊಟದಲ್ಲಿ ಶುಚಿತ್ವಕ್ಕೆ ಆದ್ಯತೆ:** ಕಾರ್ಯಕ್ರಮಕ್ಕೆ ಆಗಮಿಸಿದ ಸಾರ್ವಜನಿಕರು, ಫಲಾನುಭವಿಗಳಿಗೆ ಊಟಕ್ಕೆ ಲಡ್ಡು, ಪಲಾವ್, ಸಾಂಬಾರ್ ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು. ಶುಚಿತ್ವಕ್ಕೆ ಆದ್ಯತೆ ನೀಡಲಾಗಿತ್ತು. ಜನಸಂದಣಿ ಆಗದಂತೆ ಹತ್ತಾರು ಕೌಂಟರ್ ಸ್ಥಾಪಿಸಿ ಜನರನ್ನು ನಿಯಂತ್ರಿಸಲು ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು. ಕಾರ್ಯಕ್ರಮ ಉದ್ದಕ್ಕೂ ಪೌರ ಕಾರ್ಮಿಕರು ತಮ್ಮ ಸ್ವಚ್ಛತಾ ವಾಹಿನಿಯೊಂದಿಗೆ ಕಾರ್ಯಕ್ರಮದ ಆವರಣದ ಸುತ್ತ ಬಿಡಾರ ಹೂಡಿ ನಿರಂತರ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದು ಕಂಡುಬಂತು. ಪ್ರತಿ ಕೌಂಟರ್‌ನಲ್ಲಿ ಜೆಸ್ಕಾಂ ಅಧಿಕಾರಿಗಳು ಮೇಲುಸ್ತುವಾರಿ ವಹಿಸಿ ಊಟಕ್ಕೆ ಗೊಂದಲವಾಗದಂತೆ ನೋಡಿಕೊಂಡರು.

ಅಚ್ಚುಕಟ್ಟು ಸಂಘಟನೆ, ಜೆಸ್ಕಾಂ ಸಿಬ್ಬಂದಿ ಕಾರ್ಯ ಶ್ಲಾಘನೆ: "ಗೃಹ ಜ್ಯೋತಿ" ಚಾಲನೆಯು ರಾಜ್ಯ ಮಟ್ಟದ ಸರ್ಕಾರದ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದ್ದರಿಂದ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು 2–3 ದಿನದಿಂದ ಇಲ್ಲಿಯೆ ಇದ್ದು ಕಾರ್ಯಕ್ರಮದ ಪ್ರತಿಯೊಂದು ಸಿದ್ಧತೆ, ಕಾರ್ಯಕ್ರಮ ಸ್ಥಳ ಪರಿಶೀಲನೆ ಮಾಡಿ ಕಾರ್ಯಕ್ರಮ ಯಶಸ್ಸಿಗೆ ಅಧಿಕಾರಿ ವರ್ಗಕ್ಕೆ ಸಲಹೆ ಸೂಚನೆ ನೀಡಿದ್ದರು. ಪ್ರಾದೇಶಿಕ ಆಯುಕ್ತ ಕೃಷ್ಣ ಬಾಜಪೇಯಿ ನಿರ್ದೇಶನದಂತೆ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ಅಧಿಕಾರಿಗಳ ಒಳಗೊಂಡ 14 ತಂಡಗಳನ್ನು ರಚಿಸಿ ಜವಾಬ್ದಾರಿ ಹಂಚಿದ್ದರು. ಇಂಧನ ಇಲಾಖೆಯ ಹಿರಿಯ ಅಧಿಕಾರಿಗಳ ದಂಡೇ ಕಲಬುರಗಿಗೆ ಬಂದಿತ್ತು. ಇಂಧನ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಗೌರವ್ ಗುಪ್ತ ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಪಂಕಜ್ ಕುಮಾರ ಪಾಂಡೆ ಅವರು ಕಾರ್ಯಕ್ರಮ ರೂಪು ರೇಷೆ ಸಿದ್ಧಪಡಿಸಿದ್ದರು. ಜೆಸ್ಕಾಂನ ವ್ಯವಸ್ಥಾಪ ನಿರ್ದೇಶಕರಾದ ರಾಹುಲ ಪಾಂಡ್ವೆ, ಮಹಾನಗರ ಪಾಲಿಕೆ ಆಯುಕ್ತರಾದ ಭುವನೇಶ ಪಾಟೀಲ ದೇವಿದಾಸ್ ಆದಿಯಾಗಿ ಜಿಲ್ಲಾಡಳಿತವು 15 ದಿನದಿಂದ ಹಗಲು ರಾತ್ರಿ ಎನ್ನದೆ ಕಾರ್ಯಕ್ರಮಕ್ಕೆ ತಯಾರಿ ಮಾಡಿಕೊಂಡಿತ್ತು. ವಿಶೇಷವಾಗಿ ಜೆಸ್ಕಾಂ ಅಧಿಕಾರಿ–ಸಿಬ್ಬಂದಿಗಳು, ಲೈನ್‌ಮೆನ್‌ಗಳು ತಮ್ಮ ಮನೆಯ ಕಾರ್ಯಕ್ರಮವೆಂಬಂತೆ ಓಡಾಡಿದರು. ಈಶಾನ್ಯ ವಲಯದ ಪೊಲೀಸ್ ಮಹಾನಿರೀಕ್ಷಕ ಅನುಪಮ್ ಅಗ್ರವಾಲ್, ಕಲಬುರಗಿ ನಗರ ಪೊಲೀಸ್ ಆಯುಕ್ತ ಚೇತನ ಆರ್., ಡಿ.ಸಿ.ಪಿ. ಅಡ್ಡೂರು ಶ್ರೀನಿವಾಸಲು ಅವರು ಆವರಣದ ಸುತ್ತ ಮತ್ತು ಗಣ್ಯರ ಸೂಕ್ತ ಪೊಲೀಸ್ ಬಂದೋಬಸ್ತ್ ಜವಾಬ್ದಾರಿ ಹೊತ್ತಿಕೊಂಡಿದ್ದರು. ಕಾರ್ಯಕ್ರಮ ಅಚ್ಚುಕಟ್ಟು ನಿರ್ವಹಣೆ ಗಮನಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂಧನ ಸಚಿವ ಕೆ.ಜೆ.ಜಾರ್ಜ್ ಆದಿಯಾಗಿ ಸಚಿವರು, ಶಾಸಕರು ತಮ್ಮ ಭಾಷಣದಲ್ಲಿ ಅಧಿಕಾರಿ–ಸಿಬ್ಬಂದಿಗಳ ಕಾರ್ಯವನ್ನು ಶ್ಲಾಘಿಸಿದರು.

**ಗಣ್ಯರು ಭಾಗಿ:** ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪೌರಾಡಳಿತ ಸಚಿವರಾದ ರಹೀಂ ಖಾನ್, ಅರಣ್ಯ, ಪರಿಸರ ಹಾಗೂ ಜೀವಶಾಸ್ತ್ರ ಸಚಿವರಾದ ಈಶ್ವರ ಖಂಡ್ರೆ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರಾದ ಶರಣಬಸಪ್ಪ ದರ್ಶನಾಪೂರ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ಗೋವಿಂದರಾಜು, ಶಾಸಕರುಗಳಾದ ಎಂ.ವೈ.ಪಾಟೀಲ, ಬಿ.ಆರ್.ಪಾಟೀಲ, ಕನೀಜ್ ಫಾತಿಮಾ, ಚೆನ್ನಾರೆಡ್ಡಿ ಕುನ್ನೂರ, ರಾಜಾ ವೆಂಕಟಪ್ಪ ನಾಯಕ್, ವಿಧಾನ ಪರಿಷತ್ ಶಾಸಕರುಗಳಾದ ಡಾ. ಚಂದ್ರಶೇಖರ ಪಾಟೀಲ ಹುಮನಾಬಾದ, ಅರವಿಂದ ಅರಳಿ, ತಿಪ್ಪಣ್ಣಪ್ಪ ಕಮಕನೂರ ಸೇರಿದಂತೆ ಅನೇಕ ಈ ಭಾಗದ ಜನಪ್ರತಿನಿಧಿಗಳು ಭಾಗಿಯಾಗಿದ್ದರು. ■


Downloaded From:www.kpscvaani.com



# ಅವಿವಾಹಿತೆಗೂ ಗರ್ಭಪಾತದ ಹಕ್ಕು!

**ಕಾನೂನಿನಲ್ಲಿ ಗರ್ಭಪಾತವನ್ನು ಯಾರು, ಯಾವ ಸಂದರ್ಭಗಳಲ್ಲಿ ಮಾಡಿಸಿಕೊಳ್ಳಬಹುದು ಎಂಬ ಮಾಹಿತಿಯನ್ನು ಈ ಲೇಖನವು ನೀಡಲಿದೆ.**

**ಡಾ. ಡಿ. ಎಂ. ಹೆಗಡೆ**

ಗರ್ಭಪಾತವು ಅಪರಾಧವೆ? ಯಾರು ಗರ್ಭಪಾತವನ್ನು ಮಾಡಿಸಿಕೊಳ್ಳಬಹುದು? ವಿವಾಹಿತೆ ಮಹಿಳೆ ಮಾತ್ರ ಗರ್ಭಪಾತವನ್ನು ಮಾಡಿಸಿ ಕೊಳ್ಳಬಹುದೆ? ಗಂಡನಿಂದ ಅತ್ಯಾಚಾರಕ್ಕೊಳಗಾಗಿ, ಗರ್ಭಿಣಿಯಾದ ಮಹಿಳೆಯು ಗರ್ಭಪಾತವನ್ನು ಮಾಡಿಸಿಕೊಳ್ಳಲಿಕ್ಕೆ ಅವಕಾಶ ಇಲ್ಲವೆ? ಅವಿವಾಹಿತೆಯು ಗರ್ಭಪಾತವನ್ನು ಮಾಡಿಸಿಕೊಳ್ಳಲು ಅವಕಾಶ ಇಲ್ಲವೆ? ಸಹಮತದಿಂದ ಗರ್ಭಧರಿಸಿದ ಅವಿವಾಹಿತೆಗೆ ಗರ್ಭಪಾತವನ್ನು ಮಾಡಿಸಿಕೊಳ್ಳಲಿಕ್ಕೆ ಅವಕಾಶ ಇಲ್ಲವೆ? ಗರ್ಭಧರಿಸಿದ ನಂತರ ಎಷ್ಟುವಾರಗಳೊಳಗೆ ಗರ್ಭಪಾತವನ್ನು ಮಾಡಿಸಿಕೊಳ್ಳಬಹುದು? ಅನಿವಾರ್ಯ ಕಾರಣಗಳಿಂದಾಗಿ ವಿವಾಹಿತ ಮಹಿಳೆಯು ಗರ್ಭಪಾತವನ್ನು ಮಾಡಿಸಿಕೊಳ್ಳಬಹುದೆ? ಇತ್ಯಾದಿ ನೂರೆಂಟು ಪ್ರಶ್ನೆಗಳಿವೆ.

ಗರ್ಭಪಾತವನ್ನು ಯಾರು, ಯಾವಾಗ ಮಾಡಿಸಿಕೊಳ್ಳಬಹುದು ಎನ್ನುವ ಪ್ರಶ್ನೆಗೆ ಕಾಲಕಾಲಕ್ಕೆ ನಮ್ಮ ದೇಶದಲ್ಲಿ ಕಾನೂನಿನ ಮಾನ್ಯತೆಯು ಬದಲಾಗುತ್ತ ಇರುವುದನ್ನು ಗಮನಿಸಬಹುದಾಗಿದೆ. ಇದರ ಕುರಿತಾಗಿ ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯವು ಮಹತ್ವದ ತೀರ್ಪನ್ನು ಕೊಟ್ಟಿದೆ. ಮಹಿಳೆಯ ಘನತೆ, ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿದಿದೆ.

ಅವಿವಾಹಿತ ಮಹಿಳೆಯೂ ಸೇರಿದಂತೆ ಎಲ್ಲ ಮಹಿಳೆಯರೂ ಭ್ರೂಣಕ್ಕೆ 24 ವಾರ ತುಂಬುವುದರೊಳಗೆ ಸುರಕ್ಷಿತವಾಗಿ ಗರ್ಭಪಾತವನ್ನು ಮಾಡಿಸಿಕೊಳ್ಳುವ ಹಕ್ಕನ್ನು ಹೊಂದಿದ್ದಾರೆ ಎಂದು ಸುಪ್ರೀಂ ಕೋರ್ಟ್



Downloaded From:www.kpscvaani.com

ಇತ್ತೀಚಿಗೆ ಹೇಳಿದೆ. ಹೆಂಡತಿಯ ಸಮ್ಮತಿ ಇಲ್ಲದೆ ನಡೆಯುವ ಲೈಂಗಿಕ ಸಂಪರ್ಕವನ್ನು ಗರ್ಭಪಾತದ ವಿಚಾರಕ್ಕೆ ಸೀಮಿತವಾಗಿ, ಅತ್ಯಾಚಾರವೆಂದು ಪರಿಗಣಿಸಬಹುದು ಎಂದು ಕೂಡ ಸುಪ್ರೀಂ ಕೋರ್ಟ್ ಹೇಳಿದೆ. ಇದೊಂದು ಬಹಳ ಮಹತ್ವದ ಆದೇಶವಾಗಿದೆ ಎನ್ನುವುದನ್ನು ನಾವಿಲ್ಲಿ ಗಮನಿಸ ಬಹುದಾಗಿದೆ.



ಮಣಿಪುರದಲ್ಲಿ ಓರ್ವ ಅವಿವಾಹಿತೆಗೆ ಗರ್ಭಪಾತವನ್ನು ಮಾಡಿಸಿಕೊಳ್ಳುವುದನ್ನು ನಿರಾಕರಿಸಲಾಗಿತ್ತು. ಇದನ್ನು ಆಕೆ ಸುಪ್ರೀಂ ಕೋರ್ಟಿನಲ್ಲಿ ಪ್ರಶ್ನಿಸಿದ್ದರು. ಆಕೆಯು ತಾನಾಗಿಯೇ ಇಷ್ಟಪಟ್ಟು, ಒಪ್ಪಿತ ಸಂಬಂಧದಿಂದ ಗರ್ಭವನ್ನು ಧರಿಸಿದ್ದರು. ಆಕೆ ತನ್ನ ಹಕ್ಕನ್ನು ಪ್ರಶ್ನಿಸಲಾಗಿದ್ದ, ಅರ್ಜಿಯ ವಿಚಾರಣೆಯನ್ನು ನಡೆಸುವ ಸಂದರ್ಭದಲ್ಲಿ, ನ್ಯಾಯಪೀಠವು ವಿಷಮ ಸಂಬಂಧದಿಂದಾಗುವ ಬಲವಂತದ ಗರ್ಭಧಾರಣೆ ಸೇರಿದಂತೆ ವಿವಿಧ ವಿಚಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿತು.

ಮಗುವನ್ನು ಹೊಂದಬೇಕೋ ಬೇಡವೋ ಎಂದು ನಿರ್ಧರಿಸುವ ಹಕ್ಕನ್ನು ಅವಿವಾಹಿತ ಮಹಿಳೆಗೂ ನೀಡುತ್ತವೆ. ಈ ವಿಷಯದಲ್ಲಿ ವಿವಾಹಿತ ಮಹಿಳೆಗೆ ಇರುವ ಎಲ್ಲ ಹಕ್ಕುಗಳು, ಅವಿವಾಹಿತ ಮಹಿಳೆಗೂ ಇವೆ ಎಂದು ನ್ಯಾಯ ಪೀಠವು ಹೇಳಿದೆ. ವೈದ್ಯಕೀಯ ಗರ್ಭಪಾತ ಕಾಯ್ದೆ ಮತ್ತು ನಿಯಮಗಳನ್ನು ಉಲ್ಲೇಖಿಸಿ ನ್ಯಾಯಪೀಠವು ಈ ಅಭಿಪ್ರಾಯಪಟ್ಟಿದೆ.

ಮಗುವನ್ನು ಹೊಂದಬೇಕೋ ಬೇಡವೋ ಎಂದು ನಿರ್ಧರಿಸುವ ಹಕ್ಕನ್ನು ಮಹಿಳೆಗೆ ಬಿಟ್ಟಿದ್ದು ಮಹತ್ವದ ಆದೇಶವಾಗಿದೆ. ಮಗುವನ್ನು ಹೊಂದಬೇಕೋ ಬೇಡವೋ ಎಂದು ನಿರ್ಧರಿಸುವ ವಿಷಯದಲ್ಲಿ ಮಹಿಳೆಯು ತನ್ನ ಪುರುಷ ಸಂಗಾತಿಯ ಸಮ್ಮತಿಯನ್ನಾಗಲೀ, ಸಲಹೆಯನ್ನಾಗಲೀ, ಆದೇಶವನ್ನಾಗಲೀ ಪಡೆಯಬೇಕಾಗಿಲ್ಲ. ಈ ವಿಷಯವಾಗಿ ಆಕೆಯ ಗಂಡನಿಗೆ ಅಥವಾ ಪುರುಷ ಸಂಗಾತಿಗೆ ಏನನ್ನೂ ಹೇಳುವ ಅಧಿಕಾರವಿಲ್ಲ. ಗರ್ಭಪಾತವನ್ನು ಮಾಡಿಸಿಕೊಳ್ಳುವ ವಿಷಯದಲ್ಲಿಯೂ ಮಹಿಳೆಯು ತನ್ನ ಪುರುಷ ಸಂಗಾತಿಯ ಅನುಮತಿಯನ್ನು ಪಡೆದುಕೊಳ್ಳುವ ಅಗತ್ಯವಿಲ್ಲ.

ಆರೋಗ್ಯದ ಹಕ್ಕು ಅದರಲ್ಲೂ ವಿಶೇಷವಾಗಿ ವ್ಯಕ್ತಿಗಳ ಸಂತಾನೋತ್ಪತ್ತಿ ಆರೋಗ್ಯದ ಹಕ್ಕನ್ನು ರಕ್ಷಿಸುವ ಹೊಣೆಗಾರಿಕೆಯು ಸರ್ಕಾರಕ್ಕೆ ಇದೆ ಎಂದು ನ್ಯಾಯಮೂರ್ತಿ ಡಿ. ವೈ. ಚಂದ್ರಚೂಡ್ ನೇತೃತ್ವದ ಪೀಠವು ಸ್ಪಷ್ಟವಾಗಿ ಹೇಳಿದೆ.

ಮಹಿಳೆಯ ಒಪ್ಪಿಗೆ ಇಲ್ಲದೇ ಅವಳ ಗರ್ಭಪಾತವನ್ನು ಮಾಡಿಸಿದ್ದರೆ ಅದು ಅಂದರೆ ಅವಳಿಗೆ ಗರ್ಭಪಾತವನ್ನು ಮಾಡಿಸಿದವರು ಅಪರಾಧಿಗಳಾಗುತ್ತಾರೆ. Kattaria v/s. State of Madhyapradesh (2001(4) MPHT20CG) ಕೇಸಿನ ತೀರ್ಪಿನಲ್ಲಿ ನ್ಯಾಯಾಲಯವು, ಮಹಿಳೆಯ ಒಪ್ಪಿಗೆ ಇಲ್ಲದೇ ಅವಳ ಗರ್ಭವನ್ನು ತೆಗೆಯಿಸಿದ ಅವಳ ಅತ್ತೆ, ಮಾವ, ಗಂಡ ಹಾಗೂ ವೈದ್ಯರನ್ನು ಅಪರಾಧಿಗಳೆಂದು ಹೇಳಿದೆ.

ಇನ್ನೊಂದು ಕೇಸನ್ನು ಪರಿಶೀಲಿಸಿ ತೀರ್ಪಿತ್ತಾಗ, ನ್ಯಾಯಾಲಯವು ಮಹಿಳೆಯ ತಾಯಿಯ ಒಪ್ಪಿಗೆಯನ್ನು ಪಡೆಯದೇ ಅವಳ ಗರ್ಭವನ್ನು ತೆಗೆಯಿಸಿದ್ದಕ್ಕಾಗಿ ಅವಳ ಗಂಡನಮನೆಯ ಎಲ್ಲರನ್ನೂ ಅಪರಾಧಿಗಳೆಂದು ಶಿಕ್ಷಿಸಿದೆ. ಆಡಿ. NishaMalaviya and anr v/s State of Madhyapradesh (2000 Cri LJ 671).

ಹೆಂಡತಿಯ ಸಮ್ಮತಿ ಇಲ್ಲದ ಲೈಂಗಿಕ ಸಂಪರ್ಕವನ್ನು ಅಕ್ಷರಮಟ್ಟಿಗೆ ಅತ್ಯಾಚಾರ ಎಂದು ಪರಿಗಣಿಸಿದ್ದಾಗಲೀ, ಗರ್ಭಪಾತವನ್ನು ಮಾಡಿಸಿಕೊಳ್ಳುವ ಸಂಪೂರ್ಣ ಹಕ್ಕನ್ನು ಮಹಿಳೆಗೆ ನೀಡಿರುವುದಾಗಲೀ ಭಾರತೀಯ ಮಹಿಳೆಯ ಹಕ್ಕನ್ನು ಪುನರುಚ್ಚರಿಸಲಾಗಿದೆ ಎಂದು ಓರ್ವ ಮಹಿಳಾಪರ ಹೋರಾಟಗಾರ್ತಿ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.

ಇನ್ನೂ ಮುಂದುವರೆದು ಈ ವಿಚಾರವನ್ನು ಅವಲೋಕಿಸಿರುವ ನ್ಯಾಯ ಪೀಠವು, ಅವಿವಾಹಿತೆಯರು ಗರ್ಭಪಾತವನ್ನು ಮಾಡಿಸಬೇಕಿದ್ದರೆ, ಅತ್ಯಾಚಾರ ಪ್ರಕರಣದಲ್ಲಿ ಎಫ್.ಐ.ಆರ್ ದಾಖಲಾಗಿರಬೇಕು ಅಥವಾ ಅತ್ಯಾಚಾರ ನಡೆದಿರುವುದು ನ್ಯಾಯಾಲಯದಲ್ಲಿ ಸಾಬೀತಾಗಿರಬೇಕು ಎಂದೇನೂ ಇಲ್ಲ ಎಂದು ಹೇಳಿದೆ. ನ್ಯಾಯಮೂರ್ತಿ ಎ. ಎಸ್. ಬೋಪಣ್ಣ ಹಾಗೂ ನ್ಯಾಯಮೂರ್ತಿ ಜೆ. ಬಿ. ಪಾರ್ದೀವಾಲಾ ಅವರೂ ಇದ್ದ ಪೀಠವು ಹೇಳಿದೆ.

ಗಂಡನಿಂದಲೇ ಅತ್ಯಾಚಾರಕ್ಕೊಳಗಾಗಿ ಮಹಿಳೆಯು ಗರ್ಭಧರಿಸಬಹುದು ಎನ್ನುವುದನ್ನು ನಂಬಲಾಗದ ಸಂಗತಿಯೇನಲ್ಲ. ಮದುವೆಯಾಗಿದೆ ಎನ್ನುವ ಕಾರಣಕ್ಕೆ ಲೈಂಗಿಕ ಹಿಂಸೆ ಮತ್ತು ಸಮ್ಮತಿಯ ಸ್ವರೂಪದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಘನತೆಯ ಹಕ್ಕು ಎನ್ನುವುದರಲ್ಲಿ ಸಂತಾನೋತ್ಪತ್ತಿಗೆ ಸಂಬಂಧಿಸಿದ ವಿಷಯದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳುವ ಪ್ರತಿ ಮಹಿಳೆಯ ಸಾಮರ್ಥ್ಯ ಮತ್ತು ಅಧಿಕಾರವೂ ಸೇರುತ್ತದೆ. ಅಂತೆಯೇ ಗರ್ಭಪಾತವನ್ನು ಮಾಡಿಸಿಕೊಳ್ಳುವ ಆಕೆಯ ನಿರ್ಧಾರವೂ ಅದರಲ್ಲಿ ಸೇರುತ್ತದೆ.



Downloaded From:www.kpscvaani.com




# ಪರಿಸರ ಸ್ನೇಹಿ ಗಣೇಶ ಮೂರ್ತಿಗಳು

**ಬೀಜ ಪ್ರಸಾರ ಮಾಡುವ ಸಾವಿರಾರು ಪರಿಸರ ಸ್ನೇಹಿ ಗಣೇಶನ ಮೂರ್ತಿಗಳನ್ನು ಧಾರವಾಡದ ಕಲಾವಿದರೊಬ್ಬರು ತಯಾರಿಸುತ್ತಾರೆ.**

● ಕಿಶನರಾವ್ ಕುಲಕರ್ಣಿ

ಶ್ರಾವಣದ ಸಡಗರದಲ್ಲಿ ಹಿಂದೂಗಳಿಗೆ ಹಬ್ಬಗಳ ಸರಮಾಲೆ. ಗಣೇಶ ಹಬ್ಬ ಭಾರತೀಯರ ಜೀವನಾಡಿ. ಅವಿನಾಭಾವ ಭಾವೈಕ್ಯತೆ ಬೆಳೆಸಿ ಬದುಕಿಗೆ ಜೀವ ತುಂಬುತ್ತಾ ಬಂದಿದೆ. ಗೌರಿಯ ಮಾನಸ ಪುತ್ರನಾದ ಗಣೇಶನನ್ನು ಗೌರಿಯು ಸ್ನಾನಕ್ಕೆ ಹೋಗುವ ಮುಂಚೆ ತನ್ನ ಮೈಕೊಳೆಯಿಂದ ಸೃಷ್ಟಿ ಮಾಡಿ, ಅದಕ್ಕೆ ಜೀವ ನೀಡಿ, ತನಗೆ ಕಾವಲಿರುವಂತೆ ಹೇಳುತ್ತಾಳೆ ಎಂದು ಗಣೇಶನನ ಹುಟ್ಟಿನ ಬಗ್ಗೆ ಪುರಾಣ ಕಥೆಗಳು ಹೇಳುತ್ತವೆ.

ಹುಲ್ಲು-ಗರಿಕೆ, ಹೂವಿನಿಂದ ಸರಳ ಪೂಜೆ ಬಯಸುವ ಗಣೇಶನಿಗೆ ಏನೆಲ್ಲಾ, ಎಷ್ಟೆಲ್ಲಾ ಅಲಂಕಾರ. ಬರಗಾಲವೇ ಇರಲಿ, ಸುಖದ ಕಾಲವೆ ಇರಲಿ, ಭಕ್ತರು ಧಾಮ್... ಧೂಮ್... ಎಂದು ಚೌತಿ ಹಬ್ಬವನ್ನು ಆಚರಿಸುತ್ತಾರೆ. ಇನ್ನೂ ಗಣೇಶ ತನ್ನ ಹೊಟ್ಟೆಗೆ ಸುತ್ತಿಕೊಂಡಿರುವ ವಿಷ ಸರ್ಪದ ವಿಷವನ್ನು ಮೀರಿಸುವಷ್ಟು ರಾಸಾಯನಿಕ ಬಣ್ಣಗಳನ್ನು ಆತನ ಮೈಗೆ ಬಳಿಯುತ್ತಾರೆ. ಕೆರೆ, ಬಾವಿ, ಸರೋವರಗಳಲ್ಲಿ ವಿಸರ್ಜನೆಯಾಗುವಾಗ ಈ ರಾಸಾಯನಿಕಗಳು ನೀರನ್ನು ಕಲುಷಿತಗೊಳಿಸುತ್ತದೆ. ಅಲ್ಲದೆ ಭಾರೀ ತೂಕದ ವಿಗ್ರಹಗಳನ್ನು ವಿಸರ್ಜಿಸುವ ವೇಳೆಯಲ್ಲಿ ಆಯತಪ್ಪಿ ಎಷ್ಟೋ ಭಕ್ತರು ಪ್ರಾಣಕ್ಕೆ ಕುತ್ತು ತಂದುಕೊಂಡಿದ್ದಾರೆ. ಈ ಎಲ್ಲ ಕಾರಣಗಳಿಂದಾಗಿ ಹುಬ್ಬಳ್ಳಿ-ಧಾರವಾಡ ಕಲಾವಿದರು ಭಕ್ತರಿಗೆ ಸೂಕ್ತವೆನಿಸುವ ರೀತಿಯಲ್ಲಿ ಪರಿಸರ ಸ್ನೇಹಿ ಗಣೇಶನ ಮೂರ್ತಿಗಳ ತಯಾರಿಕೆಗೆ ಮುಂದಾಗಿದ್ದಾರೆ.

**ಮೂರ್ತಿ ತಯಾರಿಕೆ ಹಿಂದೆ ಪರಿಸರ ಕಾಳಜಿ:**

ಕಡಿಮೆ ಮಣ್ಣಿನಲ್ಲಿ ಬೃಹತ್ ಗಣೇಶ ಮೂರ್ತಿಗಳನ್ನು ಹೇಗೆ ತಯಾರು ಮಾಡಬಹುದು ಎಂದು ನಾಡಿಗೆ ತೋರಿಸಿಕೊಟ್ಟಿರುವ ಧಾರವಾಡದ ಕಲಾವಿದ ಮಂಜುನಾಥ ಹಿರೇಮಠ ಅವರು ಎರಡು ವರ್ಷಗಳಿಂದ ಬೀಜ ಪ್ರಸಾರ ಮಾಡುವ ಗಣೇಶ ಮೂರ್ತಿಗಳನ್ನು ತಯಾರು ಮಾಡುತ್ತಿರುವುದು ಸಾರ್ವಜನಿಕರ ಆಕರ್ಷಣೆಗೆ ಮತ್ತೊಂದು ಕಾರಣವಾಗಿದೆ.

ಸಣ್ಣ ಪ್ರಮಾಣದ ಮೂರ್ತಿಗಳಿಂದ ಹಿಡಿದು ಗಜಗಾತ್ರದ ಗಣೇಶ ಮೂರ್ತಿಗಳು ತಮ್ಮ ಹೊಟ್ಟೆಯಲ್ಲಿ, ಸೊಂಡಿಲಿನಲ್ಲಿ, ಕೈಯಲ್ಲಿರುವ ಕಡುಬಿನಲ್ಲಿ, ಕಿರೀಟದಲ್ಲಿ ಹೀಗೆ ವಿವಿಧ ಬೀಜಗಳನ್ನು ತುಂಬಿಕೊಂಡಿರುತ್ತವೆ. ಗಣೇಶ ಮೂರ್ತಿ ವಿಸರ್ಜನೆಯಾದ ನಂತರ ಆ ಮಣ್ಣನ್ನು ಕೈತೋಟದಲ್ಲಿಯೋ, ಮನೆಯ ಮುಂಭಾಗದ ಆವರಣದಲ್ಲೋ ಹಾಕಿದರೆ ಅಲ್ಲಿ ವೈವಿಧ್ಯಮಯ ತರಕಾರಿ ಸಸಿಗಳು ಹುಟ್ಟಿಕೊಂಡು ವರ್ಷಪೂರ್ತಿ ಫಲ ನೀಡಲಿ ಎಂಬುದು ಮಂಜುನಾಥ ಅವರ ಉದ್ದೇಶ.

ಇನ್ನು ದೊಡ್ಡ ಗಾತ್ರದ ಗಣೇಶ ಮೂರ್ತಿಗಳಿಗೆ ಬೇರೆ ವಿಧಾನ ಅನುಸರಿಸಿದ್ದಾರೆ. ಮೂರ್ತಿಯ ಹೊಟ್ಟೆಯಲ್ಲಿ ಬೀಜ ತುಂಬಿಕೊಂಡಿರುವ ಮಣ್ಣಿನ ಉಂಡೆಗಳನ್ನು



Downloaded From:www.kpscvaani.com

ತುಂಬಿದ್ದಾರೆ. ಬಾವಿಯಲ್ಲೋ.. ಕೆರೆಯಲ್ಲೋ... ವಿಸರ್ಜನೆ ಮಾಡಿದರೂ ಕ್ರಮೇಣ ಗಣೇಶಮೂರ್ತಿ ಕರಗುತ್ತಿದ್ದಂತೆ ಉಂಡೆಗಳು ತೇಲಿ, ಹರಿದು ಮುಂದೆ ದಡೆಗೆ ಬಂದು ಅಲ್ಲಿ ಉಂಡೆಗಳು ಒಡೆದು ವಿವಿಧ ಮರಗಳ ಸೃಷ್ಟಿಗೆ ಕಾರಣವಾಗುತ್ತವೆ. ಇಂತಹ ಬೃಹತ್ ಮೂರ್ತಿಯಲ್ಲಿ ಅರಣ್ಯ ಬೆಳೆಸುವ ಬೀಜಗಳನ್ನು ಮಂಜುನಾಥ ಅವರು ಜೋಪಾನವಾಗಿ ರಕ್ಷಿಸಿಟ್ಟಿದಾರೆ. "ಏನೇ ಆಗಲಿ ಮೂರ್ತಿಯಲ್ಲಿ ಬೀಜಗಳನ್ನು ಹುದುಗಿಸಿದ್ದು ಮಣ್ಣಿಗೆ ಬಿದ್ದ ಈ ಬೀಜ ಎಂದಾದರೊಂದು ದಿನ ಅದು ಹೊರ ಬರುತ್ತದೆ. ಕೈತೋಟದಲ್ಲೋ.. ಬೇಲಿಯಲ್ಲೋ, ಹೊಲದಲ್ಲೋ ಈ ಎಲ್ಲ ಬೀಜಗಳು ಮೊಳೆತು, ಮರವಾಗಿ ಹೂ-ಹಣ್ಣುಗಳನ್ನು ಬಿಡುತ್ತವೆ ಎಂಬ ವಿಶ್ವಾಸ ನನಗಿದೆ" ಎಂದು ಅವರು ಹೇಳುತ್ತಾರೆ.

ಎರಡು ವರ್ಷಗಳ ಹಿಂದೆ ಪ್ರಾಯೋಗಿಕವಾಗಿ ಇಂತಹ ಹತ್ತಾರು ಬೀಜದುಂಡೆಯ ಮೂರ್ತಿಗಳನ್ನು ತಯಾರಿಸಿದ್ದರು. ತಾವೂ ಅಂತಹ ಮೂರ್ತಿಯನ್ನು ಪೂಜಿಸುವುದರ ಜೊತೆಗೆ ಆಸಕ್ತರಿಗೆ ಮಾಹಿತಿ ನೀಡಿ ಅಂತಹ ಮೂರ್ತಿಗಳನ್ನು ಉಡುಗೊರೆಯಾಗಿಯೂ ನೀಡಿದ್ದರು. ಬಳಿಕ ಮೂರ್ತಿ ವಿಸರ್ಜನೆಯಾದ ನಂತರ ಆ ಮಣ್ಣನ್ನು ಆವರಣದ ಕೈತೋಟದಲ್ಲಿ ಹಾಕಿದ್ದರಿಂದ ವಿವಿಧ ತರಕಾರಿ ಸಸ್ಯಗಳು ಬೆಳೆಯಲು ಕಾರಣವಾಗಿತ್ತು. ಮಂಜುನಾಥ ಅವರು ಸೇರಿದಂತೆ ಇಂತಹ ಗಣೇಶ ಮೂರ್ತಿಗಳನ್ನು ಪೂಜಿಸಿದ ಭಕ್ತರು



ಪರಿಸರ ಸ್ನೇಹಿ ಗಣೇಶನಿಗೆ ಒಲಿದಿರುವ ಸಾರ್ವಜನಿಕರು

"ನಾನೊಬ್ಬ ಮೂಲತಃ ಕಲಾವಿದ, ಆದಾಗ್ಯೂ ಈ ಮೊದಲು ಮಹಾರಾಷ್ಟ್ರದ ಪುಣೆಯಿಂದ ಮೂರ್ತಿಗಳನ್ನು ತರಿಸಿ ಮಾರಾಟ ಮಾಡುತ್ತಿದ್ದೆ, ಈಗ ನಾನೇ ಮೂರ್ತಿಗಳನ್ನು ತಯಾರು ಮಾಡುತ್ತಿದ್ದೇನೆ. ಕೇವಲ ನನಗಷ್ಟೆ ಅಲ್ಲ, ಸಣ್ಣ ಕಲಾವಿದರಿಗೆ ಕೆಲಸ ಕೊಟ್ಟಿದ್ದೇನೆ, ಸದ್ಯ ನನ್ನ ಮೂರ್ತಿ ಕಾರ್ಯಾಗಾರದಲ್ಲಿ ಮಹಿಳೆಯರೂ ಸೇರಿದಂತೆ 20ಕ್ಕೂ ಹೆಚ್ಚು ಜನ ಕೆಲಸ ಮಾಡುತ್ತಿದ್ದಾರೆ. ಹುಬ್ಬಳ್ಳಿ ಧಾರವಾಡದಲ್ಲಿ ಮೂರ್ತಿ ತಯಾರಿಸುವ ಇಂತಹ ನೂರಾರು ಶೆಡ್‌ಗಳು ಇವೆ. ಸಾರ್ವಜನಿಕರು ಪರಿಸರ ಸ್ನೇಹಿ ಗಣೇಶನಿಗೆ ಒಲಿದಿರುವ ಕಾರಣವಾಗಿ ಹಾಗೂ ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ ನೀಡಿದ ಕಾರಣವಾಗಿ ಪರಿಸರ ಸ್ನೇಹಿ ಗಣೇಶ ಹೆಚ್ಚು ಜನಪ್ರಿಯವಾಗಲು ಕಾರಣವಾಗಿದೆ. ನೋಡ್ತಾ ಇರಿ ಮುಂದೊಂದು ದಿನ ಧಾರವಾಡ-ಹುಬ್ಬಳ್ಳಿಯಲ್ಲಿ ರಾಸಾಯನಿಕ ಬಣ್ಣದ ಗಣೇಶನಿಗೆ ವಿದಾಯ ಹೇಳುವ ದಿನಗಳು ದೂರವಿಲ್ಲ".

-ವೀರೇಶ ಚಕ್ರಸಾಲಿ, ಹುಬ್ಬಳ್ಳಿಯ ಕಲಾವಿದ.



ಇಂದಿನವರೆಗೂ ಆ ಸಸ್ಯಗಳಿಂದ ಬೀನ್ಸ್, ಸೌತೆ, ಹಾಗಲಕಾಯಿ, ಟೊಮ್ಯಾಟೊ, ಹೀರೆಕಾಯಿ ತರಕಾರಿಗಳನ್ನು ಪಡೆದುಕೊಳ್ಳುತಿದ್ದಾರೆ.

**ಬೀಜ ನುಂಗುವ ಗಣೇಶ:**

ಹಸಿ ಮೂರ್ತಿಗಳನ್ನು ತಯಾರಿಸುವ ಸಂದರ್ಭದಲ್ಲಿ ಮೂರ್ತಿಯ ಬೆನ್ನಿನ ಭಾಗದಲ್ಲಿ ಒಂದು ರಂಧ್ರವನ್ನು ಬಿಟ್ಟಿರುತ್ತಾರೆ. ಹಸಿ ಮೂರ್ತಿ ತಯಾರಾದ ನಂತರ ಅದರಲ್ಲಿ ಬೀಜದುಂಡೆಗಳನ್ನು ಸೇರಿಸುವುದಕ್ಕಾಗಿ ತರಕಾರಿ ಬೆಳೆಯ, ಅರಣ್ಯ ಬೆಳೆಸುವ, ಹಾಗೂ ಹೂವಿನ ಬಳ್ಳಿಗಳಿಗೆ ಸಂಬಂಧಿಸಿದ ಬೀಜಗಳನ್ನು ಉಂಡೆಗಳಲ್ಲಿ ಸಂಗ್ರಹಿಸುತ್ತಾರೆ. ಒಂದೊಂದು ಗಣೇಶ ಮೂರ್ತಿಯಲ್ಲಿ ಇಂತಹ ನಾಲ್ಕಾರು ಉಂಡೆಗಳನ್ನು ಸೇರಿಸಿ ಗಣೇಶನ ಹೊಟ್ಟೆಯನ್ನು ಬೀಜದ ಉಂಡೆಗಳಿಂದ ತುಂಬಿಸುತ್ತಾರೆ. ಬಳಿಕ ರಂಧ್ರವನ್ನು ಬಂದ್ ಮಾಡಿ ನೈಸರ್ಗಿಕ ಬಣ್ಣಗಳನ್ನು ಲೇಪನ ಮಾಡುತ್ತಾರೆ. ಮಂಜುನಾಥ ಅವರು ಕಡಿಮೆ ಮಣ್ಣಿನಲ್ಲಿ ತಿಳುವಾದ ಗಣೇಶ ಮೂರ್ತಿಗಳನ್ನು ಮಾಡುವುದರಿಂದ ನೀರಿಗೆ ಸೇರಿದ ನಂತರ, ಮೂರ್ತಿ ಬೇಗ ಕರಗಿ ಬೀಜದ ಉಂಡೆಗಳು ಹೊರಬರುತ್ತವೆ. ಇನ್ನು ಕೆರೆ, ನದಿಯಲ್ಲಿ ಮೂರ್ತಿಗಳು ವಿಸರ್ಜನೆಯಾದಾಗ ಈ ಉಂಡೆಗಳು ತೇಲಿ ನದಿಗುಂಟ ಇಲ್ಲವೆ ಕೆರೆಯ ಅಕ್ಕ-ಪಕ್ಕದಲ್ಲಿ ಪಸರಿಸಿ ಅರಣ್ಯ ಸೃಷ್ಟಿಗೆ ಕಾರಣವಾಗುತ್ತದೆ. "ಒಂದು ಮೂರ್ತಿಯಲ್ಲಿ ನಾಲ್ಕಾರು ಮರಗಳು, ನಾಲ್ಕಾರು ತರಕಾರಿ ಸಸಿಗಳು, ಒಂದೆರಡು ಹೂಬಳ್ಳಿಗಳು ಬಿಟ್ಟರೆ ಅದೇ ನಮಗೆ ಸ್ಫೂರ್ತಿ" ಎಂದು ಮಂಜುನಾಥ ಅವರ ಧರ್ಮಪತ್ನಿ ನಿರ್ಮಲಾ ಹಿರೇಮಠ ಹೇಳುತ್ತಾರೆ.

**ನೂರಾರು ಬೀಜ ಮೂರ್ತಿಗಳು ಸಿದ್ಧ:**

ಹತ್ತಾರು ವರ್ಷದಿಂದ ಇವರು ಆಕರ್ಷಕವಾಗಿ ತಯಾರಿಸುತ್ತಿರುವ ಮೂರ್ತಿಗಳಿಗೆ ಮೋಹಗೊಂಡಿರುವ ಸಾಕಷ್ಟು ಜನರು ಈ ಬಾರಿ ಬೀಜದುಂಡೆಯ ಗಣೇಶನಿಗಾಗಿ ಈಗ ಬೇಡಿಕೆ ಇಟ್ಟಿದ್ದಾರೆ. ಈ ಕಾರಣವಾಗಿ ಈ ಬಾರಿ ಒಂದು ಸಾವಿರ ಬೀಜದುಂಡೆ ನುಂಗಿದ ಗಣೇಶನ ಮೂರ್ತಿಗಳು ಸಿದ್ಧವಾಗಿವೆ ನೋಡಿ ಎಂದು ಮಂಜುನಾಥ ಅವರು ಸಾಲಾಗಿ ನಿಂತಿರುವ ಮೂರ್ತಿಗಳನ್ನು ತೋರಿಸುತ್ತಾರೆ.

ಇನ್ನು ಕೆಲ ಸಸಿಗಳ ಮೇಲ್ಭಾಗದಲ್ಲಿ ಬೀಜಗಳನ್ನು ಊರಿರುವ ಕಾರಣ ಮೂರ್ತಿಯ ಮೇಲ್ಭಾಗದಲ್ಲಿ ಈಗಾಗಲೇ ಸಸಿಯೊಡೆದಿರುವ ಗಣೇಶ ಮೂರ್ತಿಗಳು ತುಂಬಾ ಆಕರ್ಷಕವಾಗಿ ಕಾಣುತ್ತಿರುವುದು


Downloaded From:www.kpscvaani.com



ಕಂಡು ಬರುತ್ತದೆ. ಕೆಲ ಮೂರ್ತಿಗಳ ಕೈಯಲ್ಲಿ ಒಂದಷ್ಟು ತರಕಾರಿ ಬೀಜಗಳ ಬುತ್ತಿಯನ್ನೂ ಕಟ್ಟಿಕೊಡುತ್ತಿದ್ದಾರೆ. ಮಣ್ಣಿನ ಗಣೇಶನ ವಿಗ್ರಹಕ್ಕೆ ವಿವಿಧ ತರಕಾರಿಗಳ ಬೀಜಗಳನ್ನೇ ಅಲಂಕರಿಸುತ್ತಾರೆ. ಅಷ್ಟೇ ಅಲ್ಲ, ಮೂರ್ತಿಯ ಕುತ್ತಿಗೆ, ಕಿವಿ, ಕಿರೀಟ, ಕೈ, ಕಾಲುಗಳಿಗೂ ಬೀಜಗಳನ್ನೇ ಆಭರಣಗಳನ್ನಾಗಿ ಹಾಕುತ್ತಾರೆ. ಇಂತಹ ಮೂರ್ತಿಗಳನ್ನು ತಯಾರಿಸುವುದಕ್ಕಾಗಿ ಇವರ ಕುಟುಂಬ ವಿವಿಧ ಮಾರುಕಟ್ಟೆಗಳಿಗೆ ಎಡತಾಕಿ ಗುಣಮಟ್ಟದ ವಿವಿಧ ಬೀಜಗಳನ್ನು ಸಂಗ್ರಹಿಸಿಕೊಂಡಿದ್ದರು. ಮೊದಲೆ ಸಾಕಷ್ಟು ಬೀಜದುಂಡೆಗಳನ್ನು ಮಾಡಿಕೊಂಡಿದ್ದ ಕಾರಣವಾಗಿ ಆ ಎಲ್ಲ ಉಂಡೆಗಳ ಮೇಲ್ಭಾಗ ಒಣಗಿರುವುದರಿಂದ ಒಳಗಿರುವ ಬೀಜಗಳು ಕಳೆಯದಂತೆ ವ್ಯವಸ್ಥಿತವಾಗಿ ಕುಳಿತಿವೆ ಎಂದು ಮಂಜುನಾಥ ಹೇಳುತ್ತಾರೆ.

ದಶಕದ ಹಿಂದೆ ಹುಬ್ಬಳ್ಳಿಯ ದುರ್ಗದಬೈಲ್, ಚನ್ನಮ್ಮ ವೃತ್ತ, ಜವಳಿಸಾಲು, ಮರಾಠ ಗಲ್ಲಿ, ಬಮ್ಮಾಪೂರ ಓಣಿ, ಅಕ್ಕಿಹೊಂಡ, ರಾಘವೇಂದ್ರಮಠ, ಡಾಕಪ್ಪ ಸರ್ಕಲ್, ದಿವಟೆಗಲ್ಲಿ, ಅಕ್ಷಯಪಾರ್ಕ್‌ಗಳಂತಹ ಪ್ರದೇಶಗಳಲ್ಲಿನ ಭಕ್ತರಂತೂ ಇಂತಹ ಗಣೇಶ ಮೂರ್ತಿಗಳ ಖರೀದಿಗೆ ಆಸಕ್ತಿ ತೋರುತ್ತಿದ್ದಾರೆ.

ಧಾರವಾಡ ಜಿಲ್ಲೆಯ ಕಲಾವಿದರು ಒಂದು ಹೆಜ್ಜೆ ಮುಂದೆ ಹೋಗಿ 'ಇಕೋ ಫ್ರೆಂಡ್ಸ್ ಗ್ರೂಪ್' ಎಂಬ ಸಂಘವನ್ನು ಮಾಡಿಕೊಂಡು ಇಡೀ ಧಾರವಾಡ ಜಿಲ್ಲೆಯ ಭಾಗದಲ್ಲಿ ಪರಿಸರ ಸ್ನೇಹಿ ಗಣೇಶನನ್ನೇ ತಯಾರಿಸಬೇಕು ಎಂದು ನಿರ್ಧರಿಸಿದ ಕಾರಣ ಅವಳಿ ನಗರದಲ್ಲೀಗ 40ಸಾವಿರಕ್ಕೂ ಹೆಚ್ಚು ಪರಿಸರ ಸ್ನೇಹಿ ಗಣೇಶ ಮೂರ್ತಿಗಳು ತಯಾರಾಗಿವೆ.

**ಕಲಾವಿದರು ಉದ್ಯೋಗ ಕಂಡು ಕೊಂಡರು:**

ಬಹುತೇಕ ಕಲಾವಿದರು ತಮ್ಮಲ್ಲಿ ಮೂರ್ತಿ ತಯಾರಿಸುವ ಕಲೆ ಇದ್ದರೂ, ಅನಿವಾರ್ಯವಾಗಿ ಬೇರೆಡೆಯಿಂದ ರಾಸಾಯನಿಕ ಬಣ್ಣದ ಹಾಗೂ ಪ್ಲಾಸ್ಟರ್ ಆಫ್ ಪ್ಯಾರಿಸ್ ಮೂರ್ತಿಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದರು. ಆದರೆ ಅದರಿಂದ ಕಮಿಷನ್ ರೂಪದಲ್ಲಿ ಕೊಂಚ ಹಣ ಮಾತ್ರ ಇವರಿಗೆ ದಕ್ಕುತ್ತಿತ್ತು. ಯಾವಾಗ ತಾವೇ ಪರಿಸರ ಸ್ನೇಹಿ ಮೂರ್ತಿಗಳನ್ನು ತಯಾರಿಸಲು ಆರಂಭಿಸಿದರೋ, ಆಮದಾಗುತ್ತಿರುವ ಮೂರ್ತಿಗಳ ಪ್ರಮಾಣ ಕಡಿಮೆಯಾಯಿತು. ಅಂತಹ ಮೂರ್ತಿಗಳನ್ನು ಕೊಳ್ಳುವ ಜನ ಕೂಡ ಕಡಿಮೆಯಾದರು. ಇದರಿಂದಾಗಿ ಸ್ಥಳೀಯ ಕಲಾವಿದರಿಗೆ ಸುಮಾರು ಆರು ತಿಂಗಳವರೆಗೆ ಪೂರ್ಣ ಪ್ರಮಾಣದಲ್ಲಿ ಕೈತುಂಬ ಕೆಲಸವೂ ದೊರೆಯಿತು.

ಸೀಮೆ ಸುಣ್ಣದ ಪುಡಿ ಮತ್ತು ವೃತ್ತಪತ್ರಿಕೆಯ ಸಂಯೋಜನೆಯು ಕಡಿಮೆ ತೂಕವಿದ್ದು, ಅದರಿಂದ ತಯಾರಿಸುವ ಮೂರ್ತಿ ಬಿರುಕು ಬಿಡುವುದಿಲ್ಲ. ಈ ಮಾದರಿಯಲ್ಲಿ ಹುಬ್ಬಳ್ಳಿಯ ಗೋಪನಕೊಪ್ಪದಲ್ಲಿನ ಕಲಾವಿದ ಅರುಣ ಯಾದವ್ ಎಂಬುವವರು ವಿಗ್ರಹ ತಯಾರಿಸಿದ್ದಾರೆ.

ಪರಿಸರ ಮಾಲಿನ್ಯ ತಪ್ಪಿಸುವ ಸಲುವಾಗಿ, ಸಾರ್ವಜನಿಕರಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ತಯಾರಾಗುತ್ತಿರುವ ಇಕೋ ಫ್ರೆಂಡ್ಲಿ ಸೀಡ್ಸ್ ಗಣೇಶಕ್ಕೆ ಭಾರಿ ಬೇಡಿಕೆ ಸೃಷ್ಟಿಯಾಗಿದೆ. ಪ್ಲಾಸ್ಟರ್ ಆಫ್ ಪ್ಯಾರಿಸ್ ಗಣೇಶ ಮೂರ್ತಿಗಳ ವಿಸರ್ಜನೆಯಿಂದ ಕೆರೆ, ನದಿ, ಸರೋವರಗಳ ಪರಿಸರದ ಮೇಲೆ ತೀವ್ರವಾದ ಹಾನಿ ಸಂಭವಿಸುತ್ತದೆ. ಇದನ್ನು ತಪ್ಪಿಸಲೆಂದೇ ಬಹುತೇಕ ಕಲಾವಿದರು ಒಟ್ಟಾಗಿ ಪರಿಸರ ಸ್ನೇಹಿ ಗಣೇಶ ಮೂರ್ತಿಗಳ ತಯಾರಿಕೆಯಲ್ಲಿ ತೊಡಗಿದ್ದಾರೆ.

ಮಾರಿಗೋಲ್ಡ್ ಗಣೇಶ, ತುಳಸಿ ಗಣೇಶ, ಟೊಮ್ಯಾಟೊ ಗಣೇಶ ಮತ್ತು ಸನ್ ಫ್ಲವರ್ ಗಣೇಶ ಎಂಬ ಹೆಸರಿನ ಮೇಲೆ ತಯಾರು ಮಾಡುತ್ತಿದ್ದಾರೆ. ಗಣೇಶನನ್ನು ಜೂಟ್ ಪಾಟ್, ಕೋಕೋ ಪೀಟ್, ಸೀಡ್ಸ್‌ಬಾಲ್ ಹಾಕಿ ಕೊಡುತ್ತಾರೆ. ಪಾಟ್‌ನಲ್ಲಿ ವಿಸರ್ಜನೆ ಮಾಡಲು ಇಷ್ಟ ಪಡದವರು ತಮ್ಮ ಮನೆಯ ಸುತ್ತಮುತ್ತಲಿನ ಜಾಗದಲ್ಲೇ ಗಣೇಶ ವಿಸರ್ಜನೆ ಮಾಡಿ ಗಿಡ ಬೆಳೆಸಬಹುದಾಗಿದೆ.

ಇಕೋ ಫ್ರೆಂಡ್ಲಿ ಥೀಮ್‌ನಲ್ಲಿ ಸಿದ್ಧವಾಗಿರುವ ಇಂತಹ ಸಾವಿರಾರು ಸೀಡ್ಸ್ ಗಣೇಶನ ಮೂರ್ತಿಗಳು 6 ರಿಂದ 12 ಇಂಚಿನವರೆಗೂ ಇದ್ದು, ನೋಡಲು ಚಿಕ್ಕದಾಗಿ ಮತ್ತು ಸುಂದರವಾಗಿದೆ. ಸ್ನೇಹಿತರು, ಬಂಧುಗಳಿಗೆ ಉಡುಗೊರೆಯಾಗಿ ನೀಡಲು ಸೂಕ್ತವಾಗಿದೆ.

ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ನಿರ್ಮಿತವಾದ ಗಣಪತಿಗಳು ನೆಲ, ಜಲ, ಗಾಳಿ, ಜಲಚರಗಳಿಗೆ ಹಾನಿ ಮಾಡುತ್ತವೆ. ಹಳ್ಳ, ಕೆರೆ–ಕಟ್ಟೆ, ಜಲಮೂಲಗಳನ್ನು ಸರ್ವನಾಶ ಮಾಡುತ್ತಿವೆ. ಇದರಿಂದ ಎಚ್ಚೆತ್ತಿರುವ ಧಾರವಾಡಿಗರು ಈ ವಿಷಯವಾಗಿ ದನಿ ಎತ್ತಿದ್ದಾರೆ. ಸಂಪೂರ್ಣ ಮಣ್ಣಿನಿಂದ ಮಾಡಿದ ಮತ್ತು ಉದರದಲ್ಲಿ ಸಸ್ಯ ಸಂಕುಲವನ್ನಿಟ್ಟುಕೊಂಡು, ಅದನ್ನು ಪಸರಿಸುವ ಬೀಜದುಂಡೆ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸುವ ಜಾಗೃತಿ ಅಭಿಯಾನ ಈಗ ಧಾರವಾಡದಲ್ಲಿ ಭಾರಿ ಪ್ರಮಾಣದಲ್ಲಿ ಆರಂಭವಾಗಿದೆ.

ಮಹಾನಗರ ಪಾಲಿಕೆ ಮತ್ತು ಜಿಲ್ಲಾಡಳಿತವು ಪರಿಸರಕ್ಕೆ ಹಾನಿಕಾರಕವಾಗಿರುವ ಪಿಓಪಿ ಗಣೇಶನಿಗೆ ಹಿಂದಿನ ವರ್ಷದಿಂದಲೇ ಅವಕಾಶ ನೀಡಿದ್ದಿಲ್ಲ. ಒಂದು ಅಂದಾಜಿನಂತೆ ಹುಬ್ಬಳ್ಳಿ–ಧಾರವಾಡ ಅವಳಿ ನಗರದಲ್ಲಿ 950 ಸಾರ್ವಜನಿಕ ಗಣೇಶಮೂರ್ತಿಗಳು ಪ್ರತಿಷ್ಠಾಪನೆಗೊಂಡರೆ, ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ 800ಕ್ಕೂ ಹೆಚ್ಚು ಹಾಗೂ ಜಿಲ್ಲೆಯ ಮನೆಗಳಲ್ಲಿ ಎರಡುವರೆ ಲಕ್ಷದಷ್ಟು ಗಣೇಶಮೂರ್ತಿ ಪ್ರತಿಷ್ಠಾಪನೆಗೊಳ್ಳುತ್ತವೆ. ಕಳೆದ ಒಂದು ದಶಕದಲ್ಲಿ ಪ್ಲಾಸ್ಟರ್ ಆಫ್ ಪ್ಯಾರೀಸ್ ಪರಿಸರದ ಮೇಲೆ ಮಾಡಿರುವ ಹಾನಿಯನ್ನು ಸರಿಪಡಿಸುವುದಕ್ಕೆ ದಶಕಗಳೇ ಬೇಕಾಗಬಹುದು.

**ವನಸ್ಪತಿಗಳಿಂದ ಬಣ್ಣ ತಯಾರಿಕೆ:**

ಕಲಾವಿದ ಮಂಜುನಾಥ ಅವರು ಪರಿಸರ ಸ್ನೇಹಿ ಗಣೇಶ



Downloaded From:www.kpscvaani.com

ಮೂರ್ತಿ ತಯಾರಿಸಲು ವಿವಿಧ ಬಣ್ಣಗಳಿಗಾಗಿ ವನಸ್ಪತಿಗಳನ್ನು ಹುಡುಕಿ ತರುತ್ತಾರೆ. ಕೆಲವೊಂದು ಗಿಡಮೂಲಿಕೆಗಳು ಸ್ಥಳೀಯವಾಗಿ ದೊರೆತರು, ಇನ್ನು ಕೆಲವೊಂದು ಸಸ್ಯಗಳನ್ನು ದೂರದಿಂದ ತರಿಸುತ್ತಾರೆ. ನಂತರ ಪುಡಿ ಮಾಡಿ ಕುದಿಸಿ ಶೋಧಿಸುತ್ತಾರೆ. ಇನ್ನು ಹಲವಾರು ಮೂಲಿಕೆಗಳನ್ನು ಒಣಗಿಸಿ ಕೇವಲ ಪುಡಿ ಮಾಡಿ ಇಟ್ಟುಕೊಳ್ಳುತ್ತಾರೆ. ಕೆಲ ಸಸ್ಯಗಳನ್ನು ಸಾಣೆ ಕಲ್ಲಿಗೆ ಹಾಕಿ ಅರೆದು ಗಂಧದ ರೂಪದಲ್ಲಿ ತಯಾರಿಸಿಕೊಳ್ಳುತ್ತಾರೆ. ಜೊತೆಗೆ ಕೆಲವೊಂದು ಎಲೆಗಳನ್ನು ಹಸಿರಿರುವಾಗಲೇ ಕುದಿಸಿದರೆ ಇನ್ನು ಕೆಲ ಎಲೆಗಳನ್ನು ಒಣಗಿದ ನಂತರ ಕುದಿಸಿ-ಶೋಧಿಸಿ ಅದರಿಂದ ಬಣ್ಣ ಪಡೆದುಕೊಳ್ಳುತ್ತಾರೆ.

ಈ ಎಲ್ಲ ಬಣ್ಣಗಳನ್ನು ಸಂಗ್ರಹಿಸಿಟ್ಟುಕೊಂಡ ನಂತರ ಒಂದಕ್ಕೊಂದು ಮಿಶ್ರಣ ಮಾಡುತ್ತಾ ಕೃತಕವಾಗಿ ಮತ್ತೊಂದಿಷ್ಟು ಬಣ್ಣಗಳನ್ನು ತಯಾರಿಸಿಕೊಳ್ಳುತ್ತಾರೆ. ಹಸಿರು ಬಣ್ಣಕ್ಕಾಗಿ ನೆಲಬೇವಿನ ಎಲೆ, ಕೆಂಪು ಬಣ್ಣಕ್ಕಾಗಿ ರಕ್ತದಂತ ಚಂದನ, ಹಳದಿ ಬಣ್ಣಕ್ಕಾಗಿ ಶ್ರೀಗಂಧ, ಕಪ್ಪು ಬಣ್ಣಕ್ಕಾಗಿ ಇದ್ದಿಲು, ಚಾಕಲೇಟ್ ಕಲರ್‌ಗಾಗಿ ಮುಲ್ತಾನಗಟ್ಟಿ, ಹಲವಾರು ಬಣ್ಣಗಳ ಸಮತೋಲನಕ್ಕಾಗಿ ಹಳದಿ, ಕೇಸರಿ, ವಿಭೂತಿ ಹಾಗೂ ಅಂಟಿನ ಮಿಶ್ರಣ ಮಾಡುತ್ತಾರೆ. ಎಲೆ ಕುದಿಸಿದ ನಂತರ ತೇಲುವ ಕ್ಲೋರೋಫಿಲ್‌ನಿಂದ ಕಡುಹಸಿರು ವರ್ಣಕ್ಕಾಗಿ, ಸುಣ್ಣ, ಕತ್ತಾ, ಅಷ್ಟಗಂಧ, ಅರಿಷಣ, ಕುಂಕುಮ, ಕಸ್ತೂರಿ ಅರಿಷಿಣ, ಲೋಳೇಸರ, ಗರಿಕೆ, ದಾಸವಾಳ ಹೂ... ಹೀಗೆ ಅನೇಕ ತರಹದ ವನಸ್ಪತಿ ಹಾಗೂ ಹತ್ತಾರು ಸಸ್ಯಗಳಿಂದ ವಿವಿಧ ಬಣ್ಣ ತಯಾರಿಸಿಕೊಳ್ಳುತ್ತಾರೆ.

**ಕಡಿಮೆ ಮಣ್ಣಿನಲ್ಲಿ ದೊಡ್ಡ ಮೂರ್ತಿಗಳು:**

ಗಣೇಶ ಮೂರ್ತಿ ತಯಾರಿಸುವವರಲ್ಲಿ ಹಾಗೂ ಸಾರ್ವಜನಿಕರು ಪ್ರತಿಷ್ಠಾಪನೆ ಮಾಡುವವರಲ್ಲಿ ಪೈಪೋಟಿ ನಡೆಯುತ್ತದೆ. ಹಾಗಾಗಿ ಧಾರವಾಡ-ಹುಬ್ಬಳ್ಳಿಯಲ್ಲೀಗ ಗ್ರಾಹಕರು ಕೇಳಿದ ಎತ್ತರ, ಗಾತ್ರ, ಆಕಾರದಲ್ಲಿಯೇ ತಯಾರಿಸಿಕೊಡುತ್ತಾರೆ. ಭಕ್ತರಿಗೆ ಬೇಕಾಗಿರುವುದು ನೋಡಲು ದೊಡ್ಡ ಗಾತ್ರದ ಗಣೇಶಮೂರ್ತಿ. ಹೀಗಿರುವಾಗ ಅದಕ್ಕೆ ಎಷ್ಟು ಮಣ್ಣು ಬಳಸಲಾಗಿದೆ, ಎಷ್ಟು ತೂಕ ಇದೆ ಎಂಬುದು ಅವರಿಗೆ ಬೇಕಾಗಿಲ್ಲ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಕಡಿಮೆ ಮಣ್ಣಿನಲ್ಲಿ ದೊಡ್ಡ ಗಾತ್ರದ ಮೂರ್ತಿಗಳನ್ನು ತಯಾರಿಸುತ್ತಿದ್ದಾರೆ.

ತೆಂಗಿನ ನಾರು, ಹತ್ತಿಯಿಂದ ಮಿಶ್ರಣಗೊಂಡಿರುವ ಹದವಾದ ಮಣ್ಣನ್ನು ತೆಗೆದುಕೊಂಡು ದೊಡ್ಡದಾದ ಮಣೆ ಅಥವಾ ಕಟ್ಟಿಗೆಯ ಹಲಗೆಯ ಮೇಲೆ ತಾವು ಎಷ್ಟು ಎತ್ತರದ ಗಣೇಶನನ್ನು ತಯಾರಿಸಬೇಕೆಂದಿರುತ್ತಾರೊ ಅಷ್ಟು ಅಳತೆಯಲ್ಲಿ ಮೊದಲು ಅಗಲವಾಗಿ ಪೀಠ ಸ್ಥಾಪಿಸುತ್ತಾರೆ. ಅದರ ಮೇಲೆ ಕೇವಲ 5 ಎಂ.ಎಂ ಅಳತೆಯ ದಪ್ಪವಾಗಿ ಬರುವಂತೆ ಮಣ್ಣಿನಿಂದ ಗೋಡೆ ತರಹ ಮೂರ್ತಿ ಕಟ್ಟಿಕೊಳ್ಳುತ್ತಾ ಸಾಗುತ್ತಾರೆ. ಹೊಟ್ಟೆಯ ಅರ್ಧ ಭಾಗಕ್ಕೆ ಮೂರ್ತಿ ತಯಾರಾದ ನಂತರ ಅದರೊಳಗೆ ನಿಂತು ರೊಟ್ಟಿ ತಟ್ಟುವ ಹಾಗೆ ಒಳ ಹೊರ ಭಾಗವನ್ನು ತಟ್ಟುತ್ತಾರೆ. ಒಳಗೆ ಇದ್ದುಕೊಂಡೆ ತಮ್ಮ ಎದೆ ಮಟ್ಟಕ್ಕೆ ಬರುವವರೆಗೆ ರಚಿಸಿ ನಂತರ ಒಳಗಡೆ ಸ್ಟೂಲ್ ಇಟ್ಟುಕೊಂಡು ಹೊರಗೆ ಇಳಿದು ಬರುತ್ತಾರೆ. ಗಣೇಶನ ಹೊಟ್ಟೆ ಒಳಗಡೆ ಮಣ್ಣು ತುಂಬಿರದೇ ಖಾಲಿ-ಖಾಲಿಯಾಗಿರುತ್ತದೆ. ನಂತರದಲ್ಲಿ ಸೊಂಡಿ. ಕೈ-ಕಾಲು, ತಲೆ, ಕಿರಿಟ ಹೀಗೆ ಕೊಳವೆ ತರಹ ಮಣ್ಣಿನ ಲೇಪನ ಮಾಡುತ್ತಾರೆ.

ಈ ಸಮಯದಲ್ಲಿ ಧಾರವಾಡ ಭಾಗದ ವಾತಾವರಣ ತೇವಾಂಶದಿಂದ ಕೂಡಿರುವುದರಿಂದ ಮೂರ್ತಿಗಳು ಬೇಗನೆ ಒಣಗುವುದಿಲ್ಲ. ಆ ಕಾರಣವಾಗಿ ಹಾಗೂ ತೆಳುವಾದ ಆ ಕವಚ ಗಟ್ಟಿತನ ಹೊಂದಲಿ ಎಂದು ಮೂರ್ತಿಯ ಹೊಟ್ಟೆಯ ಒಳ ಭಾಗದಲ್ಲಿ ತೆಂಗಿನ ಚಿಪ್ಪು, ಇದ್ದಿಲಿನಂತಹ ವಸ್ತುಗಳಿಂದ ಬೆಂಕಿ ಮಾಡಿ ಮೂರ್ತಿಯ ಒಳ ಭಾಗವನ್ನು ಕಾಯಿಸುತ್ತಾರೆ. ಸರಳವಾಗಿ ಹೇಳಬೇಕೆಂದರೆ ಕುಂಬಾರ ತನ್ನ ಹಸಿ ಮಡಿಕೆ ಕಾಯಿಸಿದಂತೆಯೇ. ಆದರೆ ಕುಂಬಾರನ ಮಡಿಕೆಯನ್ನು ಹೆಚ್ಚು ಕಾಯಿಸುವುದರಿಂದ ನೀರಿನಲ್ಲಿ ಅದು ಬೇಗನೇ ಕರಗುವುದಿಲ್ಲ. ಮಂಜುನಾಥ ತಯಾರಿಸುವ ಮೂರ್ತಿಗೆ ಕಡಿಮೆ ಪ್ರಮಾಣದಲ್ಲಿ ಶಾಖ ಕೊಡುವುದರಿಂದ ಬೇಗನೆ ಕರಗುತ್ತವೆ ಅಷ್ಟೆ. 'ಮೂರ್ತಿಯ ಒಳಗಡೆ ಮಣ್ಣು ತುಂಬಿದರೆ ಗಣೇಶಮೂರ್ತಿ ಭಾರವಾಗುವುದರ ಜೊತೆಗೆ ಕೆರೆ ಕಟ್ಟೆಗಳು ಹೂಳಿನಿಂದ ತುಂಬಿ ಹೋಗುತ್ತದೆ, ಅಲ್ಲದೆ ಮಣ್ಣು ವ್ಯರ್ಥವಾಗುತ್ತದೆ. ಆ ಉದ್ದೇಶದಿಂದಲೇ ನಾನು ಈ ರೀತಿಯ ಗಣೇಶ ಮೂರ್ತಿಗಳನ್ನು ತಯಾರಿಸುತ್ತಿದ್ದೇನೆ' ಎಂದು ಮಂಜುನಾಥ ಹೇಳುತ್ತಾರೆ. ಇವು ನೋಡಲು ಹೊಟ್ಟೆ ಗಣಪನಾಗಿದ್ದರೂ ಖಾಲಿ ಹೊಟ್ಟೆಯ ಟೊಳ್ಳು ಗಣೇಶ ಮೂರ್ತಿಗಳಾಗಿರುತ್ತವೆ.

**ವಿಸರ್ಜನೆಗೆ ಸುರಕ್ಷತಾ ವ್ಯವಸ್ಥೆ:**

ಕೆಲಗೇರಿಯ ಗಣೇಶೋತ್ಸವ ಮಹಾಮಂಡಳದ ಪದಾಧಿಕಾರಿಗಳ ಸಹಯೋಗದಲ್ಲಿ ಕಳೆದ ವರ್ಷದಿಂದ ಕೆರೆ ಪಕ್ಕದ ಕಲ್ಮೇಶ್ವರ ದೇವಸ್ಥಾನದ ಆವರಣದಲ್ಲಿ ಟಾರ್ಪಾಲಿನ್ ಹೊದಿಕೆ ಹಾಸಿ ಕೃತಕ ಕೆರೆಯೊಂದನ್ನು ಅಲ್ಲಿ ನಿರ್ಮಿಸಿದ್ದರು. ವಿಸರ್ಜನೆಯ ಸಮಯದಲ್ಲಿ ಅದಕ್ಕೆ ನೀರು ಬಿಟ್ಟು, ಸಾರ್ವಜನಿಕ ಗಣಪತಿಗಳು ಹಾಗೂ 500ಕ್ಕೂ ಹೆಚ್ಚು ಮನೆಗಳಲ್ಲಿ ಪ್ರತಿಷ್ಠಾಪಿಸಲಾದ ಗಣೇಶ ಮೂರ್ತಿಗಳ ವಿಸರ್ಜನೆಗೆ ಯೋಜಿಸಲಾಗಿತ್ತು. ಈಗಲೂ ಅದೇ ಯೋಜನೆಯನ್ನು ವ್ಯವಸ್ಥಿತವಾಗಿ ಮುಂದುವರೆಸಿಕೊಂಡು ಹೋಗಲಿದ್ದಾರೆ. ಯಾರೂ ಕೆರೆಯಲ್ಲಿ ಮೂರ್ತಿಯನ್ನು ವಿಸರ್ಜಿಸುವಂತಿಲ್ಲ, ಕೃತಕವಾಗಿ ಸಿದ್ಧಪಡಿಸುವ ಕೆರೆಯಲ್ಲಿಯೇ ಎಲ್ಲರೂ ಮೂರ್ತಿ ವಿಸರ್ಜಿಸಬೇಕು ಎಂದು ಈಗಾಗಲೇ ಪ್ರಚಾರ ಪಡಿಸಿದ್ದಾರೆ. ಅಲ್ಲಿ 2-3 ದಿನಗಳಲ್ಲಿ ಮೂರ್ತಿಗಳು ಸಂಪೂರ್ಣ ಕರಗುವುದರಿಂದ, ಆ ಫಲವತ್ತಾದ ಮಣ್ಣನ್ನು ಸುತ್ತಲಿನ ಜಮೀನುಗಳಿಗೆ ಸಾಗಿಸಲಾಗುತ್ತದೆ.

ವಿವಿಧ ಸಂಘಟನೆಗಳ ಮೂಲಕ ಮನೆ-ಮನೆಗಳಲ್ಲಿ ಪ್ರತಿಷ್ಠಾಪನೆ ಮಾಡಿ ಪೂಜೆಗೈದ ಮೂರ್ತಿಗಳನ್ನು ಬಕೆಟ್‌ನಲ್ಲಿ ನೀರು ತುಂಬಿಸಿ ವಿಸರ್ಜಿಸುವಂತೆ ಹಾಗೂ ಮೂರ್ತಿಯ ಮಣ್ಣನ್ನು ಮನೆ ಅಂಗಳದ ತೆಂಗಿನ ಮರ ಅಥವಾ ಹೂ ಕುಂಡಗಳಿಗೆ ಹಾಕಿ ಎಂದು ತಿಳುವಳಿಕೆ ಮೂಡಿಸಲಾಗುತ್ತಿದೆ.

ಮೂರು ವರ್ಷಗಳಿಂದ ನೇಚರ್ ರಿಸರ್ಚ್ ಸೆಂಟರ್‌ನ ಎಂ.ಜಿ. ಹಿರೇಮಠ, ವನ್ಯಜೀವಿ ಗೌರವ ಕ್ಷೇಮ ಪಾಲಕ ಸಂಸ್ಥೆಯ ಪ್ರೊ.ಗಂಗಾಧರ ಕಲ್ಲೂರ, ಕ್ರಿಯಾಶೀಲ ಗೆಳೆಯರ ಬಳಗದ ಮುಕುಂದ ಮೈಗೂರ, ಗ್ರೀನ್ ಆರ್ಮಿ ಸಂಸ್ಥೆಯ ಪ್ರಕಾಶ ಗೌಡರ ಮತ್ತು ಹರ್ಷವರ್ಧನ ಶೀಲವಂತರ ಅವರುಗಳು ಈ ಪರಿಸರ ಗಣೇಶನ ಕಾಳಜಿಗೆ ನಿಂತು ಧಾರವಾಡ ಜಿಲ್ಲೆಯಲ್ಲಿ ಮಣ್ಣಿನ ಮತ್ತು ಬೀಜ ಗಣೇಶೋತ್ಸವ ಆಚರಣೆಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ■



Downloaded From:www.kpscvaani.com





# ಆಡಿಸಿದಳೆಶೋದಾ ಜಗದೋದ್ಧಾರನ...

## ಈ ಕೃತಿಯನ್ನು ಪುರಂದರದಾಸರು ರಚಿಸಿದ್ದು ಇಲ್ಲೇ !

ಡಿ.ಪಿ. ಮುರಲೀಧರ್

ಆಗಸದಲ್ಲಿ ತಾರೆಗಳ ಕಂಡಾಗ ಆಹ್ಲಾದವಾಗುತ್ತದೆ. ಅಂತೆಯೇ, ಇಬ್ಬನಿಯ ಹನಿ ಇರುವ ಕುಸುಮವನ್ನು ನೋಡಿದಾಗಲೂ ಮನಸ್ಸು ಮೃದುವಾಗುತ್ತದೆ. ಹೃದಯ ಹಗುರಾಗುತ್ತದೆ. ನಿಶ್ಯಬ್ದ ವಾತಾವರಣದ ಮನೆಯಲ್ಲಿ ಮೊಳಗುವ ಎಳೆಯ ಮಗುವಿನ ಕಿಲ ಕಿಲ ನಗೆ ರೋಮಾಂಚನ ಮೂಡಿಸುತ್ತದೆ.

ಹೌದು! ಎಲ್ಲರಲ್ಲೂ ಆಹ್ಲಾದ ಮೂಡಿಸುವ, ಎಲ್ಲರ ಮನಸ್ಸನ್ನು ಮೃದುಗೊಳಿಸುವ ಹಾಗೂ ರೋಮಾಂಚನಗೊಳಿಸುವ ಮಾಂತ್ರಿಕ ಶಕ್ತಿ ಕೇವಲ ಸಂಗೀತಕ್ಕೆ ಮಾತ್ರವಿದೆ.

ದೇಶಗಳ ಗಡಿ ಇಲ್ಲ, ಜಾತಿ–ಧರ್ಮಗಳ ಬಂಧನಗಳಿಲ್ಲ, ಭಾಷೆಯ ಎಲ್ಲೆ ಇಲ್ಲ, ದೇಶಾತೀತ, ಜಾತ್ಯಾತೀತ, ಭಾಷಾತೀತ ಸಂಗೀತ, ಕಾಲಾತೀತವೂ ಹೌದು. ಸಂಗೀತಕ್ಕೆ ಸರಿಸಮನಾದ ವಿಷಯವೇ ಈ ಜಗದೊಳಿಲ್ಲ. ಸಂಗೀತಕ್ಕೆ ಪಾವಿತ್ರ್ಯತೆ ಇದೆ. ಸಂಗೀತಕ್ಕೆ ಭಾವನೆಗಳಿವೆ.

ರಾಗ–ತಾಳ–ಪಲ್ಲವಿಗಳಿಂದ ಸುಶ್ರಾವ್ಯ ಮತ್ತು ಸುಮಧುರತೆಯಿಂದ ಕೂಡಿರುವ ಕ್ರಮಬದ್ಧ ಲಯಬದ್ಧ ಮಾಧುರ್ಯ–ಭರಿತ ಸಂಗೀತ ಶ್ರೋತೃಗಳ ಮನ ಮುಟ್ಟುತ್ತದೆ, ಹೃದಯ ತಟ್ಟುತ್ತದೆ.



Downloaded From:www.kpscvaani.com



ಸಂಗೀತವನ್ನು ಹಾಡುವ ಗಾಯಕರು, ಸಂಗೀತವನ್ನು ನುಡಿಸುವ ಕಲಾವಿದರು ಮಾತ್ರವಲ್ಲದೆ, ಸಂಗೀತಕ್ಕೆ ಸಾಹಿತ್ಯವನ್ನು ಪೂರೈಸುವ ಕೃತಿ ರಚನಾಕಾರರು ಅಥವಾ ಕೀರ್ತನಾಕಾರರೂ ಸಂಗೀತ ಲೋಕದಲ್ಲಿ ವಿಶೇಷ ಸ್ಥಾನ ಪಡೆಯುತ್ತಾರೆ. ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಮಹತ್ತರ ಕೊಡುಗೆ ನೀಡಿದ ತ್ರಿ–ಮೂರ್ತಿಗಳು ಎಂದೇ ಖ್ಯಾತರಾದ ಮುತ್ತುಸ್ವಾಮಿ ದೀಕ್ಷಿತರು, ತ್ಯಾಗರಾಜರು ಹಾಗೂ ಶಾಮಶಾಸ್ತ್ರಿ ಅವರ ಜೊತೆಗೆ, ತಮ್ಮ ಅದ್ಭುತ ಹಾಗೂ ಅರ್ಥಪೂರ್ಣ ಕೀರ್ತನೆಗಳಿಂದ ಭಕ್ತಿ ಚಳುವಳಿಗೆ ಬಳುವಳಿ ನೀಡಿದ ಸಂತರ ಸಂತ ಪುರಂದರ ದಾಸರು ಹಾಗೂ ಸಂತ ಶ್ರೇಷ್ಠ ಕನಕದಾಸರು ಮಾತ್ರವಲ್ಲದೆ, ದಾಸ ಪರಂಪರೆಯ ಹಲವರ ಕೊಡುಗೆ ಅನನ್ಯ ಮತ್ತು ಅಗಾಧ.

ಇಂತಹ ಪ್ರತಿಭಾನ್ವಿತ ಕೀರ್ತನಾಕಾರರು ತಮ್ಮ ಶ್ರೇಷ್ಠ ಕೃತಿಗಳನ್ನು ರಚಿಸಲು ಕೆಲವು ಘಟನೆಗಳು, ಹಲವು ಸ್ಥಳಗಳು, ಕೆಲವೊಮ್ಮೆ ಕಂಡ ದೃಶ್ಯಗಳು ಹಾಗೂ ಹಲವೊಮ್ಮೆ ಎದುರಾದ ಪರಿಸ್ಥಿತಿಗಳು ಪ್ರೇರಣೆ ಮತ್ತು ಸ್ಫೂರ್ತಿ ನೀಡಿವೆ. ಸಂತರ ಸಂತ ಪುರಂದರ ದಾಸರ ಆಡಿಸಿದಳೆಶೋದಾ ಜಗದೋದ್ಧಾರನ ಎಂಬ ಉತ್ಕೃಷ್ಟ ಕೃತಿಯ ರಚನೆಗೆ ಪ್ರೇರಣೆ ನೀಡಿದ ತಾಣ ಹಾಗೂ ಸ್ಫೂರ್ತಿಯನ್ನು ಕೊಟ್ಟ ದೃಶ್ಯದ ಪರಿಚಯ ಇಲ್ಲಿದೆ.

ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ದೊಡ್ಡಮಳೂರು ಗ್ರಾಮದಲ್ಲಿ ಶ್ರೀ ಅಪ್ರಮೇಯ ಸ್ವಾಮಿ ದೇವಾಲಯವಿದೆ. ಬೆಂಗಳೂರಿನಿಂದ ಚನ್ನಪಟ್ಟಣ ದಾಟಿ ಮೈಸೂರಿನತ್ತ ಪ್ರಯಾಣಿಸುವಾಗ ರಸ್ತೆಯ ಎಡ ಭಾಗದಲ್ಲಿ ಹಾಗೂ ಮೈಸೂರಿನಿಂದ ಬೆಂಗಳೂರಿಗೆ ಬರುವಾಗ ಚನ್ನಪಟ್ಟಣಕ್ಕೆ ಮೂರು ಕಿಲೋ ಮೀಟರ್ ಮುನ್ನವೇ ಬಲ ಭಾಗದಲ್ಲಿ ಈ ದೇವಾಲಯವು ಕಾಣುತ್ತದೆ.

ಕೆಲ ಕಾಲ ಈ ಪ್ರದೇಶದಲ್ಲಿ ನೆಲೆಸಿದ್ದ ಶ್ರೀ ರಾಮಚಂದ್ರ ಸ್ವಾಮಿಯು ಕಣ್ವ ನದಿಯ ತಟದಲ್ಲಿರುವ ಈ ದೇಗುಲಕ್ಕೆ ಭೇಟಿ ನೀಡಿ ಲೋಕ ಕಲ್ಯಾಣಕ್ಕಾಗಿ ಯಜ್ಞ–ಯಾಗಾದಿಗಳನ್ನು ನಡೆಸಿದರೆಂದೂ ಹಾಗೂ ಹೋಮ–ಹವನಗಳನ್ನೂ ಮಾಡಿದರೆಂದೂ ಪ್ರತೀತಿ ಇದೆ. ಆದಕಾರಣ, ಈ ದೇವಾಲಯವನ್ನು ಶ್ರೀ ರಾಮಾಪ್ರಮೇಯ ಸ್ವಾಮಿ ದೇವಾಲಯ ಎಂದೂ ಜನಜನಿತವಾಗಿದೆ.

ಅಲ್ಲದೆ, ಈ ದೇವಾಲಯವನ್ನು ದಕ್ಷಿಣ ಅಯೋಧ್ಯಾ ಎಂದೂ ಬಣ್ಣಿಸುತ್ತಾರೆ. ಅಂತೆಯೇ, ದೇವಾಲಯ ಇರುವ ಪ್ರದೇಶವನ್ನು ಮಂಗಳಾಪುರಿ ಎಂದೂ ಕರೆಯುತ್ತಾರೆ.

ಒಂದೆಡೆ, ಶ್ರೀ ಅಪ್ರಮೇಯ ಸ್ವಾಮಿಯ ನಿಂತಿರುವ ಮೂರ್ತಿಯು ಈ ದೇವಾಲಯದ ಕೇಂದ್ರ ಬಿಂದು ಎನಿಸಿದೆ. ಸಾಲಿಗ್ರಾಮ ಶಿಲೆಯಲ್ಲಿ ನಿರ್ಮಿಸಿರುವ ಈ ಚತುರ್ಭುಜದ ಮೂರ್ತಿಯ ಮೇಲಿನ ಒಂದು ಕೈಯಲ್ಲಿ ಪಾಂಚಜನ್ಯ (ಶಂಖ) ಹಾಗೂ ಮತ್ತೊಂದು ಕೈಯಲ್ಲಿ ಸುದರ್ಶನ ಚಕ್ರ ಹಾಗೂ ಕೆಳಗಿನ ಒಂದು ಕೈಯಲ್ಲಿ ಕಮಲ ಮತ್ತೊಂದು ಕೈಯಲ್ಲಿ ಗದೆ ಹಿಡಿದಿರುವ ಶ್ರೀ ಅಪ್ರಮೇಯ ಸ್ವಾಮಿಯ ಭಕ್ತರನ್ನು ಮಂತ್ರ ಮುಗ್ಧರನ್ನಾಗಿಸುತ್ತದೆ.

ಮತ್ತೊಂದೆಡೆ, ಅಂಬೆಗಾಲು ಇಡುತ್ತಿರುವ ಬಾಲ ಕೃಷ್ಣನ ಪುಟ್ಟ ವಿಗ್ರಹ ಈ ದೇವಾಲಯದಲ್ಲಿನ ಮತ್ತೊಂದು ಆಕರ್ಷಣೆ. ಬಲಗೈಯಲ್ಲಿ ಬೆಣ್ಣೆ ಇಟ್ಟುಕೊಂಡಿರುವ ಹಾಗೂ ಎಡಗೈಯಲ್ಲಿ ನೆಲವನ್ನು ಊರಿ ಮುನ್ನಡೆಯುತ್ತಿರುವ ಈ ಪುಟ್ಟ ಬಾಲಕೃಷ್ಣನ ಸೌಂದರ್ಯ ನೋಡುಗರ ಮನಸೂರೆಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಈ ದೇವಾಲಯವನ್ನು ಶ್ರೀ ಅಂಬೆಗಾಲು ಕೃಷ್ಣ ದೇವಾಲಯ ಹಾಗೂ ಶ್ರೀ ನವನೀತ ಕೃಷ್ಣ ದೇವಾಲಯ ಎಂದೂ ಕರೆಯುತ್ತಾರೆ.

**ದೇವಾಲಯದ ವಿಶೇಷತೆ**

ಕಣ್ವ ನದಿಯ ದಡದಲ್ಲಿ ಮರಳು ಹೆಚ್ಚಾಗಿ ಇದ್ದುದರಿಂದ ದೇವಾಲಯವಿರುವ ಈ ಊರನ್ನು ಮೊದಲು ಮರಳೂರು ಎಂದು ಕರೆಯುತ್ತಿದ್ದರಂತೆ. ನಂತರ, ಕಾಲಾನುಕ್ರಮದಲ್ಲಿ ಮರಳೂರು ಎಂಬುದು ಮಳ್ಳೂರು ಆಯಿತಂತೆ. ನದಿಯ ತಟದಲ್ಲಿ ನಿರ್ಮಿಸಿರುವ ಈ ದೇವಸ್ಥಾನಕ್ಕೆ ಯಾವುದೇ ಅಡಿಪಾಯ ಅಥವಾ ತಳಪಾಯವೂ ಇಲ್ಲವಂತೆ.

ಶೈಶಾವಸ್ಥೆಯಲ್ಲಿರುವ ಶ್ರೀ ಕೃಷ್ಣನ ವಿಗ್ರಹವಿರುವ ವಿರಳಾತಿ ವಿರಳ ದೇಗುಲ ಇದಾಗಿದೆ. ಇಂತಹ ಮತ್ತೊಂದು ದೇವಾಲಯ ಇಡೀ ಜಗತ್ತಿನಲ್ಲೇ ಇಲ್ಲ ಎಂಬುದು ಸ್ಥಳೀಯರ ಮಾಹಿತಿ.

ದ್ರಾವಿಡ ಶೈಲಿಯ ವಾಸ್ತುಶಿಲ್ಪ ಈ ದೇಗುಲದ ವಿಶೇಷತೆಗಳಲ್ಲೊಂದು. ಐದು ಹಂತದ ರಾಜಗೋಪುರ ಕೂಡಾ ಈ ದೇವಾಲಯದ ಮತ್ತೊಂದು ಗಮನಾರ್ಹ ಅಂಶ. ದಶಾವತಾರ ಮಹಾದ್ವಾರದಷ್ಟೇ ಎತ್ತರದ ಕಲ್ಲಿನ ದೀಪ ಸ್ಥಂಭವು ಈ ದೇಗುಲದಲ್ಲಿ ಕಾಣಬಹುದಾದ ವಿಶಿಷ್ಟತೆ. ನಾಲ್ಕು ಕಂಬಗಳ ಹೊತ್ತ ಪುರಂದರ



Downloaded From:www.kpscvaani.com

ಮಂಟಪ ಈ ದೇವಾಲಯದಲ್ಲಿನ ವಿಶೇಷತೆಗಳಲ್ಲಿ ಅತ್ಯಂತ ವಿಶೇಷತೆಯ ಸ್ಥಾನ ಪಡೆದಿದೆ.

ಹನ್ನೊಂದನೇ ಶತಮಾನದಲ್ಲಿ ಚೋಳರ ವಂಶದ ರಾಜಾ ರಾಜೇಂದ್ರ ಸಿಂಹ ಈ ದೇವಾಲಯವನ್ನು ನಿರ್ಮಿಸಿದನೆಂದೂ ಅಲ್ಲಿನ ಶಿಲಾ ಶಾಸನ ಹೇಳುತ್ತದೆ. ಅಲ್ಲಿನ ಅತ್ಯಾಕರ್ಷಕ ಅಂಬೆಗಾಲು ಕೃಷ್ಣನ ವಿಗ್ರಹವನ್ನು ವ್ಯಾಸ ತೀರ್ಥರು ಪ್ರತಿಷ್ಠಾಪಿಸಿದರೆಂದೂ ಹಾಗೂ ದೇವಾಲಯದ ಪ್ರಾಕಾರವನ್ನು ವಿಜಯನಗರದ ಅರಸರು ನಿರ್ಮಿಸಿದರೆಂದೂ ಸ್ಥಳೀಯರು ಹೇಳುತ್ತಾರೆ.

ಸ್ಥಳೀಯರ ಮಾತುಗಳ ಪ್ರಕಾರ, ಶ್ರೀರಾಮಚಂದ್ರ ಪ್ರಭುವಿನಿಂದ ವ್ಯಾಸ ತೀರ್ಥರು, ಪುರಂದರದಾಸರವರೆಗೆ ಮಹಾಮಹಿಮರು ಈ ದೇವಾಲಯಕ್ಕೆ ಭೇಟಿ ನೀಡಿದ್ದಾರೆ ಎಂಬುದು ಒಂದೆಡೆಯಾದರೆ, ಚೋಳರ ದೊರೆ ರಾಜಾ ರಾಜೇಂದ್ರ ಸಿಂಹನಿಂದ ವಿಜಯನಗರದ ಅರಸರವರೆಗೆ ಈ ದೇವಾಲಯದ ಅಭ್ಯುದಯಕ್ಕೆ ಶ್ರಮಿಸಿದ್ದಾರೆ ಎಂಬುದು ಮತ್ತೊಂದೆಡೆ ಗಮನಕ್ಕೆ ಬರುತ್ತದೆ.

**ಅಪ್ರಮೇಯ–ಅರವಿಂದವಲ್ಲಿ**

ಅಪ್ರಮೇಯ ಎಂದರೆ ಅಳೆಯಲಾರದ್ದು ಎಂದರ್ಥ. ದೇವರನ್ನು ಅಥವಾ ದೇವರ ಮಹಿಮೆಯನ್ನು ಅಳೆದು ತೂಗಲು ಸಾಧ್ಯವೇ ? ಎಂಬುದು ಆಸ್ತಿಕರ ಪ್ರಶ್ನೆ. ಶ್ರೀ ಅಪ್ರಮೇಯ ಶ್ರೀಮನ್ನಾರಾಯಣನ ಅಪರಾವತಾರ. ಶ್ರೀ ಅಪ್ರಮೇಯ ಸ್ವಾಮಿ ದೇವಾಲಯ ಸನ್ನಿಧಿಯ ಸಮೀಪದಲ್ಲಿಯೇ ಶ್ರೀಗಂಧದ ಮರದಲ್ಲಿ ನಿರ್ಮಿಸಿರುವ ಶ್ರೀ ಅಪ್ರಮೇಯ ಸ್ವಾಮಿಯ ಉತ್ಸವ ಮೂರ್ತಿಯೂ ಇದೆ. ಅದೇ ಪ್ರಾಂಗಣದ ಪಕ್ಕದಲ್ಲಿಯೇ ಶ್ರೀ ಮಹಾಲಕ್ಷ್ಮೀ ಸ್ವರೂಪಳಾಗಿರುವ ಶ್ರೀ ಅರವಿಂದವಲ್ಲಿಯ ಸನ್ನಿಧಿಯೂ ಇದೆ.

**ಸ್ಫುರದ್ರೂಪಿ ಅಂಬೆಗಾಲು ಕೃಷ್ಣ**

ಶ್ರೀ ಅಪ್ರಮೇಯ ಸ್ವಾಮಿ ದೇವಾಲಯದ ಪ್ರಮುಖ ಆಕರ್ಷಣೆ ಅಂಬೆಗಾಲು ಕೃಷ್ಣ ಅಥವಾ ನವನೀತ ಕೃಷ್ಣನ ಸನ್ನಿಧಿ. ಕೃಷ್ಣ ವರ್ಣದಲ್ಲಿಯೇ ಇರುವ ಅಂಬೆಗಾಲು ಕೃಷ್ಣನ ಮೂರ್ತಿಯ ಮುಖ ಪೂರ್ಣ ಚಂದ್ರನಂತೆ ಕಂಗೊಳಿಸುತ್ತದೆ. ವಿಗ್ರಹದಲ್ಲಿನ ಫಳಫಳ



ಹೊಳೆಯುವ ವಿಶಾಲ ಕಣ್ಣುಗಳು ಆಯಸ್ಕಾಂತದಂತೆ ಆಕರ್ಷಿಸುತ್ತದೆ. ಅಂಬೆಗಾಲು ಕೃಷ್ಣನ ವಿಗ್ರಹದಲ್ಲಿ ಕಾಣಬರುವ ಗುಂಗುರು ಕೂದಲು ರೋಚಕ. ಕುತ್ತಿಗೆಯಲ್ಲಿ ವಜ್ರಾಭರಣದ ಮಾಲೆ, ತೋಳಿನಲ್ಲಿ ತೋಳು ಬಂಧಿ, ಸೊಂಟಕ್ಕೆ ವಡ್ಯಾಣ, ಕಾಲಿಗೆ ಅಂದುಗೆ ಎಲ್ಲವೂ ಅಂಬೆಗಾಲು ಕೃಷ್ಣನ ಸೌಂದರ್ಯವನ್ನು ವೃದ್ಧಿಸುತ್ತದೆ. ಪುಟ್ಟ ಕೃಷ್ಣನ ಸೌಂದರ್ಯಕ್ಕೆ ವಕ್ರ ದೃಷ್ಟಿ ಬೀಳದಿರಲಿ ಎಂಬ ಸದುದ್ದೇಶದಿಂದ ವಿಗ್ರಹಕ್ಕೆ ಹುಲಿ ಉಗುರು ಕಟ್ಟಲಾಗಿದೆ. ಆದರೂ, ಬಲಗೈಯಲ್ಲಿ ಬೆಣ್ಣೆ ಹಿಡಿದಿರುವ ಭಂಗಿಯಲ್ಲಿರುವ ಹಾಗೂ ಎಡಗೈಯಲ್ಲಿ ನೆಲವೂರಿ ಮುಂದಕ್ಕೆ ಸಾಗುತ್ತಿರುವ ಭಂಗಿಯ ನವನೀತ ಕೃಷ್ಣನ ವಿಗ್ರಹ ಎಂತಹವರ ಗಮನವನ್ನಾದರೂ ಸೆಳೆಯುವ ಸಾಮರ್ಥ್ಯ ಹೊಂದಿದೆ. ಹೀಗಿರುವಾಗ, ತನ್ನ ಪರಮಭಕ್ತ ಪುರಂದರದಾಸರ ಗಮನಸೆಳೆಯಲು ಆತನಿಗೆ ಕಷ್ಟವೇ ?

ಪುರಂದರ ದಾಸರು ಈ ದೇವಾಲಯಕ್ಕೆ ಬಂದಾಗ ಶ್ರೀ ಅಪ್ರಮೇಯ ಸ್ವಾಮಿ ಹಾಗೂ ಶ್ರೀ ಅಂಬೆಗಾಲು ಕೃಷ್ಣನ ವಿಗ್ರಹಗಳನ್ನು ನೋಡುತ್ತಾರೆ. ಭಕ್ತಿ ಪರವಶರಾಗುತ್ತಾರೆ. ಶ್ರೀ ಅಂಬೆಗಾಲು ಕೃಷ್ಣನ ಕಂಡು ಆತನ ಬಾಲ ಲೀಲೆಗಳ ವರ್ಣಿಸಿ ಕೀರ್ತನೆಯನ್ನು ರಚಿಸುತ್ತಾರೆ. ಅದೇ ಪುರಂದರದಾಸರ ಸರ್ವಶ್ರೇಷ್ಠ ರಚನೆಗಳಲ್ಲೊಂದಾದ ಆಡಿಸಿದಳೆಶೋದಾ ಜಗದೋದ್ಧಾರನ ಕೃತಿ. ಈ ಕೃತಿಯನ್ನು ರಚಿಸಿದ್ದು ಮಾತ್ರವಲ್ಲ, ಇದೇ ಸ್ಥಳದಲ್ಲಿ ಕುಳಿತು ಹಾಡುತ್ತಾರೆ. ದೇವಾಲಯದ ಪ್ರಾಂಗಣದಲ್ಲಿ ಪುರಂದರದಾಸರು ಕುಳಿತು, ತಾವು ರಚಿಸಿದ ಆಡಿಸಿದಳೆಶೋದಾ ಜಗದೋದ್ಧಾರನ ಕೃತಿಯನ್ನು ಹಾಡಿದ ಸ್ಥಳ ಇದೀಗ ಪುರಂದರ ಮಂಟಪ ಎಂದೇ ಪ್ರಸಿದ್ಧಿ ಪಡೆದಿದೆ.

ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ, ತಮಿಳುನಾಡು ರಾಜ್ಯಗಳ ಕರ್ನಾಟಕ ಶಾಸ್ತ್ರೀಯ ಸಂಗೀತ ವಿದ್ವಾಂಸರು, ಸಂಗೀತ ಶಿಕ್ಷಕರು, ಸಂಗೀತದ ಕಲಿಕೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳು ಹಾಗೂ ಸಂಗೀತ ರಸಿಕರು ಶ್ರೀ ಅಪ್ರಮೇಯ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ಪುರಂದರ ಮಂಟಪವನ್ನು ಕಂಡು ಮಹಾನ್ ಕೀರ್ತನಾಕಾರ ಹಾಗೂ ಸಂತರ ಸಂತ ಪುರಂದರದಾಸರನ್ನು ಸ್ಮರಿಸಿ, ಗೌರವ ಸಲ್ಲಿಸುತ್ತಾರೆ.

ರಾಜ್ಯದ ರಾಜಧಾನಿ ಬೆಂಗಳೂರು ಮಹಾನಗರದಿಂದ 63 ಕಿಲೋ ಮೀಟರ್ ಹಾಗೂ ಸಾಂಸ್ಕೃತಿಕ ನಗರಿ ಮೈಸೂರಿನಿಂದ 93 ಕಿಲೋ ಮೀಟರ್ ದೂರದಲ್ಲಿರುವ ಈ ದೇವಾಲಯಕ್ಕೆ ಇದೀಗ ದೇಶಾದ್ಯಂತ ಭಕ್ತರು ಹಾಗೂ ಪ್ರವಾಸಿಗರು ಬರುತ್ತಿದ್ದಾರೆ.

ಮದುವೆಯಾಗಿ ವರ್ಷಗಳೇ ಕಳೆದರೂ ಮಕ್ಕಳಾಗದ ದಂಪತಿಗಳು ಶ್ರೀ ಅಂಬೆಗಾಲು ಕೃಷ್ಣನ ಸನ್ನಿಧಿಗೆ ಆಗಮಿಸಿ, ಮಕ್ಕಳನ್ನು ಕರುಣಿಸುವಂತೆ ಹರಕೆ ಹೊರುತ್ತಾರೆ. ತಮ್ಮ ಪ್ರಾರ್ಥನೆ ಫಲಿಸಿದಾಗ, ಮತ್ತೆ ದೇವರ ಸನ್ನಿಧಿಗೆ ಆಗಮಿಸಿ, ಬೆಳ್ಳಿ ಅಥವಾ ಮರದ ಪುಟ್ಟ ಗಾತ್ರದ ತೊಟ್ಟಿಲು ಅಥವಾ ಉಯ್ಯಾಲೆಯನ್ನು ದೇವರ ಸನ್ನಿಧಿಯಲ್ಲಿ ಕಟ್ಟಿ ಕೃತಜ್ಞತೆ ಸಲ್ಲಿಸುತ್ತಾರೆ.

ಶ್ರೀ ಅಪ್ರಮೇಯ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ, ಶ್ರೀ ಅಂಬೆಗಾಲು ಕೃಷ್ಣನ ಕಣ್ತುಂಬಿಕೊಳ್ಳುತ್ತಾ, ಪುರಂದರ ಮಂಟಪವನ್ನು ನೋಡುತ್ತಾ, ಆಡಿಸಿದಳೆಶೋದಾ ಜಗದೋದ್ಧಾರನ ಈ ಕೃತಿಯನ್ನು ಪುರಂದರದಾಸರು ರಚಿಸಿದ್ದು ಇಲ್ಲೇ ಎಂಬುದು ಮನದೊಳಗೆ ಹೊಕ್ಕಾಗ ಮೈ ರೋಮಾಂಚನವಾಗುತ್ತದೆ. ಭಕ್ತಿ ಚಳುವಳಿಯ ಬಳುವಳಿಯಾಗಿ ಸರಳ ಸಾಹಿತ್ಯದ ಮೂಲಕ ಸರ್ವಶ್ರೇಷ್ಠ ಕೀರ್ತನೆಯನ್ನು ಸಂಗೀತ ಲೋಕಕ್ಕೆ ಕೊಡುಗೆಯಾಗಿ ನೀಡಿದ ಸಂತರ ಸಂತ ಪುರಂದರದಾಸರ ಅರ್ಥಗರ್ಭಿತ ತತ್ವ–ಸಿದ್ಧಾಂತದ ಅನಾವರಣವೂ ಆಗುತ್ತದೆ.


Downloaded From:www.kpscvaani.com

# ವರ್ಷ ಪೂರ್ತಿ ಹಾಸ್ಯ ಚಕ್ರವರ್ತಿಯ ಶತಮಾನೋತ್ಸವ ಆಚರಣೆ

ಡಾ.ಕೆ. ಪುಟ್ಟಸ್ವಾಮಿ







ಕನ್ನಡ ಚಲನಚಿತ್ರರಂಗದ ಸುಪ್ರಸಿದ್ಧ ನಟ, ಹಾಸ್ಯ ಚಕ್ರವರ್ತಿ ಎಂದು ಪ್ರೇಕ್ಷಕರಿಂದ ಕರೆಸಿಕೊಂಡ ಟಿ.ಆರ್. ನರಸಿಂಹರಾಜು ಅವರ ಜನ್ಮ ಶತಮಾನೋತ್ಸವದ ಈ ವರ್ಷದಲ್ಲಿ ಕನ್ನಡ ಜನತೆ ಅವರನ್ನು ಮತ್ತೆ ನೆನಪಿಸಿಕೊಂಡು ಗೌರವ ಸಲ್ಲಿಸುತ್ತಿದೆ.

ಕನ್ನಡ ಚಿತ್ರಂಗದಲ್ಲಿ ತಮ್ಮ ವಿನೂತನ ಶೈಲಿಯ ನಟನೆಯಿಂದ ಬೆಳ್ಳಿತೆರೆಯ ಮೇಲೆ ನಗೆಯ ಹೊನಲನ್ನು ಹರಿಸಿದ ನರಸಿಂಹರಾಜು ಅವರು ಅಭಿಜಾತ ಕಲಾವಿದರು. 'ಬೇಡರ ಕಣ್ಣಪ್ಪ' (1954)ನಿಂದ ಆರಂಭವಾದ ನರಸಿಂಹರಾಜು ಅವರ 'ನಗೆಯ ಹಬ್ಬ' ಸುಮಾರು ಎರಡು ದಶಕಗಳ ಕಾಲ ಕನ್ನಡ ಚಿತ್ರರಂಗವನ್ನು ಅವ್ಯಾಹತವಾಗಿ ಆವರಿಸಿಕೊಂಡಿತ್ತು. ಅಕ್ಷರಶಃ ಅದು ನರಸಿಂಹರಾಜು ಯುಗವಾಗಿತ್ತು. 1954ರಿಂದ 1967ರವರೆಗೆ ತಯಾರಾದ 168 ಚಿತ್ರಗಳಲ್ಲಿ ನರಸಿಂಹರಾಜು ನೂರು ಚಿತ್ರಗಳಲ್ಲಿ ಅಭಿನಯಿಸಿದ್ದರು. ಅದೂ ಈ ಅವಧಿಯಲ್ಲಿ ಯಶಸ್ಸು ಕಂಡ ಎಲ್ಲ ಚಿತ್ರಗಳಲ್ಲೂ ನರಸಿಂಹರಾಜು ಅಭಿನಯಿಸಿದ್ದು ವಿಶೇಷ.

ತಿಪಟೂರು ರಾಮರಾಜು ನರಸಿಂಹರಾಜು ಸಹ ರಂಗಭೂಮಿಯಿಂದ ಬಂದವರು. ಚಿಕ್ಕವಯಸ್ಸಿನಿಂದಲೇ ರಂಗಭೂಮಿಯ ಗೀಳು ಹಿಡಿಸಿಕೊಂಡಿದ್ದ ಅವರು ಸಿ.ಬಿ.ಮಲ್ಲಪ್ಪನವರ ಚಂದ್ರಮೌಳೇಶ್ವರ ನಾಟಕ ಮಂಡಳಿಯಲ್ಲಿ ಬಾಲಪಾತ್ರಗಳನ್ನು ವಹಿಸುವ ಮೂಲಕ ಕಲಾ ಜಗತ್ತನ್ನು ಪ್ರವೇಶಿಸಿದರು. 1954ರಲ್ಲಿ 'ಬೇಡರ ಕಣ್ಣಪ್ಪ' ತೆರೆಕಾಣುವವರೆಗೆ ಹಲವಾರು ನಾಟಕ ಸಂಸ್ಥೆಗಳಲ್ಲಿ ಕಲಾವಿದರಾಗಿ ಜನಪ್ರಿಯತೆ ಗಳಿಸಿದ್ದ ನರಸಿಂಹರಾಜು ಒಮ್ಮೆ ಚಿತ್ರರಂಗ ಪ್ರವೇಶಿಸಿದ ನಂತರ ಹಿಂದಿರುಗಿ ನೋಡಲಿಲ್ಲ. 'ಬೇಡರ ಕಣ್ಣಪ್ಪ' ಚಿತ್ರದ ದುಷ್ಟ ಪೂಜಾರಿಯ ಸಜ್ಜನ ಮಗ 'ಕಾಶಿ' ಪಾತ್ರದಲ್ಲಿ ನಕ್ಕು ನಗಿಸಿದ ಅವರು ಕನ್ನಡದ ಮೊದಲ ಸ್ಟಾರ್ ನಗೆ ನಟರಾದರು. ಮುಂದೆ 'ಸದಾರಮೆ'ಯ ಆದಿಮೂರ್ತಿ ಪಾತ್ರ ಅವರ ಸ್ಥಾನವನ್ನು ಭದ್ರಪಡಿಸಿತು. ಅವರನ್ನು ನಗೆನಟ ಎಂದು ಕರೆಯುವುದು ತಪ್ಪಾದೀತು. ಅವರೊಬ್ಬ ಪೂರ್ಣ ಕಲಾವಿದ. ಅವರು ನಿರ್ವಹಿಸಿದ ಪ್ರತಿ ಪಾತ್ರಕ್ಕೂ ಸಹಜತೆಯನ್ನು ತಂದರು. ಜೀವಂತಿಕೆಯನ್ನು ತುಂಬಿದರು. ಯಾವುದೇ ಪಾತ್ರ ವಹಿಸಿದರೂ ಅಲ್ಲಿ ನಗೆಯೇ ಪ್ರಧಾನವಾಗಿರುತ್ತಿತ್ತು. ಅದಕ್ಕೆ ಅವರ ಮುಖಭಾವ– ಆ ಪೆದ್ದು ಮೋರೆ, ಅಸಹಾಯಕತೆ ಸೂಸುವ ಕಣ್ಣು, ಅದನ್ನು ಮೀರಿಯೂ ಸಾಹಸಕ್ಕೆಳೆಸುವ ಮನಸ್ಥಿತಿ ತೆರೆಯ ಮೇಲೆ ನಗೆಯ ತರಂಗಗಳನ್ನು ಸೃಷ್ಟಿಸುತಿತ್ತು. ನರಸಿಂಹರಾಜು ಅವರು ವಿವಿಧ ಪಾತ್ರಗಳಲ್ಲಿ ಪೇಚಾಟದ ಮೂಲಕ ಸೃಷ್ಟಿಸುವ ನಗೆಯು ಹಲವೊಮ್ಮೆ ವಿಷಾದವನ್ನೂ ಉಕ್ಕಿಸುತ್ತಿತ್ತು. ಯಾವ ಪಾತ್ರವೇ ಆಗಲಿ ಅದನ್ನೊಂದು ವಿಭಿನ್ನ ಅನುಭವವಾಗಿಸುವ ಕಲೆ ಅವರಿಗೆ ಸಿದ್ಧಿಸಿತ್ತು. ಹಾಸ್ಯ ಎನ್ನುವುದು ಅಶ್ಲೀಲತೆಯ ಮಡಿಲಲ್ಲಿ ಬಿದ್ದು ಒದ್ದಾಡುವ ಯುಗಕ್ಕಿಂತ ಭಿನ್ನವಾದ ಅವಧಿಯಲ್ಲಿ ಅವರು ಬದುಕಿದ್ದರು.



ಒಬ್ಬ ನಟ ಅದರಲ್ಲೂ ಹಾಸ್ಯನಟ ಸುದೀರ್ಘವಾಗಿ ಜನಪ್ರಿಯತೆ ಉಳಿಸಿಕೊಳ್ಳುವುದು ಕಷ್ಟ. ಕಾರಣ, ಒಂದು ಚಿತ್ರದಿಂದ ಚಿತ್ರಕ್ಕೆ ಪ್ರೇಕ್ಷಕ ಹೆಚ್ಚಿಸಿಕೊಳ್ಳುವ ನಿರೀಕ್ಷೆಯನ್ನು ಆತ ಸರಿ ತೂಗಿಸಬೇಕಾದ ಅನಿವಾರ್ಯತೆ. ಮತ್ತೊಂದು, ಅಭಿನಯದಲ್ಲಿನ ಏಕತಾನತೆಯನ್ನು ಮುರಿಯುವ ಸವಾಲು. ಇವೆರಡನ್ನೂ ನರಸಿಂಹರಾಜು ಸಮರ್ಥವಾಗಿ ಎದುರಿಸಿದರು. ಅವರಿಗೆ ಸುಂದರವದನದ ವರದಾನವಿರದಿದ್ದರೂ, ತಮ್ಮ ಉಬ್ಬು



Downloaded From:www.kpscvaani.com

ಹಲ್ಲನ್ನೇ ಬಂಡವಾಳ ಮಾಡಿಕೊಂಡು ಕನ್ನಡಿಗರ ಹೃದಯವನ್ನು ಸೂರೆಗೊಂಡರು. ಬಳುಕುವ ದೇಹ, ಮಿಂಚಿನ ಕಣ್ಣು ಮತ್ತು ವಿಶಿಷ್ಟವಾದ ಸಂಭಾಷಣಾ ಶೈಲಿಯಿಂದ ಪ್ರತಿ ಪಾತ್ರವೂ ಭಿನ್ನವಾಗಿರುವಂತೆ ನೋಡಿಕೊಂಡರು. ಈಗಲೂ ಎಲ್ಲ ವಯೋಮಾನದ ಚಿತ್ರರಸಿಕರಿಗೆ ನರಸಿಂಹರಾಜು ಅವರ ಹಾಸ್ಯ ಸನ್ನಿವೇಶಗಳು ಮನರಂಜನೆಯ ಶಾಶ್ವತ ಮೂಲಗಳಾಗಿವೆ. ನರಸಿಂಹರಾಜು ಅವರಂಥ ನಟರು ಒಂದು ಪ್ರಾದೇಶಿಕ ಭಾಷೆಯ ನಟರಲ್ಲ. ಅವರು ಜಾಗತಿಕ ಕಲಾವಿದ ಸಮೂಹಕ್ಕೆ ಸೇರಿದವರು. ಅವರು ಒಂದು ಪ್ರಾದೇಶಿಕ ಭಾಷೆಯ ನಟರಾಗಿದ್ದರು ಎಂಬ ಅಂಶವನ್ನು ಹೊರತುಪಡಿಸಿದರೆ, ಜಗತ್ತಿನ ಸಮುದಾಯವನ್ನು ರಂಜಿಸಿದ ಚಾರ್ಲಿ ಚಾಪ್ಲಿನ್, ಬಸ್ಟರ್ನ್ ಕೀಟನ್‌ರವರ ಸಾಲಿನಲ್ಲಿ ನಿಲ್ಲಬಲ್ಲ ಕಲಾವಿದರಾಗಿದ್ದರು. ಹಾಗೆಯೇ ನಾಗೇಶ್, ಮಹಮೂದ್ ಅವರಿಗೂ ಅನ್ವಯವಾಗುವ ಮಾತಿದು. ಈಗಿನ ಯಾವೊಬ್ಬ ಕಲಾವಿದನೂ ಕನಸನ್ನು ಸಹ ಕಾಣಲಾಗದಷ್ಟು ಗಾಢವಾದ ಹಾಸ್ಯಪ್ರಜ್ಞೆ ಅವರಲ್ಲಿತ್ತು. ಅವರಿಗೆ ಅರ್ಹವಾಗಿ ಸಲ್ಲಬೇಕಾದ ರಾಷ್ಟ್ರಮನ್ನಣೆ ದಕ್ಕಲಿಲ್ಲ. ಭಾರತೀಯ ಚಿತ್ರರಂಗ ಇತಿಹಾಸವು ನರಸಿಂಹರಾಜು, ಬಾಲಣ್ಣ, ತಾಯ್‌ನಾಗೇಶ್ ಅವರಂಥವರನ್ನು ಉಲ್ಲೇಖಿಸದಿದ್ದರೆ ಅದೊಂದು ಅಪೂರ್ಣ ದಾಖಲೆಯಷ್ಟೆ!

'ಬೇಡರ ಕಣ್ಣಪ್ಪ' ಚಿತ್ರದಿಂದ ಪ್ರೇಕ್ಷಕರು ಬಾಯಿ ಮುಚ್ಚಿಕೊಳ್ಳಲು ಅವಕಾಶ ನೀಡದಂತೆ ನಗಿಸಿದ ನರಸಿಂಹರಾಜು ಅವರು ತಮಗಿಂತ ಹಿಂದೆ ತೆರೆಗೆ ಪ್ರವೇಶಿಸಿದ ಟಿ ಎನ್ ಬಾಲಕೃಷ್ಣ ಅವರ ಜೋಡಿಯಾಗಿ ಕನ್ನಡದ ರಂಜನೆಯ ಲೋಕವನ್ನು ವಿಸ್ತರಿಸಿದ್ದು ಈಗ ಇತಿಹಾಸ. ಸುಮಾರು ಮೂರು ದಶಕಗಳ ಕಾಲ ಈ ಜೋಡಿಯು ನಿರಂತರವಾಗಿ ಕನ್ನಡ ಚಿತ್ರರಸಿಕರನ್ನು ಮೋಡಿ ಹಾಕಿ ಥಿಯೇಟರ್‌ಗೆ ಎಳೆ ತಂದಿತು. ಒಬ್ಬರು ಮತ್ತೊಬ್ಬರನ್ನು ಎಂದು ಅನುಕರಿಸಲಿಲ್ಲ. ಇಬ್ಬರೂ ತಮ್ಮದೇ ಆದ ಸ್ವಂತ ಶೈಲಿಯಿಂದ ಪರಸ್ಪರ ಪೋಷಿಸಿ ಬೆಳೆದರು. ಪಾತ್ರ, ಸನ್ನಿವೇಶ ಮತ್ತು ಸಂಭಾಷಣೆಯನ್ನು ಸಮರ್ಥವಾಗಿ ಅರ್ಥೈಸಿಕೊಂಡು ಅಭಿನಯಿಸಿ ಗೆದ್ದರು.

ಇಬ್ಬರಿಗೂ ಸಮಾನವಾದ ಕೆಲವು ಅಂಶಗಳಿದ್ದವು. ಬಾಲಣ್ಣ ಅಭಿಮಾನ ಸ್ಟುಡಿಯೋ ಸ್ಥಾಪಿಸುವ ಮೊದಲು 'ಕಲಿತರೂ ಹೆಣ್ಣೆ' ಚಿತ್ರ ನಿರ್ಮಿಸಿದ್ದರು. ನರಸಿಂಹರಾಜು ಅವರೂ ಸಹ 'ಪ್ರೊಫೆಸರ್ ಹುಚ್ಚೂರಾಯ' ನಿರ್ಮಿಸಿ ಕನ್ನಡದ ಶುದ್ಧ ಮನರಂಜನಾತ್ಮಕ ಮತ್ತು ಅರ್ಥಪೂರ್ಣ ಚಿತ್ರಗಳ ಪರಂಪರೆಯನ್ನು ಮುಂದುವರೆಸಿದರು. ಜನಮೆಚ್ಚಿ ನಗುವಂಥ ಚಿತ್ರಗಳನ್ನು ಮಾಡುವ ಅದಮ್ಯ ಹಂಬಲ ಇಬ್ಬರಲ್ಲೂ ಇತ್ತು. ಇಬ್ಬರೂ 'ರಣಧೀರ ಕಂಠೀರವ' ಚಿತ್ರದ ನಿರ್ಮಾಣದಲ್ಲಿ ಕೈಜೋಡಿಸಿದ್ದನ್ನು ಮರೆಯುವಂತಿಲ್ಲ.

ಬಾಲಕೃಷ್ಣ ಅವರಿಗೆ ದೊರೆತಷ್ಟು ವೈವಿಧ್ಯ ಪಾತ್ರಗಳು ನರಸಿಂಹರಾಜು ಅವರಿಗೆ ದೊರೆಯಲಿಲ್ಲ, ನಿಜ. ಅವರನ್ನು ಪ್ರೇಕ್ಷಕ ವರ್ಗ ಮತ್ತು ನಿರ್ದೇಶಕರು ಒಂದು ನಿರ್ದಿಷ್ಟ ಪಾತ್ರಕ್ರಮಕ್ಕೆ ಅಳವಡಿಸಿಬಿಟ್ಟಿದ್ದರು. ಕನ್ನಡದಲ್ಲಿ ಒಂದು ಚೌಕಟ್ಟಿಗೆ ಹೊಂದಿಸುವ ನಟನ ಇಮೇಜು ನರಸಿಂಹರಾಜು ಅವರಿಂದಲೇ ಆರಂಭವಾಯಿತೇನೋ ಎನಿಸುತ್ತದೆ. ಯಾಕೆಂದರೆ ಅವರು ತಮ್ಮ ಸಮಕಾಲೀನ ನಾಯಕ ನಟರುಗಳಿಗಿಂತ ಅಪಾರ ಬೇಡಿಕೆಯ ನಟರಾಗಿದ್ದರು. ನರಸಿಂಹರಾಜು ಅವರ ಕಾಲ್‌ಶೀಟ್ ಗ್ಯಾರಂಟಿಯಾದ ನಂತರ ನಾಯಕ–ನಾಯಕಿಯರ ತಲಾಶ್ ನಡೆಯುತ್ತಿತ್ತೆಂಬ ಪ್ರತೀತಿಯೂ ಇದೆ. ಹಾಗಾಗಿ ಅತ್ತೆ ಅಥವಾ ಮಾವನಿಂದ ತಿರಸ್ಕಾರಕ್ಕೊಳಗಾಗುವ ಅಳಿಯ, ಹೆಣ್ಣೊಂದನ್ನು ಒಲಿಸಿಕೊಳ್ಳಲು ಪೇಚಾಡುವ ಯುವಕ, ನಾಯಕ ನಟನ ಸಾಹಸಗಳಲ್ಲಿ ಭಾಗಿಯಾಗುತ್ತಾ ಪೇಚಿನ ಪ್ರಸಂಗಗಳನ್ನು ಸೃಷ್ಟಿಸುವ ಅಮಾಯಕ, ಸಿನಿಮಾದ ಪರಾಕಾಷ್ಠೆಯ ಘಟ್ಟದಲ್ಲಿ ನಾಯಕನಿಗೆ ಅನಿರೀಕ್ಷಿತ ವಿಧಾನಗಳ ಮೂಲಕ ನೆರವಾಗುವ ಸ್ನೇಹಿತ, ಹೀಗೆ ಕೆಲವು ಸಿದ್ಧಮಾದರಿಯ ಪಾತ್ರಗಳೇ ಅವರಿಗೆ ಹೆಚ್ಚಾಗಿ ದೊರೆಯುತ್ತಿದ್ದವು. ಆದರೆ ತಮ್ಮ ವಿಶಿಷ್ಟ ಅಭಿನಯದಿಂದಲೇ ಅವರು ಪಾತ್ರಗಳ ಏಕತಾನತೆಯನ್ನು ಮುರಿಯುತ್ತಿದ್ದರು. ಒಂದು ಡೈಲಾಗು, ಒಂದು ಪೆದ್ದು ಭಾವ, ಅಸಹಾಯಕತೆಯನ್ನು ತೋಡಿಕೊಳ್ಳುವ ವಿಧಾನದಿಂದಲೇ ಅವರು ದೃಶ್ಯದಲ್ಲಿ ಅಪೂರ್ವ ಬದಲಾವಣೆ ತರುತ್ತಿದ್ದರು. ಈ ಏಕತಾನತೆಯ ಪಾತ್ರಗಳ ನಡುವೆಯೂ ಅವರು 'ನಕ್ಕರೆ ಅದೇ ಸ್ವರ್ಗ' ಚಿತ್ರದ 'ಬೊಹಿಮಿಯನ್' ಗುಣದ, ಸುಖವನ್ನು ಮೊಗೆಮೊಗೆದು ಕುಡಿವ ಪಾತ್ರದಲ್ಲಿ, 'ನಾಡಿನ ಭಾಗ್ಯ' ಚಿತ್ರದ ನ್ಯಾಯಾಲಯದಲ್ಲಿ ಸೋತು ಸುಣ್ಣವಾಗಿ ತನ್ನ ಇಡೀ ಸಂಸಾರಕ್ಕೆ ವಿಷವಿಟ್ಟು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸುವ ರೈತನ ಪಾತ್ರದಲ್ಲಿ, ವರದಕ್ಷಿಣೆಯ ದೆಸೆಯಿಂದ ಸೋದರಿಯ ಮದುವೆಗೆ ಬವಣೆ ಪಡುವ 'ಮದುವೆ ಮಾಡಿ ನೋಡು' ಚಿತ್ರದ ಪಾತ್ರದಲ್ಲಿ ನರಸಿಂಹರಾಜು ಅವರ ಅಭಿನಯ ಅವರೆಂಥ ನಟ ಎಂಬುದಕ್ಕೆ ಪುರಾವೆ ದೊರೆಯುತ್ತದೆ. ನೀತಿ ಅನೀತಿಗಳ ಗೊಡವೆಯಿಲ್ಲದೆ, ತನಗೆ ಸಿಗುವ ಸುಖಕ್ಕೆ ಹಾತೊರೆವ 'ಸದಾರಮೆ'ಯ ಆದಿಮೂರ್ತಿ ಪಾತ್ರವನ್ನಂತೂ ಕನ್ನಡಿಗರು ಮರೆಯುವಂತೇ ಇಲ್ಲ. ಆದರೆ ಕನ್ನಡದ ನಿರ್ದೇಶಕರು ಸವೆದ ಜಾಡಿನಲ್ಲಿಯೇ ಅವರನ್ನು ಮುನ್ನಡೆಸಿದ ಕಾರಣ ಅವರ ಸಂಪೂರ್ಣ ಪ್ರತಿಭೆ ಪ್ರೇಕ್ಷಕರಿಗೆ ಪರಿಚಯವಾದದ್ದೇ ಕಡಿಮೆ.

ಎಪ್ಪತ್ತರ ದಶಕದಲ್ಲಿ ಚಿತ್ರ ನಿರ್ಮಾಣ ಏರುಗತಿ ಕಂಡಿತು. ಅದರ ಜೊತೆಯಲ್ಲಿಯೇ ಕಲಾವಿದರ ದಂಡು ಸಹ ಆಗಮಿಸಿತು. ಹಾಸ್ಯ ಪಾತ್ರಗಳಿಗೆ ನರಸಿಂಹರಾಜು–ಬಾಲಣ್ಣನವರು ಹಾಕಿಕೊಟ್ಟ ಪ್ರಮಾಣವನ್ನೇ ಇತರ ಹಾಸ್ಯ ಕಲಾವಿದರೂ ಅನುಸರಿಸಿದ್ದು ವಿಶೇಷ. ಎಷ್ಟೇ ಪ್ರಯತ್ನಿಸಿದರೂ ನರಸಿಂಹರಾಜು ಅವರನ್ನು ಹಾಸ್ಯ ಪಾತ್ರಗಳಲ್ಲಿ ಮೀರಿಸಲು ಯಾರಿಗೂ ಸಾಧ್ಯವಾಗಲಿಲ್ಲ ಎನ್ನುವುದು ಒಂದು ಕಡೆಯಾದರೆ ಕಲಾವಿದರ ಧ್ವನಿ, ಭಾವ, ನಟನೆಯನ್ನು ಅನುಕರಿಸಿ ರಂಜಿಸುವ ಮಿಮಿಕ್ರಿ ಕಲಾವಿದರೂ ಎಂದೂ ನರಸಿಂಹರಾಜು ಅವರನ್ನು ಅನುಕರಿಸುವ ಪ್ರಯತ್ನ ಮಾಡಲು ಸಾಧ್ಯವಾಗಲಿಲ್ಲ ಎನ್ನುವುದೂ ಸಹ ದಾಖಲಾಗಬೇಕಾದ ಸಂಗತಿ. ಅವರೊಬ್ಬ ಅನುಕರಿಸಲಾಗದ ಅಪ್ರತಿಮ ಕಲಾವಿದ ಎಂಬುದಂತೂ ಸತ್ಯ.

ಜನರ ಭಾವ ಭಿತ್ತಿಯಲ್ಲಿ ತಮ್ಮ ಅಮೋಘ ನಟನೆಯಿಂದ ಶಾಶ್ವತ ಬಿಂಬವಾಗಿ ನೆಲೆಗೊಂಡ ನರಸಿಂಹರಾಜು ಅವರ ಮಹತ್ವವನ್ನು ಮಹಾಕವಿ ಶೇಕ್ಸ್‌ಪಿಯರ್ ಮಾತುಗಳನ್ನು ಬಳಸಿ ಹೇಳುವುದಾದರೆ "ಈ ಅಭಿಜಾತ ಕಲಾವಿದನ ತಾಜಾತನವನ್ನು ನಿಸ್ತೇಜಗೊಳಿಸಲು, ಅವರು ಸೃಷ್ಟಿಸಿದ ಅನಂತ ವೈವಿಧ್ಯವನ್ನು ರಸಹೀನಗೊಳಿಸಲು ಕಾಲಕ್ಕೆ ಎಂದಿಗೂ ಸಾಧ್ಯವಾಗದು". ■



Downloaded From:www.kpscvaani.com





# ಚಾರ್ಲ್ಸ್ ಮಾರ್ಕ್ ಕೊರೆಯಾ

## ದೇಶದ ಒಬ್ಬ ಅದ್ವಿತೀಯ ವಾಸ್ತು ಶಿಲ್ಪಿ

**ಸ್ವಾತಂತ್ರ್ಯಾ ನಂತರದ ಹೆಸರಾಂತ ಕಟ್ಟಡ ವಿನ್ಯಾಸಕಾರರಲ್ಲಿ ಒಬ್ಬರಾದ ಚಾರ್ಲ್ಸ್ ಮಾರ್ಕ್ ಕೊರೆಯಾ ಅವರ ಸ್ಮರಣೆ ನಿಮಿತ್ತ.**

ಕೆ.ಎಸ್.ಸೋಮೇಶ್ವರ

ತನ್ನದೆ ಆದ ವಿಶೇಷ ವಿನ್ಯಾಸ ಹೊಂದಿರುವ ಬೆಂಗಳೂರು ಅರಮನೆ, ವಿಧಾನಸೌಧ ಇವುಗಳು ಈ ನಗರದ ಭೂ ಸೌಂದರ್ಯಕ್ಕೆ ಮುಕುಟಪ್ರಾಯವಾಗಿವೆ. ಇತ್ತೀಚಿನ ದಿನಗಳಲ್ಲಿ ಅಂದರೆ, ಸುಮಾರು ಎರಡು ಸಾವಿರದ ಇಸವಿಯಿಂದ ಗಗನ ಚುಂಬಿ ಕಟ್ಟಡಗಳು ಅನಿವಾರ್ಯವೆಂಬಂತೆ ವಿವಿಧ ವಿನ್ಯಾಸಗಳಲ್ಲಿ ಬೆಳೆದು ನಿಂತಿವೆ. ಆದರೆ, ಇವುಗಳಲ್ಲಿ ಬಹುತೇಕವು ನಗರದ ಭೂ ದೃಶ್ಯಕ್ಕೆ ಮೆರುಗು ನೀಡುವಂತಹುದಾಗಿಲ್ಲ.

ನಗರದ ಪ್ರಧಾನ ಅಂಚೆ ಕಛೇರಿಯ ಬಳಿ, ಅಂಬೇಡ್ಕರ್ ವೀಧಿಯಲ್ಲಿ ತಲೆಯೆತ್ತಿ ನಿಂತಿರುವ ವಿಶ್ವೇಶ್ವರಯ್ಯ ಬಹುಮಹಡಿ ಕಟ್ಟಡ ವಿನ್ಯಾಸದಲ್ಲಿ ವಿಶಿಷ್ಟವಾಗಿದ್ದು, ಸುತ್ತ ಮುತ್ತಲಿನಲ್ಲಿ ಇರುವ ಅಂಚೆ ಕಛೇರಿ, ವಿಧಾನಸೌಧ, ಉಚ್ಛ ನ್ಯಾಯಾಲಯದ ಕಟ್ಟಡ, ನಗರ ಕೇಂದ್ರ ಗ್ರಂಥಾಲಯ (ಅಠಾರ ಕಛೇರಿ) ಇವುಗಳಿಗೆ ಸರಿ ಸಮವೆಂಬಂತೆ ಕಾಣುತ್ತಿದೆ. ಇದರ



ವಿನ್ಯಾಸದ ರೂವಾರಿಯನ್ನು ನಾವು ಸದಾ ಸ್ಮರಿಸಬೇಕಾದ ವ್ಯಕ್ತಿ. ಅವರೇ ಚಾರ್ಲ್ಸ್ ಮಾರ್ಕ್ ಕೊರೆಯಾ. ಇವರನ್ನು ಸ್ವಾತಂತ್ರ್ಯಾ ನಂತರದ ಕಟ್ಟಡ ವಿನ್ಯಾಸಕಾರರಲ್ಲಿ ಒಬ್ಬ ಹೊಸತನದ ಚಿಂತಕ ಎನ್ನಬಹುದಾಗಿದೆ. ಇವರು ಸಿದ್ಧಪಡಿಸಿದ ಕಟ್ಟಡಗಳಲ್ಲಿ ಅವರದೇ ಆದ ವಿಶೇಷ ವಿನ್ಯಾಸತೆ ಇರುತ್ತದೆ. ಅದರಲ್ಲಿ ಬಹು ಮುಖ್ಯವಾದುದು ಪರಿಸರ ಸ್ನೇಹಿ ಕಟ್ಟಡವಾಗಿಸುವುದು.

ಚಾರ್ಲ್ಸ್ ಕೊರೆಯಾ ಅವರು ಸೆಪ್ಟೆಂಬರ್ 1 ರಂದು ಸಿಕಂದರಾಬಾದ್‌ನಲ್ಲಿ ಜನಿಸಿದರು. ಇವರು ದೇಶ ವಿದೇಶಗಳ ಹಲವಾರು ವಿಶ್ವ ವಿದ್ಯಾಲಯಗಳಲ್ಲಿ ವಾಸ್ತುಶಿಲ್ಪ ಶಾಸ್ತ್ರದ ಬೋಧಕರಾಗಿ ಕೆಲಸ ಮಾಡಿದ್ದಾರೆ. ಇವರ ಮುಡಿಗೆ ಸೇರಿರುವ ಗೌರವಗಳು ಅಪಾರ. Aga Khan Award, Premium Imperiale of Japan,



Downloaded From:www.kpscvaani.com



gold medal of UIA and RIBA, Royal Gold Medal of Royal Institute of Architecture, Britain ಇದರಲ್ಲಿ ಪ್ರಮುಖವಾದವು. ಇವರ ವಾಸ್ತು ಶಿಲ್ಪ ಸಂಸ್ಥೆ ಚಾರ್ಲ್ಸ್ ಕೊರೆಯಾ ಅಸೊಸಿಯೇಟ್ಸ್ ದೇಶ ವಿದೇಶಗಳಲ್ಲಿ ಒಂದು ದೊಡ್ಡ ಸ್ಥಾನ ಪಡೆದುಕೊಂಡಿದೆ. ರಾಷ್ಟ್ರದ ಹಲವು ರಾಜ್ಯಗಳ ಕಟ್ಟಡ ವಿನ್ಯಾಸ ಸಂಸ್ಥೆಗಳಲ್ಲಿ ಇವರ ಪರಿಶ್ರಮವಿದೆ. ಇವರಿಗೆ ನಾಡಿನ ಉನ್ನತ ನಾಗರಿಕ ಪ್ರಶಸ್ತಿಗಳಾದ ಪದ್ಮಶ್ರೀ (1972) ಮತ್ತು ಪದ್ಮವಿಭೂಷಣ (2006) ನೀಡಿ ಗೌರವಿಸಲಾಗಿದೆ.

ವಿನ್ಯಾಸಗಳ ಮೂಲಕ ಇವರು ಬೆಂಗಳೂರಿಗೆ ನೀಡಿರುವ ಕೊಡುಗೆ ಬಹಳಷ್ಟಿದೆ. ವಿಶ್ವೇಶ್ವರಯ್ಯ ಬಹುಮಹಡಿ ಕಟ್ಟಡವು 21 ಮಹಡಿಗಳಿದ್ದು ಅದರ ಎತ್ತರ 247 ಅಡಿಗಳು. ಇದರಲ್ಲಿ ಬಳಕೆಯಾಗಿರುವುದು ಫೈಬರ್ ಮಿಶ್ರಿತ ಕಾಂಕ್ರೀಟ್ (Glass fibre reinforced concrete - GRC). ಕಟ್ಟಡದ ವಿಶೇಷತೆಯೆಂದರೆ ಅದರ ಸಂಪೂರ್ಣ ಹೊರಮೈಗೆ ಯಾವುದೇ ಬಣ್ಣಗಳ ಲೇಪನವಿಲ್ಲ. ಬದಲಿಗೆ ಅದೊಂದು ಕಾಂಕ್ರಿಟ್ ಹೊರಮೈಯನ್ನು ಹೊಂದಿದೆ. ಕೊರೆಯಾರವರ ಕಟ್ಟಡ ವಿನ್ಯಾಸ ಅರಿಯಬೇಕಾದರೆ ಈ ಕಟ್ಟಡದ ಮಧ್ಯಭಾಗಕ್ಕೆ ಹೋಗಿ ನೋಡಬೇಕು. ಪ್ರತಿಯೊಂದು ಮಹಡಿಯ ಅಂಗಳವೂ ವಿಶಾಲವಾಗಿದ್ದು, ಪ್ರತಿ ಮಹಡಿಗೆ ಹೋಗಲು ಒಂದು ಭಾಗದಲ್ಲಿ ಅಗಲವಾದ ಸಣ್ಣ ಎತ್ತರದ ಮೆಟ್ಟಿಲುಗಳಿವೆ. ಇದೊಂದೇ ಸಾಕು ಈ ವಾಸ್ತುಶಿಲ್ಪಿಯ ಆಲೋಚನೆಗಳನ್ನು ಅರಿಯಲು.




ಇವರ ಪ್ರತಿ ಕಟ್ಟಡ ವಿನ್ಯಾಸದಲ್ಲೂ ಮೊದಲಿಗೆ ದೊಡ್ಡ ಅಂಗಳವಿರುತ್ತದೆ. ಇದೇ ವಿನ್ಯಾಸ ಕೋರಮಂಗಲದಲ್ಲಿರುವ ಇವರ ಮನೆಯಲ್ಲೂ ಕಾಣಬಹುದಾಗಿದೆ. ಇಂತಹುದೇ ವಿನ್ಯಾಸಗಳನ್ನು ನಗರದ ಇಂಡಿಯನ್ ಇನಿಸ್ಟಿಟ್ಯೂಟ್ ಆಫ್ ಸೈನ್ಸ್‌ನ ಜವಹರಲಾಲ್ ಸೆಂಟರ್‌ನಲ್ಲೂ ಕಾಣಬಹುದಾಗಿದೆ. ಇಲ್ಲಿ ವಿನ್ಯಾಸಗೊಂಡಿರುವ ಕಛೇರಿ, ಅತಿಥಿಗೃಹ ಎಲ್ಲದರಲ್ಲೂ ಅಂಗಳದ ವಿನ್ಯಾಸ ಇದ್ದೇ ಇದೆ. ಇಂತಹುದೇ ವಿನ್ಯಾಸದಲ್ಲಿ ರೂಪಿತವಾಗಿರುವ ಇನ್ನಷ್ಟು ಕಟ್ಟಡಗಳೆಂದರೆ ಜಕ್ಕೂರಿನಲ್ಲಿರುವ ಜವಹರಲಾಲ್ ನೆಹರೂ ಸೆಂಟರ್ ಫಾರ್ ಅಡ್ವಾನ್ಸ್ಡ ಸ್ಟಡೀಸ್, ಜೀವನ್‌ಬೀಮಾನಗರದಲ್ಲಿನ ಟೌನ್ ಶಿಪ್‌ಗಳಲ್ಲೂ ಕಾಣಬಹುದಾಗಿದೆ. ಇಂತಹ ವಾಸಗೃಹ ಸಂಕೀರ್ಣಗಳಲ್ಲಿ ಕಟ್ಟಡದ ಹಿಂಭಾಗದಲ್ಲೂ ತೆರೆದ ಅಂಗಳವಿದ್ದು, ಅಲ್ಲಿ ವಾಸಿಸುವವರಿಗೆ ಹೆಚ್ಚಿನ ಗಾಳಿ ಬೆಳಕು ದೊರೆಯುತ್ತದೆ. ಇವುಗಳಲ್ಲದೆ ಇವರು ವಿನ್ಯಾಸ ಮಾಡಿರುವ ಕಟ್ಟಡಗಳೆಂದರೆ ಬಳ್ಳಾರಿ ರಸ್ತೆಯಲ್ಲಿರುವ ಹೆಚ್.ಎಮ್.ಟಿ ಕಟ್ಟಡ, ಬಾಗಲಕೋಟೆಯ ನವನಗರ ಕೂಡ ಸೇರಿದೆ.

ಹಾಗಾಗಿಯೇ ಚಾರ್ಲ್ಸ್ ಕೊರೆಯಾರವರ ಕಟ್ಟಡದ ವಾಸ್ತುವಿನ ಕಲ್ಪನೆ ಒಂದು ವಿನೂತನವೆನ್ನಬಹುದು. ಅದು 'ತೆರೆದ ಆಕಾಶ' ಅಂದರೆ 'Open Sky'. ಅವರ ಮಾತುಗಳಲ್ಲೇ ಹೇಳಬೇಕೆಂದರೆ "ನಾವು ವಾಸಿಸುವ ಸ್ಥಳ ಯಾವಾಗಲೂ ಆಕಾಶಕ್ಕೆ ತೆರೆದುಕೊಂಡಿರಬೇಕು. ಆಗಲೇ, ಕಟ್ಟಡಗಳು ನೈಸರ್ಗಿಕ ಗಾಳಿ ಮತ್ತು ಬೆಳಕಿನಿಂದ ಉಸಿರಾಡುವುದು". ಇವರು ತಮ್ಮ ವಿನ್ಯಾಸಗಳಲ್ಲಿ ಹವಾಮಾನದ ಪರಿಕಲ್ಪನೆಗಳಿಗೆ ಹೆಚ್ಚು ಒತ್ತುಕೊಡುತಿದ್ದರು. ಅಂದಿನ ಕಾಲದಲ್ಲಿ ಕಟ್ಟಡ ವಿನ್ಯಾಸದಲ್ಲಿ ಪರಿಸರ ಕಾಳಜಿ ಮಾಡುವವರಲ್ಲಿ ವಿಶ್ವದ ಕೆಲವೇ ಕೆಲವು ವಾಸ್ತುಶಿಲ್ಪಿಗಳಲ್ಲಿ ಇವರೊಬ್ಬರು ಎಂದರೆ ಆಶ್ಚರ್ಯವಿಲ್ಲ.



Downloaded From:www.kpscvaani.com



**ಇವರ 'ಹೆಗ್ಗುರುತು' ಕಟ್ಟಡಗಳು**

- ಸಬರಮತಿ, ಗುಜರಾತಿನಲ್ಲಿನ ಗಾಂಧಿ ಮೆಮೊರಿಯಲ್ ಕಟ್ಟಡ
- ಜೈ ಪುರದ ಜವಹರಲಾಲ್ ಕಲಾ ಕೇಂದ್ರ
- ನವ ದೆಹಲಿಯ ಬ್ರಿಟಿಷ್ ಕೌನ್ಸಿಲ್
- ಕೊಲ್ಕತ್ತಾದ ಸಾಲ್ಟ್ ಲೇಕ್ ಸಿಟಿ
- ಅಮೆರಿಕದ ಮೆಕ್ ಗ್ರೋವರ್ ಇನ್ಸ್ಟಿಟ್ಯೂಟ್ ಅಫ್ ಬ್ರೈನ್ ರೀಸರ್ಚ್ ಎಂ.ಐ.ಟಿ
- ಟೊರಾಂಟೊ, ಕೆನಡದಲ್ಲಿನ ಇಸ್ಮೇಲಿ ಸೆಂಟರ್
- ಭೂಪಾಲ್ ಮಧ್ಯ ಪ್ರದೇಶದ ವಿಧಾನ ಭವನ
- ನವ ಮುಂಬೈನ ಉಪನಗರ ವಿನ್ಯಾಸ
- ನ್ಯೂಯಾರ್ಕ್‌ನ ವಿಶ್ವಸಂಸ್ಥೆಯಲ್ಲಿನ ಭಾರತೀಯ ರಾಯಭಾರ ಕಟ್ಟಡ
- ದೆಹಲಿಯ ಜೀವ ವಿಮಾ ಸಂಸ್ಥೆಯ ಕಟ್ಟಡ.

"ವಾಸ್ತುಶಿಲ್ಪವನ್ನು ನಾವು ಕಲಿಸಬಹುದೇ ಎಂಬ ಬಗ್ಗೆ ನಮಗೆ ತಿಳಿದಿಲ್ಲ. ಆದರೆ ಅದನ್ನು ಕಲಿಯಬಹುದು ಎಂದು ನಾವು ಅರಿತಿದ್ದೇವೆ. ಕಲಿಕೆ ಎನ್ನುವ ಪ್ರಕ್ರಿಯೆ ನಮ್ಮ ಮನಸ್ಸಿನ ಪರಿಸ್ಥಿತಿಯನ್ನು ಅವಲಂಬಿಸಿದೆ.

ಹೀಗಾಗಿ, ಸಾಂಪ್ರದಾಯಿಕವಾದ ಗುರು-ಚೇಲಾ (ಶಿಷ್ಯ) ಸಂಬಂಧ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವುದು ಶಿಷ್ಯನಿಗೆ ತನ್ನ ಗುರುವಿನ ಜ್ಞಾನದ ಬಗ್ಗೆ ಇರುವ ಪ್ರಶ್ನಾತೀತ ನಂಬಿಕೆಯಿಂದ. ಅವನ ಮನಸ್ಸು ಮತ್ತು ಸಂಪೂರ್ಣ ಅಸ್ತಿತ್ವವೇ ಮಸಿ ಹೀರುವ ಕಾಗದದಂತೆ ಜ್ಞಾನವನ್ನು ಹೀರಿಕೊಳ್ಳಲು ಉತ್ಸುಕವಾಗಿರುತ್ತದೆ.

ನಗರಗಳು ಯಾವಾಗಲೂ ನಾಗರೀಕತೆಯನ್ನು ಗುರುತಿಸುವ ವಿಶಿಷ್ಟ ಸೂಚಕಗಳಾಗಿವೆ. ಕೆಟ್ಟ ಸಮಯದಲ್ಲಿ ಅತ್ಯುತ್ತಮ ಸಂಗೀತ, ಚಿತ್ರಕಲೆ ಹಾಗೂ ಕಾವ್ಯ ಹುಟ್ಟಿದ್ದು ಉಂಟು. ಆದರೆ ಮಹಾನ್ ನಗರಗಳು ಹಾಗೂ ವಾಸ್ತುಶಿಲ್ಪ ಹುಟ್ಟಿಲ್ಲ. ಏಕೆಂದರೆ ಕಟ್ಟಡ ನಿರ್ಮಾಣಕ್ಕೆ ಎರಡು ಅಗತ್ಯ ಷರತ್ತುಗಳಿವೆ. ಅಧಿಕಾರ ಮತ್ತು ನಿರ್ಧಾರ ಕೈಗೊಳ್ಳುವುದರ ಮೇಲೆ ಕೇಂದ್ರೀಕೃತವಾಗಿರುವ ಆರ್ಥಿಕತೆಯು, ದೂರದೃಷ್ಟಿಯುಳ್ಳ ನಾಯಕರು, ಅಭಿರುಚಿ ಹಾಗೂ ಸಂಪನ್ಮೂಲಗಳನ್ನು ಬುದ್ಧಿವಂತಿಕೆಯಿಂದ ಬಳಕೆ ಮಾಡುವ ರಾಜಕೀಯ ಇಚ್ಛಾಶಕ್ತಿ".

–ಚಾರ್ಲ್ಸ್ ಮಾರ್ಕ್ ಕೊರೆಯಾ

ಇವರ ವಿಶೇಷತೆಯೇ ಪ್ರಕೃತಿಯೊಂದಿಗೆ ವಾಸ್ತು ವಿನ್ಯಾಸದ ಅದ್ಭುತಗಳನ್ನು ಸಿದ್ಧ ಮಾಡುವುದಾಗಿತ್ತು. ಹಿಂದೆಯೇ ಹೇಳಿದಂತೆ ಇವರು ಯಾವುದೇ ಕಟ್ಟಡ ವಿನ್ಯಾಸದಲ್ಲಿ ತೆರೆದ ಅಂಗಳ ಇರಲೇ ಬೇಕೆನ್ನುವ ಧೃಡತೆಯುಳ್ಳವರು. ಅದೇ ರೀತಿ ವಾಸ್ತು ವಿನ್ಯಾಸದ ಜೊತೆಗೆ ಆದಷ್ಟೂ ಕಡಿಮೆ ವೆಚ್ಚದ ಕಟ್ಟಡಗಳ ನಿರ್ಮಾಣ ಕಡ್ಡಾಯ ಎಂಬ ತತ್ವ ಹೊಂದಿದ ಕೆಲವೇ ವಾಸ್ತು ವಿನ್ಯಾಸಕರಲ್ಲಿ ಇವರೊಬ್ಬರಾಗಿದ್ದರು.


ಇವರ ಬಳಿ ವಾಸ್ತು ಶಾಸ್ತ್ರದ ಆಳ ಅಗಲಗಳನ್ನು ಕಲಿತ ಅನೇಕ ಶಿಷ್ಯರು ಹೇಳುವಂತೆ ಇವರೊಬ್ಬ ಸದಾಕಾಲ ಹೊಸತನ್ನು ಯೋಚಿಸುವ, ವಿನ್ಯಾಸಗಳಲ್ಲಿ ವಿಭಿನ್ನತೆಯಿರಬೇಕು ಎನ್ನುವ ಮತ್ತು ಯಾವುದೇ ರೀತಿಯಲ್ಲೂ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳಬಾರದು ಎಂಬ ಕೌಶಲತೆ ಅವರಲ್ಲಿತ್ತು. ನಮ್ಮ ದೇಶದಲ್ಲಿ ಇವರು ರಚಿಸಿದ ಯಾವುದೇ ಕಟ್ಟಡ ವಿನ್ಯಾಸವಿರಲಿ, ಅದು ಇಲ್ಲಿನ ನೆಲದ ಸಂಸ್ಕೃತಿಗೆ ಹೊಂದುವಂತಿರುತ್ತದೆ. 1984 ರಲ್ಲಿ ಮುಂಬೈನಲ್ಲಿ ಸ್ಥಾಪಿತವಾದ Urban Design Research Insitutute ಇವರ ಕನಸಿನ ಕೂಸಾಗಿದೆ.

ಕೊರೆಯಾರವರ ಕಟ್ಟಡಗಳ ವಿನ್ಯಾಸದ ಒಂದು ವಿಶೇಷತೆಯೆಂದರೆ ಅವರು ನಿರ್ಮಿಸಿದ ಯಾವುದೇ ಕಟ್ಟಡಗಳಿಗೆ ಗಾಜಿನ ಹೊದಿಕೆ ಇರುತ್ತಿರಲಿಲ್ಲ. ಇದಕ್ಕೆ ಅವರು ಕೊಡುತ್ತಿದ್ದ ಕಾರಣ ನಮ್ಮ ಭಾರತೀಯ ನಗರಗಳ ಹವಾಮಾನದ ಪರಿಸ್ಥಿತಿಯನ್ನು ಅವಲೋಕಿಸಿದರೆ ಗಾಜಿನ ಹೊದಿಕೆ ಇರುವ ಕಟ್ಟಡಗಳು ಅಲ್ಲಿನ ವಾತಾವರಣದ ಉಷ್ಣತೆಯನ್ನು ಹೆಚ್ಚಿಸುತ್ತವೆ. ಇವರು ವಿನ್ಯಾಸ ಮಾಡಿದ ಯಾವುದೇ ಕಟ್ಟಡಗಳನ್ನು ಆ ನಗರಗಳ ಒಂದು 'ಹೆಗ್ಗುರುತು' ಅಂದರೆ Land Mark ಎನ್ನಬಹುದಾಗಿದೆ. ಇವರನ್ನು 'Man of Land marks' ಎಂದೇ ಕರೆಯುತ್ತಿದ್ದರು. ಜೂನ್ 16, 2015ರಲ್ಲಿ ಇವರು ಮರಣ ಹೊಂದಿದರು.

(ಈ ಮೇಲಿನ ಮಾಹಿತಿಯನ್ನು ಗ್ರೇಟ್ ಸಿಟಿ ಎ ಟೆರಿಬಲ್ ಪ್ಲೇಸ್ : ದಿ ಬುಕ್ ಸೊಸೈಟಿ ಆಫ್ ಇಂಡಿಯಾ, 1985 ಇದರಿಂದ ಪಡೆಯಲಾಗಿದೆ)


Downloaded From:www.kpscvaani.com

# ಪದಬಂಧ-46



ವಿದ್ಯಾ ಎ. ಹಾಲಭಾವಿ

## ಎಡದಿಂದ ಬಲಕ್ಕೆ

2. ಭಾರತ ದೇಶವನ್ನು ಹೀಗೂ ಕರೆಯುತ್ತಾರೆ (5)
4. ಜಲಪಾತವಿಲ್ಲಿ ಉಲ್ಟಾ ಕಾಣುತ್ತಿದೆ (2)
6. ಮಜದಲ್ಲಿರುವ ಚಕ್ರವರ್ತಿ! (4)
9. ಆ ದಿವಸ ತಂದಿರುವ ಕಾಳುಕಡಿ (3)
11. ಇವರು ಸರ್ಕಾರದ ಯೋಜನೆಗಳಿಗೆ ಅರ್ಹರಾದವರು (5)
12. ಬೇಸರ ಕಳೆಯಲು ನಾವು ಹೀಗೂ ಪ್ರಯಾಣಿಸುತ್ತೇವೆ (3)
14. ಬೆಟ್ಟದ ಮೇಲಿರುವ ಕೋಟೆ (4)
16. ಶ್ರದ್ಧೆಯಿಲ್ಲಿ ತಿರುವುಮುರುವಾಗಿದೆ (2)
18. ದಾರಿಯಲ್ಲಿ ವಹಿಸಿಕೊಂಡಿರುವ ಹೊಣೆಗಾರಿಕೆ (5)

## ಮೇಲಿಂದ ಕೆಳಕ್ಕೆ

1. ಮತಿ ಇಟ್ಟುಕೊಂಡು ನೀಡಿದ ಒಪ್ಪಿಗೆ! (4)
2. ಕತ್ತೆ ಉಲ್ಟಾ ನಿಂತಿದೆಯಲ್ಲಾ! (3)
3. ರೈಲುಬಂಡಿಯಲ್ಲನ ಬೋಗಿ (2)
5. ಧಾವಂತಕ್ಕೊಂದು ಪರ್ಯಾಯ ಪದ (4)
7. ಜನಪ್ರಿಯನಾದವನು ರಾಗಿ ಹಿಡಿದಿದ್ದಾನಲ್ಲಾ (5)
8. ಪದ ಹೇಳಿ ಪಡೆದ ಡಿಗ್ರಿ (3)
10. ಸ್ವಂತದ ಬಗ್ಗೆ ಹೆಮ್ಮೆ ಪಡುವುದು (4)
11. ಬೆಳೆ ಇಲ್ಲಿದೆ (3)
13. ಗಣಿತದಲ್ಲಿ ವರ್ಗ ಸಂಖ್ಯೆ ಬರಲು ಕಾರಣವಾದ ಮೂಲಸಂಖ್ಯೆ (4)
15. ದುರಸ್ತಿಯನ್ನು ಹೀಗೆನ್ನಿ (3)
17. ಜನನಿ ನುಡಿದಿರುವ ಸತ್ಯ (2)

**ಉತ್ತರ**

**ಮೇಲಿಂದ ಕೆಳಕ್ಕೆ**
1. ಅನುಮತಿ 2. ಭಸರಾ 3. ಡಬ್ಬಿ 5. ಅವಸರ 7. ಜನಾನುರಾಗಿ 8. ಪದವಿ 10. ಸ್ವಪ್ರತಿಷ್ಠೆ 11. ಫಸಲು 13. ವರ್ಗಮೂಲ 15. ರಿಪೇರಿ 17. ನಿಜ

**ಎಡದಿಂದ ಬಲಕ್ಕೆ**
1. ಭರತಖಂಡ 4. ಬ್ಧಿಅ 6. ಮಹಾರಾಜ 9. ದವಸ 11. ಫಲಾನುಭವಿ 12.ಪ್ರವಾಸ 14. ಗಿರಿದುರ್ಗ 16. ಧ್ಧೆಶ್ರ 18. ಜವಾಬುದಾರಿ

**–: ಸೂಚನೆ :–**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Hemanth M Nimbalkar, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com



ಆಗಸ್ಟ್ 20 ರಂದು ಸದ್ಭಾವನಾ ದಿನಾಚರಣೆಯ ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಪ್ರತಿಜ್ಞಾವಿಧಿಯನ್ನು ಬೋಧಿಸುತ್ತಿರುವುದು.



ಆಗಸ್ಟ್ 20 ರಂದು ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜು ಅರಸು ಅವರ ಜನ್ಮ ದಿನಾಚರಣೆ ಪ್ರಯುಕ್ತ ಮುಖ್ಯಮಂತ್ರಿ ಅವರು ವಿಧಾನಸೌಧದ ಆವರಣದಲ್ಲಿ ಇರುವ ಅರಸು ಅವರ ಪ್ರತಿಮೆ ಬಳಿ ಇರಿಸಲಾಗಿದ್ದ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುತ್ತಿರುವುದು. ಈ ಸಂದರ್ಭದಲ್ಲಿ ಇಂಧನ ಸಚಿವರಾದ ಕೆ.ಜೆ.ಜಾರ್ಜ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಚಿವರಾದ ಶಿವರಾಜ್ ತಂಗಡಗಿ ಹಾಗೂ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

Downloaded From:www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




Downloaded From:www.kpscvaani.com